Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–17 ಸಂಚಿಕೆ–40 ಅಕ್ಟೋಬರ್ 2–8, 2023 ಪುಟ 16 ರೂ. 10/–
Volume-17 Issue-40 October 2-8, 2023 Pages:16 Price: 10/-




ನೈಸ್ ಯೋಜನೆಗೆ 27 ವರ್ಷಗಳು: ಸಹಸ್ರಾರು ಕೋಟಿ ಹಗರಣ



ಹೋರಾಟದ ರಣಕಹಳೆ

ಮಂಡ್ಯ : ಬಿಜೆಪಿ-ಜೆಡಿಎಸ್ ಮೈತ್ರಿಯ ಅಪಾಯಗಳು





ಹಸಿರು ಕ್ರಾಂತಿಯ ಪಿತಾಮಹ ಎಂ.ಎಸ್.ಸ್ವಾಮಿನಾಥನ್ ಇನ್ನಿಲ್ಲ

ಸಂಸತ್ತಿನಲ್ಲಿ ದ್ವೇಷ ಭಾಷಣ

'ಸನಾತನ ಧರ್ಮ'ದ ಮೇಲೆ ದಾಳಿ ನಡೆಯುತ್ತಿದೆ ಎಂದೂ ಮತ್ತು ಈ ದಾಳಿಯನ್ನು ಹಿಮ್ಮೆಟ್ಟಿಸಬೇಕೆಂದು ನಮ್ಮ ದೇಶದ ಪ್ರಧಾನ ಮಂತ್ರಿಗಳು ಸ್ವತಃ ತಾವೇ ಜನರಿಗೆ ಕರೆ ನೀಡಿದ್ದಾರೆ. ತಮಿಳುನಾಡು ಸಚಿವ ಉದಯನಿಧಿ ಸ್ಟಾಲಿನ್ ಇತ್ತೀಚೆಗೆ 'ಸನಾತನ ಧರ್ಮ'ಕ್ಕೆ ಸಂಪೂರ್ಣ ವಿರೋಧ ವ್ಯಕ್ತಪಡಿಸಿದ ಭಾಷಣವನ್ನು ಆಧರಿಸಿ ಮೋದಿ ತಮ್ಮ ಪ್ರತಿದಾಳಿ ನಡೆಸಿದರು. 'ಸನಾತನ ಧರ್ಮ' ಎಂದರೇನು ಎಂದು ಮೋದಿ ಹೇಳಿ, ಅದನ್ನು ರಕ್ಷಿಸಿ ಎಂದು ಹೇಳಿದ್ದರೆ ಅದರಲ್ಲಿ ಪ್ರಾಮಾಣಿಕತೆ ಇದೆ ಎಂಬುದನ್ನು ಒಪ್ಪಿಕೊಳ್ಳಬಹುದಿತ್ತು. ಆದರೆ 'ಸನಾತನ ಧರ್ಮ' ಎಂದರೇನು ಎಂಬುದನ್ನೇ ಮೋದಿ ಹೇಳಲಿಲ್ಲ. ಉದಯ ನಿಧಿ ಸ್ಟಾಲಿನ್ ಹಾಗಲ್ಲ. ಇಂದಿಗೂ ಸಮಾಜದಲ್ಲಿ ನಾನಾ ರೀತಿಯ ತಾರತಮ್ಯಕ್ಕೆ ಮೂಲವಾಗಿರುವ 'ಸನಾತನ ಧರ್ಮ'ವನ್ನು ವಿರೋಧಿಸಬೇಕು ಎಂದು ಸ್ಪಷ್ಟಪಡಿಸಿದರು. ಮೊದಲು ನಾವಿದನ್ನು ಗಮನಿಸಬೇಕು.

ಸನಾತನ ಭಾವನೆಗಳು ಮತ್ತು ಸನಾತನ ಧರ್ಮ

ಎಂ.ವಿ.ಎಸ್. ಶರ್ಮಾ

'ಸನಾತನ' ಎಂಬ ಪದಕ್ಕೆ, ಶಬ್ದಕೋಶದಲ್ಲಿ ಹಳೆಯದು, ಪುರಾತನವಾದದ್ದು ಇತ್ಯಾದಿ ಅರ್ಥಗಳಿವೆ. ಅನಾದಿ ಕಾಲದ ಸಮಾಜದಲ್ಲಿ ಹರಡಿದ್ದ ಭಾವನೆಗಳನ್ನು, ಸಿದ್ಧಾಂತಗಳನ್ನು, ಸಂಪ್ರದಾಯಗಳನ್ನು, ನಂಬಿಕೆಗಳನ್ನು, ಆಚಾರಗಳನ್ನು ಎಲ್ಲವನ್ನೂ 'ಸನಾತನ'ವೆಂದು ಪರಿಗಣಿಸುತ್ತೇವೆ. ಪ್ರಾಚೀನ ಕಾಲದಲ್ಲಿ ಶ್ರೇಷ್ಠವಾಗಿದ್ದ ಎಲ್ಲಾ ಭಾವನೆಗಳು ಈಗ ಉತ್ತಮವಾಗಿಲ್ಲದಿರಬಹುದು. ಅವುಗಳಲ್ಲಿ ಕೆಲವು ಇನ್ನಷ್ಟು ಉತ್ತಮವಾಗಿರಬಹುದು. ಹಾಗಾಗಿ "ಸನಾತನ" ಪದವನ್ನು ಬಳಸಿದಾಗ ಅದು ಶ್ರೇಷ್ಠವಾಗಿಯೇ ಇರಬೇಕು ಎಂಬ ನಿಯಮವಿಲ್ಲ. ನರಬಲಿ, ಸತಿ ಸಹಗಮನ, ದೇವದಾಸಿ ಪದ್ಧತಿ, ಅಸ್ಪೃಶ್ಯತೆಗಳು ಶ್ರೇಷ್ಠ ಎಂದು ಯಾರಾದರೂ ಹೇಳುತ್ತಾರೆಯೇ? ನಮ್ಮ ಪ್ರಧಾನಿ ಮೋದಿಯವರು ಹಾಗೆ ಹೇಳಬಹುದೇ?

"ರಾಜ್ಯ ವೀರ ಭೋಜ್ಯ" ಎಂದು ಹಿಂದಿನ ಕಾಲದಲ್ಲಿ ಹೇಳುತ್ತಿದ್ದರು. (ಅದನ್ನು ಆಗಿನ ಸಾಮಾನ್ಯ ಪ್ರಜೆಗಳು ಎಲ್ಲರೂ ಒಪ್ಪಿಕೊಳ್ಳುತ್ತಾರೆಯೇ ಎಂದರೆ ಹೌದು ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಛತ್ರಪತಿ ಶಿವಾಜಿಯನ್ನು ಹಿಂದೂ ಧರ್ಮದ ಸಂರಕ್ಷಕ ಎಂದು ಆರ್‌ಎಸ್‌ಎಸ್ ನವರು ಹೊಗಳುತ್ತಾರೆ. ಆದರೆ, ಅದೇ ಶಿವಾಜಿಯು ತನ್ನ ಪರಾಕ್ರಮದಿಂದ (ತನ್ನ ಸೈನ್ಯದ ಪರಾಕ್ರಮವನ್ನು ಕೂಡ ಸೇರಿಸಿ ಓದಿಕೊಳ್ಳಿ). ಮರಾಠ ರಾಜ್ಯದ ಸಿಂಹಾಸನ ಏರುವಾಗ ಪಟ್ಟಾಭಿಷೇಕವಾಗಬೇಕೆಂದು ಬಯಸಿದರೆ, ಆ ಪಟ್ಟಾಭಿಷೇಕದ ಧಾರ್ಮಿಕ ಸಮಾರಂಭವನ್ನು ಮಾಡಲು ಯಾವ ಬ್ರಾಹ್ಮಣನೂ ಒಪ್ಪುವುದಿಲ್ಲ. ಕಾರಣ ಶಿವಾಜಿ ಶೂದ್ರ ಜಾತಿಗೆ ಸೇರಿದವನಾಗಿದ್ದನು.

ಕೊನೆಗೆ ಶಿವಾಜಿ ಕಾಶಿಯಿಂದ ಗಾಗಾಭಟ್ಟ ಎಂಬ ಒಬ್ಬ ಬ್ರಾಹ್ಮಣನನ್ನು ಕರೆತಂದು, ಸಾಕಷ್ಟು ದಕ್ಷಿಣೆ ಕೊಟ್ಟರೆ, ಆಗ ಕೂಡ ಆ ಬ್ರಾಹ್ಮಣ ತನ್ನ ಕಾಲಿನ ಬೆರಳಿನಿಂದ ಶಿವಾಜಿಯ ಹಣೆಗೆ ತಿಲಕವಿಡುತ್ತಾನೆ. ಇದು ಕಥೆಯಲ್ಲ, ಇತಿಹಾಸ. ಅದನ್ನು ಬರೆದಿದ್ದಕ್ಕಾಗಿ ಗೋವಿಂದ ಪನ್ಸಾರೆಯನ್ನು ಬಲಪಂಥೀಯ ಹಿಂದುತ್ವವಾದಿ ಹಂತಕರು ಗುಂಡು ಹೊಡೆದು ಕೊಂದರು. (ಹೀಗೆ ಮಾಡುವ ಮೂಲಕ ಇದೇ ನಿಜವಾದ ಇತಿಹಾಸ ಎಂದು ಒಪ್ಪಿಕೊಂಡರು).

ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ರಾಜ್ಯ ವೀರ ಭೋಜ್ಯ ಎಂದು ಹೇಳಿದನೆಂದು ಹೇಳಲಾಗಿದೆ. ಮತ್ತು ಶ್ರೀಕೃಷ್ಣನು ಹೇಳಿದ ಧರ್ಮವನ್ನು ಪಾಲಿಸಿ ರಾಜ್ಯವನ್ನು ಗೆದ್ದ ಶಿವಾಜಿಗೆ ಬ್ರಾಹ್ಮಣರು ಏಕೆ ಪಟ್ಟಾಭಿಷೇಕ ಮಾಡಲಿಲ್ಲ? ಆ ಬ್ರಾಹ್ಮಣರು ಸನಾತನ ಧರ್ಮವನ್ನು ಅನುಸರಿಸುತ್ತಾರೆಯೇ? ಅಥವಾ ಶಿವಾಜಿ ಪಾಲಿಸುವರೇ? ಸನಾತನ ಧರ್ಮದ ಪ್ರಕಾರ ಕ್ಷತ್ರಿಯರೇ ರಾಜರಾಗಿ ಆಳಬೇಕು. ಹಾಗಾಗಿ ಬ್ರಾಹ್ಮಣರು ಹಾಗೆ ವರ್ತಿಸುತ್ತಾರೆ ಎಂದು ವಾದಿಸಿದರೆ, ಶಿವಾಜಿ ಸನಾತನ ಧರ್ಮವನ್ನು ಧಿಕ್ಕರಿಸಿದ್ದಾರೆ. ಮತ್ತು ಸನಾತನ ಧರ್ಮವನ್ನು ಧಿಕ್ಕರಿಸಿದ ಶಿವಾಜಿ ಅವರಿಗೆ ಏಕೆ ಹೀರೋ ಆದರು ಎಂದು ಆರ್.ಎಸ್.ಎಸ್. ಹೇಳಬೇಕು? ಈ ಪ್ರಸಂಗದಲ್ಲಿ ಉದಯನಿಧಿ ಸ್ಟಾಲಿನ್ ವಿಲನ್ ಆದದ್ದೇಕೆ?

ಮಾನವ ಸಮಾಜ ನಿರಂತರವಾಗಿ ಸುಧಾರಣೆಗೊಳ್ಳುತ್ತಾ ಮುನ್ನಡೆಯುತ್ತಿದೆ ಎಂದು ಹೇಳಬಹುದು. ಪ್ರತಿ ಹಂತದಲ್ಲಿ, ಮಾನವರು ಕೆಲವು ಸಂಪ್ರದಾಯಗಳು, ಪದ್ಧತಿಗಳು ಮತ್ತು ನಂಬಿಕೆಗಳನ್ನು ರೂಪಿಸಿ, ರೂಢಿಸಿಕೊಳ್ಳುತ್ತಾರೆ. ಒಂದಷ್ಟು ವರ್ಷಗಳಲ್ಲಿ, ಅಂತಹ ಕೆಲವು ಸಂಪ್ರದಾಯಗಳು ಸಮಾಜದ ಪ್ರಗತಿಗೆ ಅಡ್ಡಿಯಾಗುತ್ತವೆ. ಕೆಲವು ಪದ್ಧತಿಗಳನ್ನು ದುರ್ಗುಣಗಳೆಂದು ಪರಿಗಣಿಸಲಾಗುತ್ತದೆ. ಕೆಲವು ನಂಬಿಕೆಗಳು ಮೂಢನಂಬಿಕೆಗಳಾಗುತ್ತವೆ.

ಈ ಮೂಲಕ ಸಮಾಜದ ಪ್ರಗತಿಗೆ ಅಡ್ಡಿಯಾಗಿರುವ ಸಂಗತಿಗಳನ್ನು ತಿರಸ್ಕರಿಸಿ ಹೊಸ ಸಂಪ್ರದಾಯ, ಹೊಸ ಆಚಾರ-ವಿಚಾರಗಳನ್ನು ಮನುಷ್ಯರು ಹುಟ್ಟು ಹಾಕುತ್ತಾರೆ.

ಅದೇ ಸಮಯದಲ್ಲಿ ಸಮಾಜ ಎಷ್ಟೇ ಬದಲಾದರೂ ಕೆಲವು ಆದರ್ಶಗಳು ಮತ್ತು ಸಂಪ್ರದಾಯಗಳು ತಮ್ಮ ಮೌಲ್ಯವನ್ನು ಕಳೆದುಕೊಳ್ಳುವುದಿಲ್ಲ. ಅತ್ಯಂತ ಪುರಾತನವಾದ ಶಾಂತಿ ಮಂತ್ರವು ಹೀಗಿದೆ:

'ಓಂ ಸಹನಾವವತು ಸಹನೌಭುನಕ್ತು
ಸಹವೀರ್ಯಂ ಕರವಾವಹೈ
ತೇಜಸ್ವಿನಾ ವದೀತಮಸ್ತು
ಮಾವಿದ್ವಿಶಾವಹೈ
ಓಂ ಶಾಂತಿಃ ಶಾಂತಿಃ ಶಾಂತಿಃ'

ಎಂದರೆ 'ನಾವೆಲ್ಲರೂ ಒಟ್ಟಿಗೆ ಬಾಳೋಣ, ಒಟ್ಟಿಗೆ ಕಲಿಯೋಣ, ಒಟ್ಟಿಗೆ ನಮ್ಮ ಶಕ್ತಿಯನ್ನು ಬೆಳೆಸಿಕೊಳ್ಳೋಣ, ನಮ್ಮ ನಡುವೆ ವೈರತ್ವ ಬೇಡ' ಎಂಬುದು ಇದರರ್ಥ.

ಸರ್ವೇ ಭವಂತು ಸುಖಿನ: ಎಂದರೆ ಎಲ್ಲರೂ ಸುಖವಾಗಿರಬೇಕು

'ಸರ್ವೇ ಭದ್ರಾಣಿ ಪಶ್ಯಂತು'- ಎಂದರೆ 'ಎಲ್ಲರೂ ಅದೃಷ್ಟವನ್ನು ನೋಡಬೇಕು' (ಎಲ್ಲರೂ ಒಳ್ಳೆಯದನ್ನು ಅನುಭವಿಸಬೇಕು).

'ಮಾ ಕಶ್ಚಿತ್ ದುಃಖ ಭಾಗ್ಭವೇತ್ '- ಎಂದರೆ 'ಯಾರೂ ದುಃಖಿತರಾಗಬಾರದು'.

'ಲೋಕ ಸಮಸ್ತಃ ಸುಖಿನೋ ಭವಂತು' ಎಂದರೆ, 'ಇಡೀ ಪ್ರಪಂಚದಲ್ಲಿ ಎಲ್ಲರೂ ಸುಖವಾಗಿರಲಿ"

'ವಸುಧೈವ ಕುಟುಂಬಕಂ' ಎಂದರೆ, ಜಗತ್ತೇ ಒಂದು ಕುಟುಂಬ ಎಂಬ ಭಾವನೆಯನ್ನು ಹೊಂದಿರುವುದು.

ಮೇಲಿನ ಎಲ್ಲವು ಸಾಂಪ್ರದಾಯಿಕ ಭಾವನೆಗಳು. ಆದರೆ ಉದಾತ್ತ ಭಾವನೆಗಳು.

'ಓಂ ಶಾಂತಿ: ಶಾಂತಿ: ಶಾಂತಿ:' ಎಂದು ಜಪಿಸುವುದಕ್ಕೆ ಮೋದಿಯವರಿಗೆ ಯಾವ ಅಭ್ಯಂತರವೂ ಇಲ್ಲ. ಇದನ್ನು 'ವಸುಧೈವ ಕುಟುಂಬಕಂ' ಎಂದೂ ಕೂಡಾ ಹೇಳುತ್ತಾರೆ. ಆದರೆ ಜಗತ್ತಿನಲ್ಲಿ ಇಂದು ನಡೆಯುತ್ತಿರುವ ಯುದ್ಧಗಳಿಗೆ, ಶಸ್ತ್ರಾಸ್ತ್ರಗಳ ಪೈಪೋಟಿ, ಮಿಲಿಟರಿ ಕೂಟಗಳ ರಚನೆಗೆ ನಾಯಕತ್ವ ನೀಡಿ ಮುನ್ನಡೆಸುತ್ತಿರುವ ಅಮೆರಿಕಕ್ಕೆ ಮೋದಿ ಸಂಪೂರ್ಣವಾಗಿ ವಿಧೇಯಕರಾಗಿರುತ್ತಾರೆ. "ಹೇಳಲಷ್ಟೇ ನೀತಿಗಳು." ಎಂಬ ಗಾದೆ ಮಾತು ಸುಮ್ಮನೆ ಬಂದಿದೆಯೇ?

ಸನಾತನ ಕಾಲದ ಭಾವನೆಗಳು, ಪದ್ಧತಿಗಳು ಮತ್ತು ಸಂಪ್ರದಾಯಗಳಲ್ಲಿ ಮುಂದುವರಿಯಲು ನಮಗೆ ಸಹಾಯ ಮಾಡುವ ವಿಷಯಗಳನ್ನು ಮುಂದುವರಿಸುತ್ತಾ, ಬದಲಾಗುತ್ತಿರುವ ಕಾಲಕ್ಕೆ ಅನುಗುಣವಾಗಿ ಹೊಸ ಭಾವನೆಗಳು ಮತ್ತು ಹೊಸ ಸಂಪ್ರದಾಯಗಳನ್ನು ನಾವು ಸ್ವಾಗತಿಸಬೇಕು.

ಸನಾತನ ಧರ್ಮದ ಕುರಿತು

ಇಲ್ಲಿಯವರೆಗೆ ಸನಾತನ ಭಾವನೆಗಳ ಕುರಿತು ಚರ್ಚಿಸಿದ್ದೇವೆ. ಈಗ ಸನಾತನ 'ಧರ್ಮ'ದ ಕುರಿತು ಚರ್ಚಿಸಬೇಕಿದೆ. ಈಗ ಮೋದಿಯವರ ಹೋರಾಟವೆಲ್ಲ ಆ ಸನಾತನ ಧರ್ಮದ ಬಗ್ಗೆಯೇ.

ಧರ್ಮ ಎಂದರೆ ಆ ಕಾಲದಲ್ಲಿ ಸಮಾಜದ ಮೇಲೆ ಆಧಿಪತ್ಯ ಸಾಧಿಸಿದವರು ತಮ್ಮ ಆಧಿಪತ್ಯವನ್ನು ಕಾಪಾಡಿಕೊಳ್ಳಲು ರೂಪಿಸಿದ ನಿಯಮಗಳು. ಆದಿಕಾಲದಲ್ಲಿ ದೊರೆಗಳು, ಆಳುವವರು ಎಂಬುದೇ



ಇರಲಿಲ್ಲ ಹಾಗಾಗಿ ಧರ್ಮ ಎಂಬುದೇ ಇಲ್ಲ. ಕೇವಲ ಕೆಲವು ನಂಬಿಕೆಗಳು, ಆಚಾರಗಳು ಮತ್ತು ಸಂಪ್ರದಾಯಗಳು ರೂಪುಗೊಂಡವು. ಸಮಾಜವು ವಿವಿಧ ಗುಂಪುಗಳಾಗಿ ವಿಭಜನೆಗೊಂಡು ಪ್ರಬಲ ಗುಂಪುಗಳು ರೂಪುಗೊಂಡ ನಂತರ, ಧರ್ಮದ ಪ್ರಸ್ತಾಪವು ಮುಂದಕ್ಕೆ ಬಂದಿತು.

ನಮ್ಮ ದೇಶದಲ್ಲಿ ಸಮಾಜವನ್ನು ವಿಭಾಗಗಳಾಗಿ ವಿಭಜಿಸುವುದು, ಜಾತಿ ವ್ಯವಸ್ಥೆಯ ರಚನೆಯು ಬಹುತೇಕ ಏಕಕಾಲದಲ್ಲಿ ಸಂಭವಿಸಿದೆ. ಬ್ರಾಹ್ಮಣ ಮತ್ತು ಕ್ಷತ್ರಿಯ ಜಾತಿಗಳು ತಮ್ಮ ಪ್ರಾಬಲ್ಯದೊಂದಿಗೆ ಪ್ರಬಲ ವರ್ಗವಾಗಿ ವರ್ತಿಸಲು ಆರಂಭಿಸಿದಾಗ, ಶೋಷಣೆಯ ಜೊತೆಗೆ ಜಾತಿ ವ್ಯವಸ್ಥೆಯೂ ಹರಡಿತು. ಕೆಳವರ್ಗದವರ ಮೇಲೆ ದಬ್ಬಾಳಿಕೆಯನ್ನೂ ಹೆಚ್ಚಿಸಿತು. ತಮ್ಮ ಆಧಿಪತ್ಯವನ್ನು ಕಾಪಾಡಿಕೊಳ್ಳುವ ಸಲುವಾಗಿ ಸ್ಮೃತಿಗಳು ಅಥವಾ ಧರ್ಮ ಶಾಸ್ತ್ರಗಳು ರಚಿಸಲ್ಪಟ್ಟವು. ಅದರಲ್ಲಿ ಹೇಳಿರುವ ಧರ್ಮವನ್ನು ಇಡೀ ಸಮಾಜ ಹೆಚ್ಚಿನದನ್ನು ಸ್ವೀಕರಿಸುವುದಿಲ್ಲ. ಕೆಲವೇ ಕೆಲವು ಪ್ರಬಲ ಜಾತಿಗಳು ತಮ್ಮ ಸಂಪತ್ತಿನ ಮೇಲಿನ ಹಿಡಿತದ ಮುಂದುವರಿಕೆಗಾಗಿ ಅವುಗಳನ್ನು ವಿನ್ಯಾಸಗೊಳಿಸಿದವು. ಹಾಗೆ ಬಂದವುಗಳೇ ಮನು ಸ್ಮೃತಿ, ನಾರದ ಸ್ಮೃತಿ, ಯಾಜ್ಞವಲ್ಕ್ಯ ಸ್ಮೃತಿ, ಕೌಟಿಲ್ಯನ ಅರ್ಥಶಾಸ್ತ್ರ ಇತ್ಯಾದಿ. ಇವೆಲ್ಲವನ್ನೂ ಅರಸರು ಮತ್ತು ಪುರೋಹಿತಶಾಹಿಗಳು ತಮಗಾಗಿ ಬರೆಸಿಕೊಂಡವು ಮತ್ತು ಬರೆದುಕೊಂಡವುಗಳು. ಆದರೆ, ಅವು ಜಾರಿಯಾಗಬೇಕಾದರೆ ಜನರ ಮೇಲೆ ಹೇರಬೇಕು. ಅದಕ್ಕೇ ಆ ಲೂಟಿಕೋರ ವರ್ಗದ ಧರ್ಮಕ್ಕೆ ಅಲ್ಲೊಂದು ಇಲ್ಲೊಂದು ಸ್ವಲ್ಪ ಒಳ್ಳೆಯ ಮಾತುಗಳ ಮುಸುಕು ಹಾಕಿ ಪ್ರಚಾರ ಮಾಡಿದರು. ಅದಕ್ಕಾಗಿ ಪುರಾಣಗಳನ್ನು ಬರೆದರು.

ಧರ್ಮವನ್ನು ರಕ್ಷಿಸುತ್ತೇನೆ ಎಂದು ಪ್ರತಿಯೊಬ್ಬ ರಾಜ ಅಧಿಕಾರ ಹಿಡಿಯುವಾಗ ಪ್ರಮಾಣ ಮಾಡಬೇಕು (ಈಗ ಅಧಿಕಾರ ಬೇಕೆಂದರೆ ಚುನಾವಣೆಯಲ್ಲಿ ಗೆದ್ದು 'ನಾನು ಸಂವಿಧಾನವನ್ನು ಪಾಲಿಸುತ್ತೇನೆ' ಎಂದು ಪ್ರಮಾಣ ಮಾಡಿದಂತೆ). ಧರ್ಮವನ್ನು ಎತ್ತಿಹಿಡಿಯಲು ವಿಫಲರಾದ ರಾಜನನ್ನು ತೆಗೆದುಹಾಕುವ ಅಧಿಕಾರ ಧರ್ಮಾಧಿಕಾರಿಗಳಿಗೆ ಇತ್ತು.

ಮನುಸ್ಮೃತಿಯು ಶೂದ್ರರು, ಅತಿಶೂದ್ರರು ಅಥವಾ ಅಂತ್ಯಜರಿಗೆ ಘೋರ ಅನ್ಯಾಯಗಳನ್ನು ಮಾಡಿದೆ. ಸಮಾಜದ ಅರ್ಧದಷ್ಟು ಇರುವ ಮಹಿಳೆಯರನ್ನು ಮತ್ತು ಬಹುಸಂಖ್ಯಾತರಾದ ಶೂದ್ರ, ಅತಿಶೂದ್ರ, ದಲಿತ ಜಾತಿಗಳಿಗೆ ಕ್ರೂರವಾದ ಅಪಮಾನ ಮತ್ತು ಅನ್ಯಾಯಗಳನ್ನು ಮಾಡಲು ಈ ಮನುಧರ್ಮ ಶಾಸ್ತ್ರ ಆಳುವವರಿಗೆ ಹುರುಪು ನೀಡಿದೆ. ಈ ಪ್ರಕ್ರಿಯೆಯಲ್ಲಿ, ಈ ಮನುಧರ್ಮ ಶಾಸ್ತ್ರವು ನಮ್ಮ ಉಪಖಂಡದಲ್ಲಿ ಸಮಾಜದ ಪ್ರಗತಿಗೆ ಮುಖ್ಯ ಅಡಚಣೆಯಾಗಿದೆ. ಸಮಾಜ

ಸುಧಾರಣಾ ಚಳವಳಿಗಳು

ಇದನ್ನು ಮನಗಂಡ ಪ್ರಗತಿಪರರು ದೇಶದ ಬಹುತೇಕ ಎಲ್ಲ ಭಾಗಗಳಲ್ಲಿಯೂ ವಿವಿಧ ರೀತಿಯ ಸಾಮಾಜಿಕ ಸುಧಾರಣಾ ಚಳವಳಿಗಳನ್ನು ನಡೆಸಿದರು. ಹಲವು ಪ್ರಗತಿಪರ ಚಿಂತಕರು ಮನುವಾದವನ್ನು ವಿರೋಧಿಸಿ ಹೊಸ ಪ್ರಗತಿಪರ ಸಂಪ್ರದಾಯಗಳಿಗೆ ಬಾಗಿಲು ತೆರೆದರು. ಸಮಾಜ ಸುಧಾರಣಾ ಆಂದೋಲನದ ಪ್ರವೃತ್ತಿಯನ್ನು ಭಾರತೀಯ ರಾಷ್ಟ್ರೀಯ ಚಳವಳಿಯು ಸ್ವಲ್ಪ ಮಟ್ಟಿಗೆ ಅಳವಡಿಸಿಕೊಂಡಿದೆ. ಫುಲೆ, ಅಂಬೇಡ್ಕರ್ ಮತ್ತು ಪೆರಿಯಾರ್ ಅವರಂತಹ ಮಹಾನ್ ವ್ಯಕ್ತಿಗಳು ಸಮಾಜವನ್ನು ಅಮಾನವೀಯತೆಯ ಹಿಡುಗಿನಿಂದ ಮುಕ್ತಗೊಳಿಸಲು ಮಹತ್ತರವಾದ ಕೆಲಸವನ್ನು ಮಾಡಿದ್ದಾರೆ. ಬಹುಪಾಲು ಜನಸಾಮಾನ್ಯರು ಸಮಾಜ ಸುಧಾರಣಾ ಆಂದೋಲನಗಳನ್ನು ಸ್ವಾಗತಿಸಿದರು. ನಮ್ಮ ದೇಶವನ್ನು ಆಧುನಿಕ ಸಮಾಜವಾಗಿ ಮುನ್ನಡೆಸುವ ಬಲವಾದ ಬಯಕೆ ರಾಷ್ಟ್ರೀಯ ಚಳವಳಿಯಲ್ಲಿ ಭಾಗವಹಿಸಿದ ಎಲ್ಲಾ ಪ್ರಜೆಗಳಲ್ಲಿ ವ್ಯಕ್ತವಾಗಿದೆ. ಅದರ ಪರಿಣಾಮವಾಗಿ ಡಾ.ಬಿ.ಆರ್.ಅಂಬೇಡ್ಕರ್ ಅವರ ನೇತೃತ್ವದಲ್ಲಿ ನಮ್ಮ ಸಂವಿಧಾನ ರೂಪುಗೊಂಡಿತು.

ನಮ್ಮ ದೇಶದಲ್ಲಿ ಎಲ್ಲರೂ ಸಂವಿಧಾನ ರಚಿಸಿ, ಅಂಗೀಕರಿಸಿದ ದಿನವನ್ನು ಹಬ್ಬ ಆಚರಿಸಿದರು. ಆದರೆ ಆರ್‌ಎಸ್‌ಎಸ್ ಮಾತ್ರ ಇದನ್ನು ದುರ್ದಿನ ಎಂದು ಹೇಳಿತು. ಮನು ಧರ್ಮಶಾಸ್ತ್ರ ನಮ್ಮಲ್ಲಿರುವಾಗ ಇನ್ನೊಂದು ಸಂವಿಧಾನ ಏಕೆ ಎಂಬ ವಾದವನ್ನು ಆರ್ಗನೈಸರ್ ಪತ್ರಿಕೆ ಮಾಡಿತು. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಅದರಿಂದ ದೂರ ಉಳಿದು, ಅಂದಿನ ಬ್ರಿಟಿಷ್ ಆಡಳಿತಗಾರರಿಗೆ ನಿಷ್ಠರಾಗಿದ್ದ ಹಿಂದುತ್ವವಾದಿಗಳಿಂದ ಇನ್ನೇನು ನಿರೀಕ್ಷಿಸಲು ಸಾಧ್ಯ?

ಸನಾತನ ಧರ್ಮ ಎಂದರೆ ಅವರ ದೃಷ್ಟಿಯಲ್ಲಿ ಮನುಧರ್ಮ

ಈಗ ಆ ಹಿಂದುತ್ವವಾದಿ ಶಕ್ತಿಗಳು ಅಧಿಕಾರದಲ್ಲಿವೆ. ತೋರಿಕೆಗೆ ಮಾತ್ರ ಸಂವಿಧಾನಕ್ಕೆ

ಪುಟ 07 ಕ್ಕೆ

ಸಂಪಾದಕೀಯ

ಕಾವೇರಿ ನೀರು ಹಂಚಿಕೆ ವಿವಾದ: ರಾಜಕೀಯ ದುರ್ಲಾಭ ಕೂಡದು

ಬರದ ಸಂಕಷ್ಟಗಳ ನಡುವಿನಲ್ಲಿರುವ ಕರ್ನಾಟಕ ಕಾವೇರಿ ನದಿ ಅಣೆಕಟ್ಟಿನಿಂದ ತಮಿಳುನಾಡಿಗೆ 15 ದಿನಗಳ ಕಾಲ ಪ್ರತಿದಿನ 5000 ಕ್ಯೂಸೆಕ್ ನೀರು ಹರಿಸಬೇಕು ಎಂದು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವು ನೀಡಿದ್ದ ನಿರ್ದೇಶನವನ್ನು ಪುನರ್ ವಿಮರ್ಶಿಸಲು ಸರ್ವೋಚ್ಚ ನ್ಯಾಯಾಲಯವು ನಿರಾಕರಿಸಿದೆ. ಪ್ರತಿದಿನವೂ 7200 ಕ್ಯೂಸೆಕ್ ನೀರನ್ನು ಹರಿಸಬೇಕು ಎಂದು ಕರ್ನಾಟಕಕ್ಕೆ ಸೂಚಿಸಲು ತಮಿಳುನಾಡು ಸರ್ಕಾರ ಕೋರಿದ ಮನವಿಯನ್ನು ಅದು ಪರಿಗಣಿಸಿರಲಿಲ್ಲ. ನಂತರ ಕರ್ನಾಟಕದ ಮೇಲ್ ಮನವಿಯನ್ನು ಪುರಸ್ಕರಿಸಿದ ಕಾವೇರಿ ನೀರು ನಿಯಂತ್ರಣಾ ಸಮಿತಿ (ಸಿ.ಡಬ್ಲ್ಯು.ಆರ್.ಸಿ) ಸೆಪ್ಟಂಬರ್ 28 ರಿಂದ ಅಕ್ಟೋಬರ್ 15 ರವರೆಗೆ ದಿನಾಲು 3000 ಕ್ಯೂಸೆಕ್ಸ್ ನೀರು ಹರಿಯುವಂತೆ ಸೂಚಿಸಿದೆ. ಇದು ಮೊದಲಿನ ತೀರ್ಪಿಗಿಂತ ಭಿನ್ನವಾಗಿದ್ದು ಒಂದರ್ಥದಲ್ಲಿ ಕರ್ನಾಟಕದ ಮನವಿಗೆ ಸಿಕ್ಕ ಪರಿಹಾರವಾಗಿದೆ. ಸಹಜವಾಗಿ ಹರಿಯುವ ನೀರಿನ ಜೊತೆ ನೈಸರ್ಗಿಕವಾಗಿ ಸೇರುವ ನೀರಿನೊಂದಿಗೆ ಇದನ್ನು ಸರಿದೂಗಿಸಬಹುದು ಎಂಬ ಜಲ ಸಂಪನ್ಮೂಲ ಸಚಿವರ ಹೇಳಿಕೆ ವಾಸ್ತವದಲ್ಲಿ ಸಂಗ್ರಹಿತ ನೀರಿನಿಂದ ಬಿಡುವ ಪ್ರಮೇಯ ಬರುವುದಿಲ್ಲ ಎಂಬ ಅರ್ಥ ನೀಡುತ್ತದೆ. ಪ್ರಾಧಿಕಾರದ ಆದೇಶ ಕಾಯ್ದುಕೊಳ್ಳಲು ಹಿಂದೆ ಸುಪ್ರೀಂ ಕೋರ್ಟ್ ಸೂಚಿಸಿರುವುದರಿಂದ ಆ ಆದೇಶವನ್ನು ಪಾಲಿಸುವುದು ಮತ್ತು ಪ್ರಾಧಿಕಾರದ ನಿರ್ದೇಶನವನ್ನು ಜಾರಿಗೊಳಿಸುವುದು ರಾಜ್ಯದ ಪಾಲಿಗೆ ಅನಿವಾರ್ಯವಾಗಿದೆ.

ಈ ವರುಷ ಮಳೆಯ ತೀವ್ರ ಆಭಾವದಿಂದಾಗಿ ರಾಜ್ಯ ಬರಗಾಲವನ್ನು ಎದುರಿಸುತ್ತಿದೆ. ಕಾವೇರಿ ನದಿಯಲ್ಲಿ, ಹಾಗೆಯೇ ರಾಜ್ಯದ ಇತರೆ ನದಿಗಳಲ್ಲಿಯೂ ನೀರಿನ ಅಭಾವ ತೀವ್ರವಾಗಿರುವುದು ನಿಚ್ಚಳ. ಹೀಗಿರುವಾಗಲೂ ತಮಿಳುನಾಡು ಸರ್ಕಾರ ಪ್ರತಿನಿತ್ಯ 24,,000 ಕ್ಯೂಸೆಕ್ ನೀರು ಹರಿಸಲು ನಿರ್ದೇಶನ ನೀಡಬೇಕು ಎಂದು ಸುಪ್ರೀಂಕೋರ್ಟಿನಲ್ಲಿ ಮನವಿ ಸಲ್ಲಿಸಿದೆ. ಈ ಅರ್ಜಿಯ ವಿಚಾರಣೆ ಇನ್ನೂ ಬಾಕಿ ಇದೆ. ಕಾವೇರಿ ನದಿಯ ನೀರನ್ನು ಅವಲಂಬಿಸಿರುವ ಕರ್ನಾಟಕದ ಪ್ರದೇಶಗಳಲ್ಲಿ ಬೆಳೆಗೆ ಹಾಗೂ ಮುಖ್ಯವಾಗಿ ಜನ, ಜಾನುವಾರುಗಳಿಗೂ ನೀರಿನ ತೀವ್ರ ಅಭಾವ ಬಾಧಿಸುವ ಆತಂಕದಲ್ಲಿ ಜನತೆ ಇರುವುದರಿಂದಾಗಿಯೇ ಬೀದಿಗಿಳಿದು ನಿರಂತರ ಚಳುವಳಿಯನ್ನು ನಡೆಸುತ್ತಿದ್ದಾರೆ. ಜನರ ಈ ಸ್ಥಿತಿಯನ್ನು ಕೇವಲ ಯಾಂತ್ರಿಕ ಇಲ್ಲವೇ ತಾಂತ್ರಿಕವಾಗಿ ನೋಡಲಾಗುವುದಿಲ್ಲ.

ಇಂತಹ ಅಭಾವದ ಪರಿಸ್ಥಿತಿಯು ಕರ್ನಾಟಕ ತಮಿಳುನಾಡು ಮತ್ತು ಉಳಿದ ಎರಡು ರಾಜ್ಯಗಳಲ್ಲಿಯೂ ಹಲವಾರು ರೀತಿಯ ಸಮಸ್ಯೆಗಳನ್ನು ಮತ್ತು ತೀವ್ರ ಆತಂಕವನ್ನು ಹುಟ್ಟು ಹಾಕಿರುವುದನ್ನೂ ಸಹ ತಳ್ಳಿ ಹಾಕುವ ಸಂಗತಿಯೂ ಅಲ್ಲ. ಆದರೆ ಉಭಯ ರಾಜ್ಯಗಳ ಆತಂಕಿತ ಜನತೆಯನ್ನು ಮುಖಾಮುಖಿಯಾಗಿಸುವುದೂ ಸರಿಯಲ್ಲ. ಇಲ್ಲಿ ಮುಖ್ಯವಾಗಿ, ನದಿಯ ಹರಿವನ್ನು ಹಂಚಿಕೊಂಡಿರುವ ತಮಿಳುನಾಡು, ಕರ್ನಾಟಕ ರಾಜ್ಯ ಸರ್ಕಾರಗಳು, ನೆರೆಹೊರೆಯ ರಾಜ್ಯಗಳಾಗಿಯೂ ಒಕ್ಕೂಟ ವ್ಯವಸ್ಥೆಯ ಭಾಗವಾಗಿ ಶಾಂತಿ, ಸಮಗ್ರತೆ, ಐಕ್ಯತೆಗೆ ಭಂಗ ಬರದಂತೆ ಅತ್ಯಂತ ಹೊಣೆಗಾರಿಕೆಯಿಂದ ವರ್ತಿಸಬೇಕು. ಇದು ಅಧಿಕೃತ ವಿರೋಧ ಪಕ್ಷಗಳನ್ನೂ ಒಳಗೊಂಡು ಎಲ್ಲಾ ರಾಜಕೀಯ ಪಕ್ಷಗಳಿಗೂ ಅನ್ವಯಿಸುತ್ತದೆ. ಆದರೆ ದುರಂತವೆಂದರೆ, ಭಾರತದ ಒಕ್ಕೂಟ ಸರ್ಕಾರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಕೇವಲ ಕರ್ನಾಟಕ, ತಮಿಳುನಾಡು ರಾಜ್ಯಗಳಲ್ಲಿ ಅಧಿಕಾರದಲ್ಲಿರುವ ವಿರೋಧ ಪಕ್ಷಗಳ ಸರ್ಕಾರದ ವಿರುದ್ಧ ಸಂಕುಚಿತ ಲಾಭಕ್ಕಾಗಿ ಸರಕಾರದ ಹಾಗೂ ಆಳುವ ಪಕ್ಷದ ವಿರುದ್ಧ ಜನರನ್ನು ಎತ್ತಿ ಕಟ್ಟುವ ಅಪಾಯಕಾರಿ ಆಟದಲ್ಲಿ ತೊಡಗಿರುವುದು ಖಂಡನೀಯ.

ಕಾವೇರಿ ನದಿ ನೀರಿನ ಹಂಚಿಕೆಯ ಕುರಿತಾದ ಶತಮಾನಗಳ ವಿವಾದವು ಈ ಹಿಂದೆ ನ್ಯಾಯಾಲಯದಲ್ಲಿ ಇತ್ಯರ್ಥವಾಗಿ ಒಂದು ಸೂತ್ರ ರೂಪಿಸಲ್ಪಟ್ಟಿದೆ. ವಿಷಯ ವಿವಾದಗಳು ಏರ್ಪಟ್ಟಲ್ಲಿ ಪರಿಶೀಲಿಸಿ ಸೂಕ್ತ ನಿರ್ದೇಶನವನ್ನು ನೀಡಲು ಪ್ರಾಧಿಕಾರದ ರಚನೆಯನ್ನು ಒಳಗೊಂಡು ಒಂದು ಆಡಳಿತಾತ್ಮಕ ವ್ಯವಸ್ಥೆಯೂ ಇದೆ. ಆದರೆ ತೀವ್ರ ಬರಗಾಲ ನೀರಿನ ಕೊರತೆ ಉಂಟಾಗುವ ಸನ್ನಿವೇಶಗಳಲ್ಲಿ ಸಂಕಷ್ಟ ಪರಿಹಾರ ಸೂತ್ರ ರೂಪಗೊಂಡಿರದೇ ಇರುವುದು ಸಹ ಬಹುದೊಡ್ಡ ಸಮಸ್ಯೆಯಾಗಿದೆ. ಅಂತಹ ಸಂಕಷ್ಟ ಪರಿಹಾರ ಸೂತ್ರ ರೂಪಿತವಾಗುವುದು ಅತಿ ಅಗತ್ಯ ಎನ್ನುವ ದರ್ದನ್ನು ಈಗಿನ ಘಟನೆಗಳು ಮತ್ತೇ ಮುನ್ನೆಲೆಗೆ ತಂದಿದೆ. ಇದಕ್ಕೆ ಕೇಂದ್ರ ಸರ್ಕಾರದ ಮುತುವರ್ಜಿಯೂ ಮುಖ್ಯ.

ಒಂದೆಡೆ ನ್ಯಾಯಾಲಯದ ನಿರ್ದೇಶನ ಸನ್ನಿವೇಶದಲ್ಲಿ ಉಭಯ ರಾಜ್ಯಗಳು ಮಾತುಕತೆ ನಡೆಸಿ ಮತ್ತು ಅಭಿಪ್ರಾಯಕ್ಕೆ ಬರುವುದು ಅತಿ ಅಗತ್ಯವಾಗಿದೆ.

ಒಕ್ಕೂಟ ವ್ಯವಸ್ಥೆಯ ಅತಿ ಪ್ರಮುಖ ಘಟಕಗಳಾಗಿರುವ ರಾಜ್ಯ ಸರ್ಕಾರಗಳ ನಡುವಿನಲ್ಲಿ ಇಂತಹ ಜಲ ವಿವಾದ, ಗಡಿ ವಿವಾದಗಳು ತಲೆದೋರಿದಲ್ಲಿ ಕೂಡಲೇ ಉಭಯ ರಾಜ್ಯಗಳ ನಡುವೆ ಮಾತುಕತೆಯ ಮೂಲಕ ಪರಿಹಾರವನ್ನು ರೂಪಿಸಿಕೊಳ್ಳುವಂತೆ ಮುತುವರ್ಜಿ ವಹಿಸುವುದು ಪೂರ್ತಿಯಾಗಿ ಒಕ್ಕೂಟ ಸರಕಾರದ ಮೇಲಿನ ಹೊಣೆಗಾರಿಕೆ ಆಗಿದೆ. ಆದರೆ ಪ್ರಧಾನಿ ಮೋದಿಯವರು ಅಂತಹ ಯಾವುದೇ ಆಸಕ್ತಿ ಅಥವಾ ಮುತುವರ್ಜಿಯನ್ನು ತೋರಿಸಿಲ್ಲ. ವಿರೋಧ ಪಕ್ಷಗಳ ಸರ್ಕಾರಗಳು ಇಲ್ಲಿವೆ, ಅವುಗಳನ್ನು ಇಕ್ಕಟ್ಟಿಗೆ ಸಿಲುಕಿಸಬೇಕು ಎನ್ನುವ ಸಂಕುಚಿತ ಮನೋಭಾವವನ್ನು ತಳ್ಳಿ ಹಾಕುವಂತಿಲ್ಲ. ಇಂತಹ ವರ್ತನೆಯಿಂದ ಒಕ್ಕೂಟ ಸರ್ಕಾರ ಹೊರ ಬಂದು ಕೂಡಲೇ ನಾಲ್ಕು ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯನ್ನು ಪ್ರಧಾನಿಗಳು ಕರೆಯ ಬೇಕು.

ಕರ್ನಾಟಕ ಸರಕಾರ ರಾಜಕೀಯ ಪರಿಹಾರಕ್ಕೆ ಯತ್ನಿಸುತ್ತಲೇ ಉಚ್ಛ ನ್ಯಾಯಾಲಯದಲ್ಲಿ ಮರು ಮನವಿ ಸಲ್ಲಿಸಬೇಕು ಎಂಬ ಸಲಹೆಯತ್ತಲೂ ಗಮನ ಹರಿಸುವುದು ಅಗತ್ಯ.

ಪ್ರಾಧಿಕಾರದ ನಿರ್ದೇಶನಕ್ಕೆ ಮಧ್ಯಪ್ರವೇಶಿಸಲು ಸುಪ್ರೀಂಕೋರ್ಟ್ ಇರುವುದರಿಂದ ತಮಿಳುನಾಡಿಗೆ ಈಗ 3000 ಕ್ಯೂಸೆಕ್ಸ್ ನೀರು ಬಿಡುವುದು ಕಾನೂನಾತ್ಮಕವಾಗಿ ಅನಿವಾರ್ಯ, ಒಂದು ವೇಳೆ ಇದು ಕಷ್ಟ ಎನ್ನುವಂತಿದ್ದರೆ ಮತ್ತೆ ಕರ್ನಾಟಕ ಸರ್ಕಾರ ನ್ಯಾಯಾಲಯದ ಮೊರೆ ಹೋಗಬೇಕು. ಸಂಕಷ್ಟದ ಸೂತ್ರವೂ ರೂಪಿತವಾಗಬೇಕು.

ಈ ಸಂದರ್ಭದಲ್ಲಿ ಕಾವೇರಿ ನೀರಿಗಾಗಿ ಹೋರಾಟ ನಡೆಸುತ್ತಿರುವ ಸಂಘಟನೆಗಳು ಶಾಂತಿ ಸಾಮರಸ್ಯಕ್ಕೆ ಧಕ್ಕೆ ಬರದಂತೆ ಎಚ್ಚರ ವಹಿಸುವುದು ಮುಖ್ಯ. ಹಾಗೆಯೇ ಈ ಸನ್ನಿವೇಶದ ರಾಜಕೀಯ ದುರುಪಯೋಗ ಪಡೆಯಲು ಬಯಸುತ್ತಿರುವ ಬಿಜೆಪಿ ಮತ್ತು ಜೆಡಿಎಸ್ ಗಳ ತಂತ್ರವನ್ನು ಅರ್ಥ ಮಾಡಿಕೊಳ್ಳುವುದು ಅಗತ್ಯವಿದೆ. ಅಂತಹ ಆಟಗಳನ್ನು ಹೊಣೆಗಾರಿಕೆ ಇರುವ ರಾಜಕೀಯ ಪಕ್ಷಗಳು ನಿಲ್ಲಿಸಬೇಕು. ಈ ದೆಶೆಯಲ್ಲಿ ಕೇಂದ್ರದ ಮೇಲೆ ರಾಜ್ಯದಿಂದ ಆಯ್ಕೆಯಾಗಿ ಹೋಗಿರುವ ಸಂಸದರು ಒತ್ತಡ ಹಾಕಬೇಕು. ಈ ಎಲ್ಲ ಬೆಳವಣಿಗೆಗಳನ್ನು ಜನತೆ ಎಚ್ಚರದಿಂದ ಗಮನಿಸುವುದು ಅಗತ್ಯ.

ಬಿಜೆಪಿ ರಾಜಕಾರಣಕ್ಕೆ ಬೆಸೆದುಕೊಳ್ಳುತ್ತಿರುವ ಜೆಡಿಎಸ್

ಎಸ್.ವೈ.ಗುರುಶಾಂತ್

ಈ ವಾರ

'ಅನ್ನ ಹಳಸಿತ್ತು, ನಾಯಿ ಹಸಿದಿತ್ತು' ಎನ್ನುವ ಜನಪ್ರಿಯ ಗಾದೆ ನಮ್ಮಲ್ಲಿದೆ. ಹಸಿದ ನಾಯಿಗೆ ಹಳಸಿದ ಅನ್ನವೇ ಅಮೃತ ಎಂದೂ ಇದನ್ನು ಅರ್ಥಮಾಡಿಕೊಳ್ಳಬಹುದು. ಇಂತಹ ಗಾದೆಗಳು ನಮ್ಮ ರಾಜಕಾರಣದಲ್ಲಿ ಅನ್ವರ್ಥಗೊಳ್ಳುವಂತೆ ಆಗಾಗ ಘಟನೆಗಳೂ ಸಂಭವಿಸುತ್ತವೆ. ಈಗಿನ ಸರದಿ ಜೆಡಿಎಸ್ ಮತ್ತು ಬಿಜೆಪಿ ಪಕ್ಷಗಳದ್ದು.

ಕರ್ನಾಟಕದ ವಿಧಾನ ಸಭೆಯ ಚುನಾವಣೆಯಲ್ಲಿ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಸೋಲುವ ಭೀತಿಯಲ್ಲಿ ಇದೆ. ತನ್ನದೇ ಸಂದರ್ಭಸಾಧಕ ರಾಜಕಾರಣದ ನೀತಿಗಳಿಂದ ಪ್ರಾದೇಶಿಕ ಪಕ್ಷವೆಂದು ತನ್ನನ್ನು ಕರೆದುಕೊಳ್ಳುವ 'ಜಾತ್ಯಾತೀತ ಜನತಾದಳ'ವು ಕಳೆದ ಚುನಾವಣೆಯಲ್ಲಿ ಮೂಲೆ ಗುಂಪಾಗಿದೆ. ತನ್ನ ರಾಜಕೀಯ ತಪ್ಪುಗಳನ್ನು ತಿದ್ದಿಕೊಂಡು ಮೇಳೇಳುವ ಪ್ರಯತ್ನಗಳಿಗೆ ಬದಲಾಗಿ ಅಡ್ಡಹಾದಿ ಹಿಡಿಯಲು ನಿರ್ಧರಿಸಿದೆ. ಹೇಗಾದರೂ ಮತ್ತೆ ಅಧಿಕಾರದ ಕೇಂದ್ರ ಸ್ಥಾನಕ್ಕೆ ಬರುವ ಹವಣಿಕೆ ಆ ಎರಡೂ ಪಕ್ಷಗಳಲ್ಲಿ ಕಾಣುತ್ತಿದೆ.

ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಅತಿ ಹೆಚ್ಚು ಸ್ಥಾನಗಳನ್ನ ಪಡೆಯುವಲ್ಲಿ ಬಹಳ ಮುಖ್ಯವಾದ ಒಂದು ಅಂಶ ಬಿಜೆಪಿಗೆ ವಿರೋಧವಾದ ಮತಗಳ ಕ್ರೋಢೀಕರಣ. ಇನ್ನೊಂದು ಅಂಶ ಕಾಂಗ್ರೆಸ್ ವಿರೋಧಿ ಯಾಗಿರುವ ಬಿಜೆಪಿಯನ್ನು ಅಷ್ಟಾಗಿ ಇಷ್ಟಪಡದ ಮತದಾರರು ಜೆಡಿಎಸ್ ಜೊತೆಯಲ್ಲಿ ಇದ್ದದ್ದು. ಈಗ ಮುಂಬರುವ ಲೋಕಸಭಾ ಚುನಾವಣೆಯ ಪ್ರಕ್ರಿಯೆಯಲ್ಲಿ ಬಲಗೊಳ್ಳುತ್ತಿರುವ 'ಇಂಡಿಯಾ' ಕೂಟದ ಎದುರು 'ಎನ್‌ಡಿಎ' ಮೈತ್ರಿಕೂಟವನ್ನು ಬಲಗೊಳಿಸಿಕೊಳ್ಳುವ ಪ್ರಯತ್ನದಲ್ಲಿ ಬಿಜೆಪಿ ಇದೆ. ಅಂದರೆ ಪ್ರತಿ ರಾಜ್ಯಗಳಲ್ಲಿಯೂ ಪ್ರಾದೇಶಿಕವಾದ ಅಥವಾ ಅತಿ ಸಣ್ಣದೇ ರಾಜಕೀಯ ಶಕ್ತಿ ಇರುವುದಾದರೂ ಹಾಗೂ ಸಣ್ಣಪುಟ್ಟ ಜಾತಿ, ಸಮುದಾಯಗಳನ್ನು ತನ್ನತ್ತ ಸೆಳೆಯಲು ಬಿಜೆಪಿ ಕಾರ್ಯಾಚರಣೆಗೆ ಇಳಿದಿದೆ. ಕರ್ನಾಟಕದಲ್ಲಿ ಕಾಂಗ್ರೆಸ್ 20 ಸಂಸತ್ತಿನ ಸ್ಥಾನಗಳನ್ನು ಗೆದ್ದೇ ಗೆಲ್ಲಬೇಕೆನ್ನುವ ಕಾರ್ಯತಂತ್ರದಲ್ಲಿ ಕೆಲಸ ಆರಂಭಿಸಿದೆ. ಈಗಿರುವ 25 ಸಂಸದರ ಸ್ಥಾನವನ್ನು ಹಾಗೆ ಉಳಿಸಿಕೊಳ್ಳುವುದು ಬಿಜೆಪಿಗೆ ಅತಿ ಕಷ್ಟ ಸಾಧ್ಯ ಎನ್ನುವುದು ಬಿಜೆಪಿ ನಾಯಕರಿಗೆ ಮನವರಿಕೆಯಾಗಿದೆ. ಆದರೆ ಆಗಬಹುದಾದ ಹಾನಿಯನ್ನು ತಡೆಗಟ್ಟಲು ಏನಾದರೂ ವಿಶೇಷ ಪ್ರಯತ್ನಗಳನ್ನು ನಡೆಸಬೇಕು ಎಂದಿರುವ ಬಿಜೆಪಿಗೆ ಅಧಿಕಾರ ವಂಚಿತ ಹಾಗೂ ಕಾಂಗ್ರೆಸ್ ವಿರೋಧಿ ಅದರಲ್ಲೂ ಸಿದ್ದರಾಮಯ್ಯನವರ ಕಡು ವಿರೋಧಿಯಾಗಿರುವ ದೇವೇಗೌಡರ ಜೆಡಿಎಸ್ ಪಕ್ಷವನ್ನು ತಮ್ಮತ್ತ ಸೆಳೆದರೆ ಆಗಬಹುದಾದ ಡ್ಯಾಮೇಜ್ ಒಂದಿಷ್ಟು ತಡೆದುಕೊಳ್ಳಬಹುದು ಎನ್ನುವುದು ಅದರ ಲೆಕ್ಕಚಾರ. ಹೀಗೆ ಈ ಇಬ್ಬರು ಸಮಾನ ದುಃಖಿಗಳು ಒಟ್ಟುಗೂಡಿ ಸಮಾನ 'ವೈರಿ'ಯ ವಿರುದ್ಧ ಒಂದಾಗಲು ನಿಶ್ಚಯಿಸಿವೆ!

ಅದರಂತೆ, ಅಲ್ಲಿ ಇಲ್ಲಿ ಮೈತ್ರಿಯ ಸಾಧ್ಯತೆಗಳ ಮಾತನಾಡುತ್ತಾ ಇದ್ದ ಜೆಡಿಎಸ್ ಮುಖಂಡರು ಇತ್ತೀಚೆಗೆ ದೆಹಲಿಯಲ್ಲಿ ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಮತ್ತು ಗೃಹ ಸಚಿವ ಅಮಿತ್ ಶಾ ರವರಿಗೆ ಶಾಲು ಹೊದಿಸಿ, ಮೈಸೂರು ಪೇಟಾ ಇಟ್ಟು ಮೈತ್ರಿ ಘೋಷಿಸಿಕೊಂಡಿದ್ದಾರೆ. ಜೆಡಿಎಸ್ ಈಗ ಎನ್.ಡಿ.ಎ. ಭಾಗವಾಗಿರುವುದಾಗಿಯೂ ಪ್ರಕಟಿಸಿದ್ದಾರೆ. ವಿಶೇಷ ಮತ್ತು ವಿಚಿತ್ರ ಎಂದರೆ ಆ ಸಮಾರಂಭಕ್ಕೆ ಜೆಡಿಎಸ್ ಪಕ್ಷದ ರಾಜ್ಯ ಅಧ್ಯಕ್ಷ ಇಬ್ರಾಹಿಂ ರವರು ಮತ್ತು ಹಿರಿಯ ನಾಯಕರಾದ ಹೆಚ್.ಡಿ.ರೇವಣ್ಣ ಅಥವಾ ಸಂಸದನಾಗಿರುವ ಅವರ ಮಗ ಪ್ರಜ್ವಲ್ ರೇವಣ್ಣ, ಅಥವಾ ಬೇರೆ ಯಾರೂ ಇಲ್ಲದೆ ಇರುವುದು. ಕುಮಾರಸ್ವಾಮಿ ಮತ್ತು ಅವರ ಮಗ ನಿಖಿಲ್ ಮಾತ್ರವೇ ಅಲ್ಲಿ ಇದ್ದದ್ದು! ಕುಮಾರಸ್ವಾಮಿಯವರೇನೋ ಶಾಲು ಹೊಂದಿಸಿದರು, ಆದರೆ ಎನ್.ಡಿ.ಎ. ಗೆ ಸೇರಿದ್ದಾರೆಂದು ಪ್ರಕಟಿಸಿದ ಬಿಜೆಪಿ ನಾಯಕರು ಇವರಿಗೆ ಶಾಲು ಹೊದಿಸುವುದು ಇರಲಿ ಕನಿಷ್ಠ ಒಂದು ಗುಲಾಬಿ ಹೂವನ್ನು ನೀಡಿ ಬರಮಾಡಿಕೊಳ್ಳಲಿಲ್ಲ ಎನ್ನುವುದು ಕೂಡ ಗಮನಿಸಬೇಕಾದ ಸಂಗತಿ. ಕುಮಾರಸ್ವಾಮಿಯವರೇ ಬಿಜೆಪಿ ಜೊತೆಗೆ ಮೈತ್ರಿ ಮಾಡಿಕೊಳ್ಳಲು ಧಾವಿಸಿದಂತೆ ಭಾಸವಾಗುತ್ತಿದ್ದು ವಾಸ್ತವದ ಒಂದು ಒಳ ಚಿತ್ರಣವನ್ನು ಮನಗಾಣಿಸುತ್ತದೆ.

ಎನ್.ಡಿ.ಎ. ಅಥವಾ ಬಿಜೆಪಿಯ ಜೊತೆಗೆ ಮೈತ್ರಿ ಮಾಡಿಕೊಳ್ಳುವ ವಿಷಯದಲ್ಲಿ ಕುಮಾರಸ್ವಾಮಿಯವರೇ ಎಲ್ಲವನ್ನು ನೋಡಿಕೊಳ್ಳುತ್ತಾರೆ ಎಂದು ಜೆಡಿಎಸ್ ನ ಸರ್ವೋಚ್ಛ ನಾಯಕರಾದ ಮಾಜಿ ಪ್ರಧಾನಿ ದೇವೇಗೌಡರು ಹೇಳಿದ್ದರು. ಬೆಂಗಳೂರಿನಲ್ಲಿ ನಡೆದ ಪಕ್ಷದ ಪ್ರಮುಖರ ಸಭೆಯಲ್ಲಿ 'ಪಕ್ಷವನ್ನು ಉಳಿಸುವ ನಿರ್ಧಾರವನ್ನು ಕುಮಾರಸ್ವಾಮಿ ಅವರು ತೆಗೆದುಕೊಳ್ಳುತ್ತಾರೆ. ಪಕ್ಷ ಉಳಿದರೆ ನಾಡು ಉಳಿಯುತ್ತದೆ' ಎಂದು ಸಹ ದೇವೇಗೌಡರು ಹೇಳಿದ್ದರು. ಜೆಡಿಎಸ್ ಪಕ್ಷದಲ್ಲಿನ ಜಾತ್ಯಾತೀತ ಎನ್ನುವ ಪದ ಮತ್ತು ಅದರ ಪ್ರತಿಪಾದನೆ ಭವಿಷ್ಯ ಏನು ಎಂದು ಸಾರ್ವಜನಿಕವಾಗಿ ಅನೇಕರು ಪ್ರಶ್ನಿಸಿದ್ದಾರೆ. ಕುಮಾರಸ್ವಾಮಿಯವರ ಉತ್ತರ ನಿರೀಕ್ಷಿತವೇ. ಹಿಂದೆ ಅವರೇ ಜಾತ್ಯಾತೀತ ಶಬ್ದದ ಅರ್ಥ ಏನು ಎಂದು ಪ್ರಶ್ನಿಸಿದ್ದರು. ಅಂದರೆ ಅದು ಬಿಜೆಪಿ ವ್ಯಾಖ್ಯಾನಿಸುವ ಹುಸಿ ಜಾತ್ಯಾತೀತತೆಯ ಪ್ರತಿಪಾದನೆಯಾಗಿ ಹೊರ ಬಿದ್ದಿತ್ತು. ಈಗಲೂ ಅಂತಹುದನ್ನೇ ಕುಮಾರಸ್ವಾಮಿ ಅವರು ಆಡಿದ್ದಾರೆ.

ಹಿಂದೆ ಜೆಡಿಎಸ್ ಬಿಜೆಪಿ ಜೊತೆಯಲ್ಲಿ ಅಧಿಕಾರ ಹಂಚಿಕೊಂಡಾಗ ಮುನಿಸಿಕೊಂಡಿದ್ದರು ಎನ್ನಲಾದ ದೇವೇಗೌಡರು ಈಗ ಜಾತ್ಯಾತೀತತೆಯನ್ನು ದೃಢವಾಗಿ ಪ್ರತಿಪಾದಿಸಿ ಅದಕ್ಕಾಗಿ ಹೋರಾಟ ನಡೆಸುತ್ತಿರುವ ಎಡಪಕ್ಷಗಳನ್ನೇ ಕೆಣಕಿ ಪ್ರಶ್ನಿಸಲು ತೊಡಗಿರುವುದು!? ದೇವೇಗೌಡರು ಬಿಜೆಪಿ ಜೊತೆಗೆ ಬೆಸೆದುಕೊಳ್ಳುತ್ತಿರುವ ಮೈತ್ರಿಯ ಅಗಾಧತೆಯನ್ನು ತೋರಿಸುತ್ತದೆ. ಕರ್ನಾಟಕ ರಾಜ್ಯದಲ್ಲಿ ಜೆಡಿಎಸ್ ಪಕ್ಷಕ್ಕೆ ಅದು ಪ್ರತಿಪಾದಿಸುತ್ತಿದ್ದ ಜಾತ್ಯಾತೀತತೆಯ ಮೌಲ್ಯಗಳು ಕೂಡ ಒಂದು ಬಲ ತಂದುಕೊಟ್ಟಿದ್ದವು ಎನ್ನುವುದನ್ನೂ ಗಮನಿಸಬೇಕು. ಈಗ ಜಾತ್ಯಾತೀತತೆಯನ್ನೇ ಬಿಜೆಪಿಗಿಂತಲೂ ಹೆಚ್ಚು ಹಗುರವಾಗಿ ಅಪಹಾಸ್ಯ ಮಾಡುವ ಸ್ಥಿತಿಗೆ ಪುಟ 10 ಕ್ಕೆ

ಸೆಪ್ಟೆಂಬರ್ 28, ಧೀಮಂತ ಸ್ವಾತಂತ್ರ್ಯ ಯೋಧ, ಕ್ರಾಂತಿಕಾರಿ ಹುತಾತ್ಮ ಭಗತ್ ಸಿಂಗ್ ಅವರ ಜನ್ಮ ದಿನವನ್ನು ಆಚರಿಸಲಾಗಿದೆ. ಈ ಸಂದರ್ಭದಲ್ಲಿ ದೇಶಕ್ಕಾಗಿ, ದೇಶದ ಜನತೆಗಾಗಿ ನಗು ನಗುತ್ತಾ ನೇಣುಗಂಭವನ್ನೇರಿದ ಭಗತ್ ಸಿಂಗ್ ಮತ್ತು ಸಂಗಾತಿಗಳ ಬದುಕು ಹೋರಾಟ ವಿಚಾರಗಳ ಕುರಿತು ಲೇಖನದ ಎರಡನೇ ಭಾಗ.

ಭಗತ್ ಸಿಂಗ್ ಕಂಡ ಕನಸು ಮತ್ತು ಭಾರತದ ಕ್ರೂರ ವಾಸ್ತವ

ಭಾಗ 2

ಆರ್. ರಾಮಕೃಷ್ಣ

ಸ್ವಾತಂತ್ರ್ಯ ಎಂದರೆ ಕೇವಲ ಯಜಮಾನರ ಬದಲಾವಣೆಯೇ? ತಾಯಿಗೆ ಬರೆದ ಪತ್ರದಲ್ಲಿ ಭಗತ್–

"ಮಾ, ನನ್ನ ದೇಶ ಒಂದು ದಿನ ಸ್ವಾತಂತ್ರ್ಯ ಪಡೆದೇ, ಪಡೆಯುತ್ತದೆ ಎಂಬ ಬಗೆಗೆ ನನಗೆ ಅನುಮಾನವಿಲ್ಲ. ಆದರೆ ನನಗೆ ಭಯ ಇರುವುದು, ಬಿಳಿ ಸಾಹೇಬರು ಖಾಲಿ ಮಾಡುವ ಕುರ್ಚಿಗಳಲ್ಲಿ ಕಂದು ಸಾಹೇಬರು ಕುಳಿತುಕೊಳುತ್ತಾರೆಂಬುದು."

"ಸ್ವಾತಂತ್ರ್ಯ ಎಂದರೆ ಕೇವಲ ಯಜಮಾನರ ಬದಲಾವಣೆ ಎಂದಾದರೆ ಜನರ ಸ್ಥಿತಿ ಹೀಗೆಯೇ ಉಳಿಯುತ್ತದೆ. ಪುರಾತನ ವ್ಯವಸ್ಥೆಯನ್ನು ನಾಶ ಮಾಡದೇ ಹೊಸ ಬದಲಾವಣೆ ತರುವುದು ಸಾಧ್ಯವಿಲ್ಲ." ಎಂದು ಹೇಳಿದ್ದಾರೆ. ಇಲ್ಲಿ 'ಪುರಾತನ ವ್ಯವಸ್ಥೆ'ಯನ್ನು ನಾಶಗೊಳಿಸುವುದು ಎಂಬುದರ ಅರ್ಥವೇನು?

ಮನುಸ್ಮೃತಿಯ ಕೆಲವು ಶ್ಲೋಕಗಳನ್ನು ಗಮನಿಸಿ

- ಲೋಕಗಳ ಉದ್ಧಾರಕ್ಕಾಗಿ ಬ್ರಹ್ಮನು ತನ್ನ ಮುಖದಿಂದ ಬ್ರಾಹ್ಮಣನನ್ನೂ, ಭುಜದಿಂದ ಕ್ಷತ್ರಿಯನನ್ನೂ, ತೊಡೆಯಿಂದ ವೈಶ್ಯನನ್ನೂ, ಪಾದದಿಂದ ಶೂದ್ರನನ್ನೂ ಸೃಷ್ಟಿಸಿದನು (ಅಧ್ಯಾಯ –1:31)
- ಈ ಭೂಮಿಯಲ್ಲಿರುವುದೆಲ್ಲವೂ ಬ್ರಾಹ್ಮಣನಿಗೆ ಸೇರಿದ್ದಾಗಿವೆ. ಬ್ರಾಹ್ಮಣನು ಶ್ರೇಷ್ಠವಾದ ಜನ್ಮವನ್ನು ಪಡೆದದ್ದರಿಂದ ಇವೆಲ್ಲವನ್ನೂ ಹೊಂದಲು ಅವನೇ ಅರ್ಹನಾಗಿರುತ್ತಾನೆ (ಅ–1:100)

ಪುರಾತನ ಭಾರತೀಯ ಸಮಾಜದ ಕುರಿತು–ವಿವೇಕಾನಂದ

ಜಮೀನ್ದಾರರ ಉಪಟಳದಿಂದ, ಪುರೋಹಿತರ ಹಿಂಸೆಯಿಂದ ತಪ್ಪಿಸಿಕೊಳ್ಳಬೇಕೆಂದು ಮುಸಲ್ಮಾನರಾದರು.

ಭರತ ಖಂಡದ ಮಹಮ್ಮದೀಯರಲ್ಲಿ ಅನೇಕರು ಹೇಗೆ ಮಹಮ್ಮದಿಯರಾಗಿರುವರು? ಬಲಪ್ರಯೋಗದಿಂದ ಅವರನ್ನು ಮುಸಲ್ಮಾನ ಮತಕ್ಕೆ ಸೇರಿಸಿದರು ಎನ್ನುವುದು ಶುದ್ಧ ತಪ್ಪು. ಜಮೀನ್ದಾರರ ಉಪಟಳದಿಂದ, ಪುರೋಹಿತರ ಹಿಂಸೆಯಿಂದ ತಪ್ಪಿಸಿಕೊಳ್ಳಬೇಕೆಂದು ಮುಸಲ್ಮಾನರಾದರು. ಆದ ಕಾರಣವೆ ಬಂಗಾಳ ದೇಶದ ರೈತರಲ್ಲಿ ಹಿಂದೂಗಳಿಗಿಂತ ಮುಸಲ್ಮಾನರೆ ಹೆಚ್ಚು.

ಕರ್ನಾಟಕದಲ್ಲಿ 18ನೇ ಶತಮಾನದ ಕೊನೆಯ ಭಾಗದಲ್ಲೂ ಸಹ ಸಂತೆಗಳಲ್ಲಿ ದನಗಳನ್ನು ಮಾರಿದರಂತೆ 'ಹೊಲೆಯ'ರ ಮತ್ತು 'ವಿಧವೆ'–ಮಹಿಳೆಯರ ಮತ್ತು ಮಕ್ಕಳ ಮಾರಾಟ ನಡೆದಿರುವುದಕ್ಕೆ ಸಾಕ್ಷ್ಯಗಳಿವೆ. ದುಡಿಯುವ ಬಡವರನ್ನು ಅವರ ಗುಡಿಸಲು ಸಹಿತ ಮಾರಿದ ದಾಖಲೆಗಳಿವೆ. (ಶೃಂಗೇರಿ ಮಠದ ಕಡತಗಳಲ್ಲಿರುವ 'ಕ್ರಯಚೀಟಿ'ಗಳು ಇದಕ್ಕೆ ಸಾಕ್ಷಿಗಳು–ಆಧಾರ: ಮಧ್ಯಕಾಲೀನ ಕರ್ನಾಟಕ ಮತ್ತು ಅಸ್ಪೃಶ್ಯತೆ'. ಲೇ– ಡಾ.ಎಂ. ಚಿದಾನಂದ ಮೂರ್ತಿ–ಕನ್ನಡ ಸಾಹಿತ್ಯ ಪರಿಷತ್ ಪ್ರಕಟಣೆ')

ಭಾರತದಲ್ಲಿ ಸಾಕ್ಷರತೆಯ ಬೆಳವಣಿಗೆಯನ್ನು ಗಮನಿಸಿದರೂ ಪುರಾತನ ವ್ಯವಸ್ಥೆ ಎಂದರೆ ಏನೆಂದು ತಿಳಿಯುತ್ತದೆ.

ಭಾರತದ ಪ್ರಥಮ ಜನಗಣತಿಯಿಂದ ಆರಂಭಿಸಿ ಕಳೆದ 2011 ರ ಇತ್ತೀಚಿನ ಜನಗಣತಿಯ ವರೆಗೆ.

ಇಸವಿ	ಮಹಿಳೆ	ಪುರುಷ	ಒಟ್ಟು
1872			3.25
1881	0.35	8.1	4.32
1951	16.8	27.16	18.33
2011	65.46	82.14	74.04
2022	70.3	84.7	77.7

ವಿಶಾಲವಾದ ಭಾರತ ದೇಶದ ಮೇಲೆ ಬ್ರಿಟೀಷರು ಮೇಲುಗೈ ಸಾಧಿಸಿದ ಮೇಲೆ ಜಾತಿ–ಧರ್ಮಗಳ ಆಧಾರದಲ್ಲಿ ನಿಷೇಧ ಮಾಡದ 'ಆಧುನಿಕ' 'ಮೆಕಾಲೇ ಶಿಕ್ಷಣ ಪದ್ಧತಿ' English Education Act 1835.

ಎಂದು ಹೇಳುವ ಶಿಕ್ಷಣ ಪದ್ಧತಿಯು 1835 ರಲ್ಲಿ ಅಂಗೀಕಾರವಾಗಿ ಅದರ ಜಾರಿ ಆರಂಭವಾಯಿತು. ಬ್ರಿಟೀಷ್ ಪ್ರಭುತ್ವ ಭಾರತದಲ್ಲಿ ಗಟ್ಟಿಯಾಗಿ ಬೇರೂರುವಂತೆ ಮಾಡುವುದು ಮತ್ತು ಸರಾಗವಾಗಿ ಆಳ್ವಿಕೆ ನಡೆಸಿಕೊಂಡು ಹೋಗಲು ಅಗತ್ಯವಾದ ಶಿಕ್ಷಿತ ಜನರ ಪಡೆಯನ್ನು ರೂಪಿಸುವುದು ಈ ಶಿಕ್ಷಣ ವ್ಯವಸ್ಥೆಯ ಮುಖ್ಯ ಉದ್ದೇಶವಾಗಿತ್ತು. ಬಣ್ಣ ಮತ್ತು ರಕ್ತದಲ್ಲಿ ಭಾರತೀಯರಾಗಿರುವ–ಆದರೆ, ಅಭಿರುಚಿ ಮತ್ತು ವಿಚಾರಗಳ ದೃಷ್ಟಿಯಿಂದ ಬ್ರಿಟೀಷರನ್ನು ಅನುಸರಿಸುವ ಶಿಕ್ಷಿತ ಭಾರತೀಯ ಸಮುದಾಯವೊಂದನ್ನು ಸೃಷ್ಟಿಸುವುದು ಈ 'ಮೆಕಾಲೆ ಶಿಕ್ಷಣ ನೀತಿ'ಯ ಗುರಿಯಾಗಿತ್ತು. ದಂಗೆಯೇಳಬಹುದಾದ ಭಾರತೀಯರನ್ನು ಮಟ್ಟ ಹಾಕಲು ಸೈನಿಕರನ್ನು ಕ್ಷಿಪ್ರವಾಗಿ ಸಂದೇಶಗಳನ್ನು ಮುಟ್ಟಿಸಲು, ಬೇಕಾದ ತ್ವರಿತ ಸಂದೇಶಗಳ ವ್ಯವಸ್ಥೆಗಾಗಿ ಆರಂಭಿಸಿದ್ದು, ಟೆಲಿಗ್ರಾಂ ವ್ಯವಸ್ಥೆ. ಬಂಡಾಯಗಳನ್ನು ಕ್ಷಿಪ್ರವಾಗಿ ದಮನ ಮಾಡಲು, ಬ್ರಿಟೀಷ್ ಸೈನ್ಯದ ವೇಗದ ಹರಿದಾಟಕ್ಕೆ ಅನುಕೂಲಕರವಾಗಿ ಆರಂಭವಾಗಿದ್ದು ಭಾರತದ ರೈಲ್ವೆ ವ್ಯವಸ್ಥೆ ಎಂಬುದನ್ನು ನಾವು ಮರೆಯುವಂತಿಲ್ಲ.

ಖ್ಯಾತ ಆರ್ಥಿಕ ತಜ್ಞೆ ಉತ್ಸಾ ಪಟ್ನಾಯಕ್ ಅವರು 1765 ರಿಂದ 1938 ರ ಅವಧಿಯಲ್ಲಿ ಬ್ರಿಟಿಷ್ ಸುಲಿಗೆಕೋರತನದ ಕುರಿತು ಅಂದಾಜು ಮಾಡಿದ್ದು, ಅದು 45 ಟ್ರಿಲಿಯನ್ ಡಾಲರ್‌ನಷ್ಟು ದೊಡ್ಡ ಮೊತ್ತ ಎಂದು ಲೆಕ್ಕ ಮಾಡಿದ್ದಾರೆ. (ಅಂದರೆ ಈ ಮೊತ್ತವು ಈಗಿನ ಬ್ರಿಟನ್ ದೇಶದ ಒಟ್ಟು ರಾಷ್ಟ್ರೀಯ ಉತ್ಪನ್ನದ 15 ಪಟ್ಟು ಆಗುವಷ್ಟು. ಬ್ರಿಟೀಷ್ ವಿರೋಧಿ ಚಳುವಳಿಯ ಮುಂಚೂಣಿಯಲ್ಲಿದ್ದ ಪಕ್ಷವಾದರೂ ಕಾಂಗ್ರೆಸ್‌ಗೆ ಅಸಮಾನತೆಯಿಂದ ಕೂಡಿದ ಭಾರತೀಯ ಸಮಾಜದಲ್ಲಿ ಮೂಲಭೂತ ಬದಲಾವಣೆಯನ್ನು ತರುವ ಉದ್ದೇಶ ಅಥವಾ ಬದ್ಧತೆ ಎರಡೂ ಇರಲಿಲ್ಲ. ಹಲವಾರು ಉದಾಹರಣೆಗಳ ಮೂಲಕ ಇದನ್ನು ಅರ್ಥ ಮಾಡಿಕೊಳ್ಳಬಹುದು.



ಕಾಂಗ್ರೆಸ್‌ನ ವರ್ಗಗುಣ

1922 ರ ಫೆಬ್ರವರಿ 11–12 ರಂದು, ಗುಜರಾತಿನ ಬಾರ್ದೋಲಿಯಲ್ಲಿ ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಅಂಗೀಕರಿಸಿದ ನಿರ್ಣಯವನ್ನು ನೋಡಿದರೆ **ಜಮೀನ್ದಾರಿ ಮತ್ತು ಬಂಡವಾಳಿಗ ವರ್ಗಗಳ ಹಿಡಿತ ಕಾಂಗ್ರೆಸ್‌ನ ಮೇಲೆ. ಇತ್ತು ಎಂಬುದು ಅರ್ಥವಾಗುತ್ತದೆ.**

"ಜಮೀನುದಾರರಿಗೆ ತೆರಬೇಕಾದ ಗೇಣಿಯನ್ನು ತಡೆ ಹಿಡಿಯುವುದು ಕಾಂಗ್ರೆಸ್ ನಿಯಮಗಳಿಗೆ ವಿರುದ್ಧವಾದುದು. ಹಾಗೂ ದೇಶದ ಹಿತಾಸಕ್ತಿಗಳಿಗೆ ತಕ್ಕುದಾದುದಲ್ಲ ಎಂದು ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಸಂಘಟನೆಗಳು ರೈತರಿಗೆ ತಿಳಿಯಪಡಿಸಬೇಕು. ಎಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಲಹೆ ನೀಡಬಯಸುತ್ತದೆ. ಕಾಂಗ್ರೆಸ್‌ನ ಆಂದೋಲನದ ಉದ್ದೇಶ ಯಾವುದೇ ರೀತಿಯಲ್ಲಾಗಲಿ ಜಮೀಂದಾರರ ಹಕ್ಕುಗಳ ಮೇಲೆ ಧಾಳಿ ಮಾಡುವುದಲ್ಲ ಎಂದು ಕಾರ್ಯಕಾರಿ ಸಮಿತಿ ಭರವಸೆ ನೀಡುತ್ತದೆ. ರೈತರ ದೂರುಗಳಿದ್ದರೆ ಪರಸ್ಪರ ಸಮಾಲೋಚನೆ ಹಾಗೂ ಪಂಚಾಯ್ತಿಯ ಮೂಲಕ ಪರಿಹಾರ ಪಡೆಯಲು ಪ್ರಯತ್ನಿಸಬೇಕು. ಎಂದು ಹೇಳುತ್ತದೆ."

ಪುರಾತನ ಜಾತಿತಾರತಮ್ಯದ ಸಮಾಜ, ಅಸಮಾನತೆಯ ಸಮಾಜದಲ್ಲಿ ಬಿರುಕು ಬಿಡುತ್ತಾ ಹೋಗುತ್ತಿರುವಾಗ, ಸಮಾಜದ ಮೇಲೆ ಹಿಡಿತ ಕಳೆದುಕೊಳ್ಳುತ್ತಿರುವ ಮನುವಾದಿ ಮೌಲ್ಯಗಳನ್ನು ಮರುಸ್ಥಾಪಿಸುವ ಹಳಹಳಿಕೆಯೊಂದಿಗೆ ಪಾಳೇಯಗಾರಿ–ಪುರೋಹಿತಶಾಹಿ–ಪುರುಷಾಧಿಪತ್ಯ ಶಕ್ತಿಗಳು ಸೇರಿ 1925 ರಲ್ಲಿ 'ರಾಷ್ಟ್ರೀಯ ಸ್ವಯಂಸೇವಕ ಸಂಘ'ವು ಹುಟ್ಟಿಕೊಂಡಿತು. 1906 ರಲ್ಲಿ ಸ್ಥಾಪನೆಯಾದ ಹಿಂದೂ ಮಹಾ ಸಭಾಕ್ಕೆ ಬ್ರಿಟೀಷ್ ವಿರೋಧಿ ಹೋರಾಟಗಳಲ್ಲಿ ಮೂಡಿ ಬರುತ್ತಿದ್ದ ಹಿಂದೂ–ಮುಸ್ಲಿಂ ಐಕ್ಯತೆ ಬೇಕಿರಲಿಲ್ಲ. ಬ್ರಿಟೀಷರಿಗೆ ವಿರೋಧವೂ ಅದಕ್ಕೆ ಬೇಕಿರಲಿಲ್ಲ. ಹಿಂದೂ ಮಹಾ ಸಭಾದ ಸಾವರ್ಕರ್ ಆರಂಭದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿದ್ದರೂ ಸಹ ಅಂಡಮಾನ್ ಜೈಲಿನಲ್ಲಿ ಇರುವಾಗ ಹಲವಾರು ಕ್ಷಮಾಪಣಾ ಪತ್ರಗಳನ್ನು ಬರೆದು ಮುಂದೆ ರಾಜಕೀಯ ಚಟುವಟಿಕೆಗಳಲ್ಲಿ, ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುವುದಿಲ್ಲ, ರತ್ನಗಿರಿ ಜಿಲ್ಲೆ ಬಿಟ್ಟು ಹೋಗಲು ಅನುಮತಿ ಪಡೆಯುವೆ ಎಂದು ಒಪ್ಪಿ ಬಿಡುಗಡೆಗೊಂಡರು. ಆರೆಸ್ಸೆಸ್ ಸ್ವಾತಂತ್ರ್ಯ ಹೋರಾಟದಿಂದ ಸಂಪೂರ್ಣವಾಗಿ ದೂರ ಉಳಿಯಿತು. ಬ್ರಿಟೀಷರೊಂದಿಗೆ ಶಾಮೀಲು ಸಹ ಆಗಿತ್ತು.

ಹಿಂದೂ–ಮುಸ್ಲಿಂ ಎಂದು ಭಾರತೀಯರನ್ನು ಒಡೆಯುವ ಬ್ರಿಟೀಷ್ ನೀತಿ ಆರೆಸ್ಸೆಸ್‌ಗೆ ಪ್ರಿಯವಾಗಿತ್ತು.

ಆರೆಸ್ಸೆಸ್‌ನ ನಾಯಕತ್ವ ಪ್ರಜ್ಞಾಪೂರ್ವಕವಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ತನ್ನ ಕಾರ್ಯಕರ್ತರನ್ನು ದೂರ ಇಟ್ಟಿತ್ತು. ಆರೆಸ್ಸೆಸ್ ಸ್ಥಾಪಕ ಕೇಶವ ಬಲಿರಾಮ ಹೆಗ್ಡೆವಾರ್ ಒಮ್ಮೆ ಮಾತ್ರ ತಾವು–ಜೈಲಿನಲ್ಲಿದ್ದ ಸ್ವಾತಂತ್ರ್ಯ ಹೋರಾಟಗಾರರ ಸಂಪರ್ಕ ಪಡೆದು ಅವರನ್ನು ಹಿಂದುತ್ವದ ಕಡೆಗೆ ಕರೆತರುವ ಸಲುವಾಗಿ ಚಳುವಳಿಯಲ್ಲಿ ಭಾಗವಹಿಸಿ, ಒಮ್ಮೆ ಮಾತ್ರ ಜೈಲು ಸೇರಿದ್ದರು. (ಅವರ ಈ ಉದ್ದೇಶವನ್ನು ಅವರೇ ಹೇಳಿಕೊಂಡಿದ್ದಾರೆ. ('ರಾಷ್ಟ್ರೋತ್ಥಾನ ಸಾಹಿತ್ಯ'ದಂತಹ ಆರೆಸ್ಸೆಸ್ ಪ್ರಕಾಶನ ಹೊರ ತಂದಿರುವ ಯಾವ ಪುಸ್ತಕಗಳಲ್ಲೂ ಸಹ ಗೋಲ್ವಾಲಕ್ಕರ್ ಸೇರಿದಂತೆ ಯಾವ ಆರೆಸ್ಸೆಸ್ ಮುಖಂಡರ ಜೀವನ ಚರಿತ್ರೆಯಲ್ಲೂ ಸ್ವಾತಂತ್ರ್ಯ ಹೋರಾಟದಲ್ಲಿ ಅವರು ಭಾಗವಹಿಸಿದ ಉಲ್ಲೇಖ ಇಲ್ಲ.) ಇದಕ್ಕೆ ತದ್ವಿರುದ್ಧವಾಗಿ ಕಮ್ಯೂನಿಸ್ಟ್ ಪಕ್ಷ ತನ್ನ ನಿರ್ಣಾಯಕ ಪಾತ್ರದ ಮೂಲಕ ಹಲವಾರು ಚಳುವಳಿಗಳನ್ನು ಸಂಘಟನೆಗಳನ್ನು ಬೆಳೆಸಿತು.

1936 ರಲ್ಲಿ ಅಖಿಲ ಭಾರತ ಕಿಸಾನ್ ಸಭಾ (ಎ.ಐ.ಕೆ.ಎಸ್.)ದ ಸ್ಥಾಪನೆಯಲ್ಲಿ ಕಮ್ಯೂನಿಸ್ಟರು ನಿರ್ಣಾಯಕ ಪಾತ್ರ ವಹಿಸಿದರು. ಇದರ ಹಿಂದೆಯೇ ಹಲವಾರು ಐತಿಹಾಸಿಕ ಹೋರಾಟಗಳು ಚಿಮ್ಮಿ ಬಂದವು. ಕೈಯೂರು ರೈತರ ಹೋರಾಟ, ಮುಂಬೈ ಪ್ರಾಂತದ ಥಾಣೆ ಜಿಲ್ಲೆಯ ವಾರಲೀಯರ ಹೋರಾಟ–(1945–47), ಬ್ರಿಟಿಷ್ ಬೆಂಬಲಿತ ಹೈದರಾಬಾದಿನ ನಿಜಾಮ ಮತ್ತು ಆ ರಾಜ್ಯದ ದೊಡ್ಡ ಜಮೀನ್ದಾರರ ವಿರುದ್ಧ ಸಮರ ಸಾರಿದ–'ತೆಲಂಗಾಣ'ದ ಮಹೋನ್ನತ ಶಸಸ್ತ್ರ ಹೋರಾಟ –(1946–1948, 1948–1951)

ಸುಮಾರು ಒಂದು ಸಾವಿರ ಜನರು ಪ್ರಾಣಾರ್ಪಣೆ ಮಾಡಿದ ಐತಿಹಾಸಿಕ 'ಪುನ್ನಪ್ರ–ವಯಲಾರ್'–(1939–1946) ಕಾರ್ಮಿಕ ವರ್ಗದ ರಾಜಕೀಯ ಚಳುವಳಿ, 1942 ರ ಕ್ವಿಟ್ ಇಂಡಿಯಾ ಚಳುವಳಿ, ಬ್ರಿಟಷರ ವಿರುದ್ಧ ಭಾರತೀಯ ಸೇನೆಯೇ ಬಂಡೆದ್ದ 'ರಿನ್' ಬಂಡಾಯ, ಸುಭಾಸ್‌ಚಂದ್ರ ಬೋಸ್‌ರ ನೇತೃತ್ವದ ಐ.ಎನ್.ಎ. ಹೋರಾಟಗಳು ಈ ಎಲ್ಲವುಗಳು ಸೇರಿ ಭಾರತವು ಸ್ವಾತಂತ್ರ್ಯದ ಕಡೆಗೆ ಚಲಿಸಿತು. ಎರಡನೇ ಮಹಾಯುದ್ಧದಲ್ಲಿ ಫಾಸಿಸ್ಟರನ್ನು ಸೋಲಿಸುವ ನಿಟ್ಟಿನಲ್ಲಿ ಅತ್ಯಂತ ನಿರ್ಣಾಯಕ ಪಾತ್ರವಹಿಸಿದ ಸಮಾಜವಾದಿ ಸೋವಿಯಟ್ ಒಕ್ಕೂಟವು ಅಂತರರಾಷ್ಟ್ರೀಯ ರಂಗದಲ್ಲಿ ಒಂದು ಸೂಪರ್ ಪವರ್ ಆಗಿ ಉದಯಿಸಿದ್ದು ಮುಂತಾದ ಬೆಳವಣಿಗೆಗಳು ಸಹ ಭಾರತ ಸೇರಿದಂತೆ ಹಲವಾರು ದೇಶಗಳು ವಸಾಹತುಶಾಹಿ ಶಕ್ತಿಗಳಿಂದ ವಿಮೋಚನೆ ಪಡೆಯಲು ಸಹಾಯಕವಾದವು. ಭಾರತ ದೇಶದ ಸ್ವಾತಂತ್ರ್ಯ ಚಳುವಳಿಯಲ್ಲಿ ಕಾರ್ಮಿಕ ವರ್ಗ–ಶ್ರಮಿಕ ವರ್ಗವು ಮುಂಚೂಣಿ ಪಾತ್ರ ವಹಿಸಲು ಸಾಧ್ಯವಾಗದ್ದರಿಂದ ಭಗತ್ ಸಿಂಗ್ ಆತಂಕ ಪಟ್ಟಂತೆ ಭಾರತಕ್ಕೆ ಸ್ವಾತಂತ್ರ್ಯ ಬಂದರೂ ಸಹ ಬಹುತೇಕ, 'ಬಿಳಿಯ ಸಾಹೇಬರು ಕುಳಿತ ಖುರ್ಚಿಗಳಲ್ಲಿ ಕಂದು ಸಾಹೇಬರು ಬಂದು ಕುಳಿತ ಪರಿಸ್ಥಿತಿ' ಬಂದಿತು. 77 ವರ್ಷಗಳ ಸ್ವಾತಂತ್ರ್ಯದ ನಂತರ ಪರಿಸ್ಥಿತಿಯನ್ನು ಅವಲೋಕಿಸಿದರೆ ಆರ್ಥಿಕ ರಂಗದಲ್ಲಿ ಕಾಣುವುದೇನು? ಅದೇ ಒಂದು ಕಡೆ ಯಶಸ್ವಿ ಚಂದ್ರಯಾನದ ಮುಖಪುಟದ ಸುದ್ದಿ ಅದೇ ಪತ್ರಿಕೆಯಲ್ಲಿ, ಹತ್ತಾರು ತಿಂಗಳ ವೇತನ ವಿಳಂಬದಿಂದ ಬೇಸತ್ತು ಪೌರಕಾರ್ಮಿಕರು ಮೈಮೇಲೆ ಮಲವನ್ನು ಸುರಿದುಕೊಂಡು ➚

ಪ್ರತಿಭಟಿಸಿದ ಸುದ್ದಿಯನ್ನು ನೋಡಬೇಕಾಗಿದೆ.

ಇತ್ತೀಚಿನ ಆಕ್ಸ್‌ಫಾಮ್ ವರದಿಯಂತೆ, ದೇಶದ ಜನಸಂಖ್ಯೆಯಲ್ಲಿ ಕೇವಲ ಶೇ.10 ರಷ್ಟು ಇರುವ ಅತಿ ಶ್ರೀಮಂತರು, ದೇಶದ ಒಟ್ಟು ಸಂಪತ್ತಿನ ಶೇ.72. ರಷ್ಟು ಸಂಪತ್ತಿನ ಮಾಲಿಕತ್ವ ಹೊಂದಿದ್ದಾರೆ. ಅದರಲ್ಲೂ ದೇಶದ ಕೇವಲ ಶೇ.1 ಅತಿ ಶ್ರೀಮಂತ ಜನರು, ಶೇ.40 ಸಂಪತ್ತಿನ ಒಡೆತನ ಗಳಿಸಿದ್ದಾರೆ. ದೇಶದ ಜನಸಂಖ್ಯೆಯಲ್ಲಿ ಶೇ.40 ರಷ್ಟು ಇರುವ ಮಧ್ಯಮ ವರ್ಗ ಮತ್ತು ಸಾಧಾರಣ ಶ್ರೀಮಂತರ ಸಂಪತ್ತು ದೇಶದ ಒಟ್ಟು ಸಂಪತ್ತಿನ 25 ರಷ್ಟು ಇದೆ. ದೇಶದ ಜನಸಂಖ್ಯೆಯ ಶೇ.50 ರಷ್ಟು ಇರುವ ಕೆಳ ಮಧ್ಯಮ ವರ್ಗ ಮತ್ತು ಬಡವರು ಒಟ್ಟು ಸೇರಿ ಹೊಂದಿರುವ ಸಂಪತ್ತಿನ ಪಾಲು ಕೇವಲ ದೇಶದ ಸಂಪತ್ತಿನ ಶೇ.3 ರಷ್ಟು ಮಾತ್ರ.

ಟಾಟಾ ಬಿರ್ಲಾರ ಬದಲಿಗೆ
ಅದಾನಿ–ಅಂಬಾನಿ ಮಂಚೂಣಿಗೆ

ರಾಷ್ಟ್ರೀಕೃತ ಬ್ಯಾಂಕುಗಳ ಕಡಿಮೆ ಬಡ್ಡಿಯ ಸಾಲ ಬಡವರಿಗೆ ಬಹಳಷ್ಟು ಸಿಗುವುದೇ ಇಲ್ಲ. ಕಾರಿನ ಸಾಲ ಸಿಕ್ಕಷ್ಟು ಸುಲಭವಾಗಿ ತಳ್ಳುವ ತರಕಾರಿ ಗಾಡಿಗೆ ಸಾಲ ಸಿಗುವುದಿಲ್ಲ. ಇಂತಹ ಬಡವರಿಗೆ ಧರ್ಮಸ್ಥಳ ಮಂಜುನಾಥನ ಸಂಘದ ದುಬಾರಿ ಬಡ್ಡಿ ಸಾಲವೇ ಗತಿ ಅಥವಾ ಖಾಸಗಿ ಲೇವಾದೇವಿಗಾರರ ದುಬಾರಿ ಬಡ್ಡಿ ಸಾಲವೇ ಗತಿ. ಮೀಟರ್ ಬಡ್ಡಿ, ಬಡ್ಡಿಗೆ ಬಡ್ಡಿ, ಚಕ್ರ ಬಡ್ಡಿ ಕಟ್ಟುವವರು ಬಡವರೇ. ನೀರವ್ ಮೋದಿ, ವಿಜಯ್ ಮಲ್ಯನಂತಹವರು, ಸಾವಿರಾರು ಕೋಟಿ ರೂಪಾಯಿಗಳ ಸಾಲ ಪಡೆದು ವಿದೇಶಗಳಿಗೆ ಓಡಿ ಹೋಗುತ್ತಾರೆ. ಇಂತಹ ಜನರಿಗೆ, ಸರಕಾರಗಳೇ ಎನ್.ಪಿ.ಎ., ಕೆಟ್ಟ ಸಾಲ ಅಥವಾ ವಸೂಲಾಗದ ಸಾಲ ಇತ್ಯಾದಿ ಹೆಸರು ಕೊಟ್ಟು, ಲಕ್ಷಾಂತರ ಕೋಟಿ ರೂಪಾಯಿಗಳ ಸಾಲ ಮನ್ನಾ ಮಾಡುತ್ತವೆ.

ಕಳೆದ 9 ವರ್ಷದ ಅವಧಿಯಲ್ಲಿ 14.56 ಲಕ್ಷ ಕೋಟಿ ರೂಪಾಯಿಗಳನ್ನು ಶ್ರೀಮಂತರಿಗೆ ಮನ್ನಾ ಮಾಡಲಾಗಿದೆ ಎನ್ನುತ್ತದೆ ವರದಿ.

ಕೊರೊನ ಬಿಕ್ಕಟ್ಟಿಗೆ ಮುಂಚೆಯೂ ಶ್ರೀಮಂತ, ಬಂಡವಾಳಗಾರ ವಿಭಾಗಗಳಿಗೆ ಸಾಕಷ್ಟು ತೆರಿಗೆ ವಿನಾಯಿತಿ ಇತ್ತು. ಕೊರೊನ ಬಿಕ್ಕಟ್ಟಿನ ಕಾಲದಲ್ಲೂ ಇದು ಅಬಾಧಿತವಾಗಿ ಮುಂದುವರಿಯಿತು. ಇಂತಹ ನೀತಿಗಳ ಒಟ್ಟಾರೆ ಪರಿಣಾಮವನ್ನು ಒಮ್ಮೆ ಗಮನಿಸೋಣ.

ದೇಶದ ಒಟ್ಟು ಸಂಪತ್ತಿನಲ್ಲಿ ದೊಡ್ಡ ಅಥವಾ ಏಕಸ್ವಾಮ್ಯ ಬಂಡವಾಳಗಾರರ ಪಾಲು

ಅವಧಿ	ಪಾಲು	ಕಾಲ
1858–1947	50%	ಬ್ರಿಟೀಷ್ ಅವಧಿ
1960–1980	35%	ಸ್ವಾತಂತ್ರ್ಯಾನಂತರ
2010–2021	64%	ಉದಾರೀಕರಣದ ನಂತರದ ಕಾಲ

ಮಾಹಿತಿ ಮೂಲ: ವರ್ಲ್ಡ್ ಇನಿಕ್ವಾಲಿಟಿ ಲ್ಯಾಬ್'ನ; 'ವಿಶ್ವ ಅಸಮಾನತೆ ವರದಿ'

ಉತ್ಪಾದನಾ ಕ್ಷೇತ್ರದಲ್ಲಿ ಒಟ್ಟು ಮೌಲ್ಯದ ಪಾಲು–ಅಖಿಲ ಭಾರತ ಅಂಕಿಸಂಖ್ಯೆಗಳು

ವರ್ಷ	ಕಾರ್ಮಿಕರ ಕೂಲಿ ಪಾಲು	ಮಾಲೀಕರ ಲಾಭದ ಪಾಲು
1980–81	28.5	15.7
1990–91	21.4	18.5
2000–01	15.5	20.00
2010–11	10.3	47.80

ಮಾಹಿತಿ ಮೂಲ–ಐ.ಎಲ್.ಓ.–ಇಂಡಿಯನ್ ಲೇಬರ್ ಆರ್ಗನೈಸೇಷನ್ ವರದಿ.

ಬಂಡವಾಳಶಾಹಿಗಳ ಪರವಾದ ಈ ಒಟ್ಟು ನೀತಿಗಳ ಒಟ್ಟು ಫಲ ಏನಾಗಿದೆ. (2021ರ ಮಾಹಿತಿ.)


ವರ್ಷ	22 ಏಕಸ್ವಾಮ್ಯ ಮನೆತನಗಳ ಆಸ್ತಿ
1957	312.63 ಕೋಟಿ
1997	1,58,04 ಕೋಟಿ
ಭಾರತದ ಶತಕೋಟ್ಯಾಧಿಪತಿ (ಬಿಲೆನಿಯರುಗಳ) ಒಟ್ಟು ಸಂಪತ್ತು (2020–21)	34,00,000 ಕೋಟಿಗಳ ಭಾರತದ ಬಜೆಟ್‌ಗಿಂತಲೂ ಜಾಸ್ತಿಯಾಗಿದೆ.
ಕೆಲವು ನಿರ್ದಿಷ್ಟ ಬಂಡವಾಳಿಗರ ವಿವರ	
ಮುಖೇಶ್ ಅಂಬಾನಿ	ಸು. 7,18,000 ಕೋಟಿ
ಗೌತಮ ಅದಾನಿ	ಸು. 5,61,000 ಕೋಟಿ.
ಶಿವ ನಡಾರ್	ಸು. 2,38,500 ಕೋಟಿ.


ಐ.ಎಲ್.ಓ.–ಉತ್ಪಾದನಾ ಕ್ಷೇತ್ರ–ಅಖಿಲ ಭಾರತ ಅಂಕಿಸಂಖ್ಯೆಗಳು

ವಾಸ್ತವಿಕವಾಗಿ ಸ್ವಾತಂತ್ರ್ಯದ 77 ವರ್ಷಗಳಲ್ಲಿ ಭಾರತ ಸಾಧಿಸಿದ್ದೇನು? ಭಾರತದ ಪ್ರಗತಿ ಎಂದರೆ 'ಟಾಟಾ–ಬಿರ್ಲಾ'ಗಳ ಜಾಗದಲ್ಲಿ ಈಗ–'ಅಂಬಾನಿ–ಅದಾನಿ'ಗಳ ಹೆಸರುಗಳು ಕೇಳಿ ಬರುತ್ತಿದೆ. ಕೆಲವೇ ಶಬ್ದಗಳಲ್ಲಿ ಹೇಳುವುದಾದರೆ ಇದೇ ನಿಜವಾದ 'ಅಭಿವೃದ್ಧಿ'. ಇನ್ನು ಸಾಮಾಜಿಕ ಪ್ರಶ್ನೆಗಳ ಬಗೆಗೆ ನೋಡಿದರೆ, ಪ್ರೀತಿಸಿ ಮದುವೆಯಾದ ಯುವ ಜೋಡಿಗಳನ್ನು ಬಾಳಲು ಬಿಡದೇ ಮರ್ಯಾದೆ ಹೆಸರಿನಲ್ಲಿ ಕೊಲೆ ಮಾಡುವ ಪ್ರವೃತ್ತಿ ಹೆಚ್ಚುತ್ತಿದೆ. ಅದರಲ್ಲಿಯೂ ತಳಸಮುದಾಯದ ಯುವಕ–ಯುವತಿಯರನ್ನು ಕೊಂದು ಹಾಕುವ ಪೈಶಾಚಿಕ ಕೃತ್ಯಗಳು ಹೆಚ್ಚುತ್ತಿವೆ. ಈ ಯಾವುದರ ಬಗೆಗೂ ಗಮನಿಸಿದೇ, ಧಾರ್ಮಿಕ ಅಲ್ಪಸಂಖ್ಯಾತರ ಬಗೆಗೆ, ಅದರಲ್ಲೂ ಮುಖ್ಯವಾಗಿ ಮುಸ್ಲೀಮರ ಬಗೆಗೆ ದ್ವೇಷ ಹರಡುವುದನ್ನೇ ದೇಶಪ್ರೇಮ ಎಂದು ಬಿಂಬಿಸುವ ಪ್ರವೃತ್ತಿ ವ್ಯಾಪಕವಾಗುತ್ತಿದೆ. ಇಂತಹ ವಿಷಯ ವಾತಾವರಣದಲ್ಲಿ ಈ ಪರಿಸ್ಥಿತಿಯನ್ನು ಬದಲಿಸಿ ಸಮಾನತೆ, ಸಾಮಾಜಿಕ ನ್ಯಾಯ, ಸಮೃದ್ಧಿಯನ್ನು ತರುವಂತಹ ಜನರ ಬದುಕಿನ ನಿಜವಾದ ಪ್ರಶ್ನೆಗಳನ್ನು ಮುಂಚೂಣಿಗೆ ತರುವುದೇ ಭಗತ್ ಸಿಂಗ್ ಮತ್ತು ಸಂಗಾತಿಗಳಿಗೆ ನಾವು ಸಲ್ಲಿಸುವ ಗೌರವ. ಸರ್ವರಿಗು ಸಮಪಾಲು ಸರ್ವರಿಗು ಸಮಬಾಳು–ಈ ಹುತಾತ್ಮ ಸಂಗಾತಿಗಳ ಕನಸು ನನಸಾಗಬೇಕು. ●

ಸ್ವಾತಂತ್ರ್ಯ ಚಳುವಳಿಗೆ ಹಿಂದುತ್ವವಾದಿಗಳ ದ್ರೋಹ ಮತ್ತು ಬ್ರಿಟೀಷರೊಂದಿಗೆ ಶಾಮೀಲಾತಿ




ಬಂದರು. ಪ್ರಪಂಚದ ಮೂಲೆಮೂಲೆಗೂ ಸಂಘದ ಕೀರ್ತಿ ಹರಡಿತು.
ನಂತರ ಗೋಹತ್ಯಾ ನಿಷೇಧ ಚಳವಳಿಯ ನೇತೃತ್ವ ವಹಿಸಿದ ಗುರೂಜಿ ಜನಮನದಲ್ಲಿ ಸಂಸ್ಕೃತಿ, ಧರ್ಮಗಳ



ಮಾ. ಸ. ಗೋಳವಲಕರ್ / ೨೫೫
ಶ್ರದ್ಧಾಬಿಂದುವಾದ ಗೋವಿನ ಬಗೆಗೆ ಗೌರವಭಾವನೆ ಮೂಡುವಂತೆ ಮಾಡಿ ಸರಕಾರಕ್ಕೆ ಜನರ ಭಾವನೆಗಳನ್ನು ತಿಳಿಸಿದರು. ಐವತ್ತನಾಲ್ಕು ಸಾವಿರ ಸ್ವಯಂಸೇವಕರು ದೇಶಾದ್ಯಂತ ಎಂಬತ್ತನಾಲ್ಕು ಸಾವಿರ ಗ್ರಾಮಗಳಲ್ಲಿ ಸಂಚರಿಸಿ ಒಂದು ಕೋಟಿ ಎಪ್ಪತ್ತನಾಲ್ಕು ಲಕ್ಷ ಎಂಬತ್ತೊಂಬತ್ತು ಸಾವಿರದ ಮುನ್ನೂರ ಮುವತ್ತೆರಡು ಜನರ ಸಹಿ ಸಂಗ್ರಹಿಸಿದ್ದರು.

ಆರೆಸ್ಸೆಸ್‌ಗೆ ಸೇರಿದ ರಾಷ್ಟ್ರೋತ್ಥಾನ ಸಾಹಿತ್ಯ–(ಭಾರತ–ಭಾರತಿ ಪುಸ್ತಕ ನಂ>97)– ಗೋಲ್ವಾಲ್ಕರ್ ಜೀವನ ಚರಿತ್ರೆ – 1934 ರಿಂದಲೂ ಆರೆಸ್ಸೆಸ್‌ನ ನೇತಾರರಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ಬಗ್ಗೆ, ಅಥವಾ ಆರೆಸ್ಸೆಸ್ ಕಾರ್ಯಕರ್ತರನ್ನು ತೊಡಗಿಸಿದ ಬಗೆಗೆ ಒಂದು ವಾಕ್ಯವೂ ಇಲ್ಲ. 'ಗೋ ರಕ್ಷಣೆ'ಗಾಗಿ ಚಳುವಳಿ ಮಾಡಿದ ಬಗೆಗೆ ಮಾತ್ರ ಸಾಕಷ್ಟು ವಿವರಗಳಿವೆ. (ಪುಟ–34–35)


ಆರೆಸ್ಸೆಸ್‌ಗೆ ಸೇರಿದ–ರಾಷ್ಟ್ರೋತ್ಥಾನ ಸಾಹಿತ್ಯ–ಭಾರತ–ಭಾರತಿ ಪುಸ್ತಕ–98–(ಇಂಗ್ಲೀಷ್)– ಕೇಶವ ಬಲಿರಾಮ ಹೆಡ್ಗೇವಾರ್ ಜೀವನ ಚರಿತ್ರೆ–ಭಾರತೀಯರ ನಡುವೆ ಹಿಂದೂ–ಮುಸ್ಲಿಮ್ ಎಂಬ ಒಡಕನ್ನು ಬ್ರಿಟೀಷರು ಹುಟ್ಟು ಹಾಕಿದ್ದರಿಂದಾಗಿ, ಬ್ರಿಟೀಷ್ ಆಡಳಿತದ ನೊಗವನ್ನು ಕಿತ್ತೆಸೆಯಬೇಕಾದರೆ ಮುಖ್ಯವಾಗಿ ಹಿಂದೂಗಳನ್ನು ಸಂಘಟಿಸಬೇಕು ಎಂದು ಹೆಡ್ಗೆವಾರರು ತೀರ್ಮಾನಿದರಂತೆ.!! ಗಮನಿಸಿ, ಹಿಂದೂ–ಮುಸ್ಲಿಮರನ್ನು ಒಗ್ಗೂಡಿಸಿ ಸ್ವಾತಂತ್ರ್ಯ ಹೋರಾಟ ಬಲಗೊಳಿಸುವ ತೀರ್ಮಾನವನ್ನಲ್ಲ ಮಾಡಿದ್ದು.(ಪುಟ–31)

ಕಾಂಗ್ರೆಸ್ ಕಾರ್ಯಕರ್ತರಾಗಿದ್ದಾಗ ಅಷ್ಟೆ ಸ್ವಾತಂತ್ರ್ಯ ಹೋರಾಟ ಇವರದ್ದು, 1925 ರಲ್ಲಿ ಆರೆಸ್ಸೆಸ್ ಅನ್ನು ಸ್ಥಾಪಿಸಿ ಅದರ ಸರಸಂಘಚಾಲಕರಾದರೂ ಸಹ ಇಡೀ ಪುಸ್ತಕದಲ್ಲಿ ಎಲ್ಲಿಯೂ ಆರೆಸ್ಸೆಸ್ ಅನ್ನು ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿದ ಬಗ್ಗೆ ಒಂದು ಅಕ್ಷರವೂ ಇಲ್ಲ. 1930 ರಲ್ಲಿ ಕಾಂಗ್ರೆಸ್ ಕರೆ ನೀಡಿದ ಸ್ವಾತಂತ್ರ್ಯ ಹೋರಾಟದಲ್ಲಿ ತಾವೊಬ್ಬರು ಮಾತ್ರ ಒಮ್ಮೆ ಪಾಲ್ಗೊಂಡಿದ್ದಾರೆ. ಅದು ಜೈಲಿನಲ್ಲಿ ಸ್ವಾತಂತ್ರ್ಯ ಹೋರಾಟಗಾರರನ್ನು ಭೇಟಿಯಾಗಿ ಹಿಂದುತ್ವದ ಕಡೆಗೆ ಸೆಳೆಯುವುದಕ್ಕಾಗಿ ಎಂದು ಅವರೇ ಹೇಳಿಕೊಂಡಿದ್ದಾರೆ.!!! (ಪುಟ–36) ಉಳಿದಂತೆ ಸ್ವಾತಂತ್ರ್ಯ ಹೋರಾಟದಿಂದ ಗಾವುದ ದೂರ.




But as time passed, the Non-cooperation movement cooled down. Indiscipline and selfishness had reared their ugly heads in the society. The conspiring Britishers created rifts and rivalries between Hindus and Muslims.

After observing all this, Doctor Hedgewar came to the conclusion: If the yoke of the British slavery has to be overthrown, we have to mainly trust the Hindus. We have to awaken patriotism, discipline and bravery. Then only will the Muslims shed their separatist tendencies and stand shoulder to shoulder with the Hindus in the nationalist movement.


In April 1930, Mahatma Gandhi gave a call far 'Satyagraha' against the British Government. It echoed in the far corners of the country. Doctorji decided to participate in the proposed Satyagraha. He also wanted to use the prison-stay to cultivate youths from other places, as that would enable him to spread the Sangh ideology to different parts of the country. He participated in the famous 'Jungle Satyagraha' along with others. They were promptly arrested by the Government. Doctorji was sentenced to nine months' imprisonment and sent to Akola jail.


ಬ್ರಿಟೀಷರಿಗೆ ಶರಣಾಗತಿ ಸಾರುವ ಸಾವರ್ಕರ್ ಕ್ಷಮಾಪಣ ಪತ್ರಗಳು

ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಪ್ರತ್ಯೇಕ ಪಾಕಿಸ್ತಾನ ರಚನೆಯ ಒಂದು ವಿಷಯ ಬಿಟ್ಟರೆ ಬೇರೆ ಎಲ್ಲ ವಿಷಯಗಳಲ್ಲಿ ಸಾವರ್ಕರ್ ಅವರಿಗೆ ಸಂತೃಪ್ತಿ ಲಭಿಸಿತ್ತಂತೆ...!!


"... ಕಡೆಯದಾಗಿ ಖಾವಂದರೇ, ನಾನು 1911 ರಲ್ಲಿ ಸಲ್ಲಿಸಿದ್ದ ಕ್ಷಮಾದಾನ ಅರ್ಜಿಯನ್ನು ಸಂಪೂರ್ಣವಾಗಿ ಓದುವ ಕರುಣೆ ತೋರವಂತೆ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಇದನ್ನು ಭಾರತ ಸರಕಾರಕ್ಕೆ ರವಾನಿಸಲು ಅನುಮತಿ ನೀಡವಂತೆ ಕೋರುತ್ತೇನೆ. ಭಾರತದ ರಾಜಕಾರಣದ ಇತ್ತೀಚಿನ ಬೆಳವಣಿಗೆಗಳು ಮತ್ತು ಸರಕಾರದ ಸಹಕಾರಿ ಧೋರಣೆಯ ಪರಿಣಾಮ ಮತ್ತೊಮ್ಮೆ ಸಾಂವಿಧಾನಿಕ ಮಾರ್ಗವನ್ನು ಸುಗಮಗೊಳಿಸಿದೆ. ಹಾಗಾಗಿ 1906–07 ಸಂದರ್ಭದಲ್ಲಿದ್ದ ಉನ್ಮಾದದ ಪ್ರಕ್ಷುಬ್ದ ಸನ್ನಿವೇಶದಲ್ಲಿ ಶಾಂತಿ ಮತ್ತು ಅಭಿವೃದ್ಧಿಯಿಂದ ವಿಮುಖರಾಗಿ ನಾವುಗಳು ಅನುಸರಿಸಿದ ಕಠಿಣ ಮಾರ್ಗಗಳನ್ನು ಇಂದು ಭಾರತದ ಏಳಿಕೆಯನ್ನು ಬಯಸುವ, ಮಾನವೀಯ ಹೇದಯ ಹೊಂದಿರುವ ಯಾವುದೇ ವ್ಯಕ್ತಿಯೂ ಅನುಸರಿಸುವುದಿಲ್ಲ. ಆದ್ದರಿಂದ ಸರಕಾರ ಈ ಔದಾರ್ಯದ ನೆಲೆಯಲ್ಲಿ ಕರುಣೆ ತೋರಿ ನನಗೆ ಬಿಡುಗಡೆಯ ಭಾಗ್ಯವನ್ನು ದಯಪಾಲಿಸಿದಲ್ಲಿ ನಾವು ಸಾಂವಿಧಾನಿಕ ಮುನ್ನಡೆಯ ಪ್ರಖಂಡ ಸಮರ್ಥಕನಾಗಿ ಮುಂದುವರಿಯುತ್ತೇನೆ. ಈ ಮುನ್ನಡೆಯ ಮುಂಚೂಣಿಯಲ್ಲಿರುವ ಬ್ರಿಟೀಷ್ ಸರಕಾರಕ್ಕೆ ನಿಷ್ಠೆಯಿಂದ ಬದ್ಧನಾಗಿರುತ್ತೇನೆ.

ನನ್ನನ್ನು ಮಾರ್ಗದರ್ಶಕನಂತೆ ಪರಿಗಣಿಸುತ್ತಿದ್ದ ಭಾರತ ಮತ್ತು ವಿದೇಶಗಳಲ್ಲಿನ ಸಾವಿರಾರು ದಾರಿ ತಪ್ಪಿದ ಯುವಕರು ನನ್ನಂತೆ ಸಾಂವಿಧಾನಿಕ ಮಾರ್ಗಕ್ಕೆ ಮರಳಿ ಬರುತ್ತಾರೆ. ನಾನು ಸರಕಾರದಲ್ಲಿ, ಸರಕಾರದ ಇಚ್ಛೆಯಂತೆ ಯಾವುದೇ ಹುದ್ದೆಯಲ್ಲದಾರೂ ಕೆಲಸ ಮಾಡಲು ಸಿದ್ದನಿದ್ದೇನೆ. (ಉಲ್ಲೇಖ –:ಪುಸ್ತಕ: 'ಭಗತ್ ಸಿಂಗ್, ವೀರ್ ಸಾವರ್ಕರ್'–ಲಡಾಯಿ ಪ್ರಕಾಶನ..} ಮೂಲ ಆರ್.ಸಿ. ಮಜುಂದಾರ್, ಅಂಡಮಾನ್ ದಂಡನೀಯ ನೆಲೆಗಳು, ಪ್ರಕಟಣಾ ವಿಭಾಗ, 1975.}




...of allowing this most harmless vent to my ... and will be pleased to forward this petition may with his own recommendations? to His Excellency ...eroy of India.

I beg to remain,
Sir,
Your most obedient servant,
Sd. V. D. Savarkar.
Convict no. 32778


ಪಾಕಿಸ್ತಾನ ಎಂಬ ಬೇರೆಯೇ ರಾಷ್ಟ್ರ ನಿರ್ಮಾಣವಾದದ್ದು ಅವರಿಗೆ ಸಹ್ಯವಾಗಿರಲಿಲ್ಲ. ಈ ಕೊರಗಿನ ಹೊರತು ಅವರಿಗೆ ಜೀವನದಲ್ಲಿ ಉಳಿದೆಲ್ಲ ವಿಷಯಗಳಲ್ಲಿ ಸಂತೃಪ್ತಿ ಲಭಿಸಿತು. ತಮ್ಮ ಜೀವನದ ಕೊನೆಗಾಲದಲ್ಲಿ ವಿನಾಯಕ ಸಾವರ್ಕರ್ ಅನ್ನವನ್ನು ವರ್ಜಿಸಿದರು. ೧೯೬೬ ರ ಫೆಬ್ರುವರಿ ೨೬ರಂದು ಅಸುನೀಗಿದರು. ಆಗ ಅವರಿಗೆ ೮೩ ವರ್ಷ.

ವಿದ್ಯುತ್ ಖಾಸಗೀಕರಣದತ್ತ ಕರ್ನಾಟಕದ ಮತ್ತೊಂದು ಹೆಜ್ಜೆ

ಪ್ರಿಪೇಯ್ಡ್ ಮೀಟರ್ ಅಳವಡಿಕೆಗೆ ಕೆಇಆರ್‌ಸಿ ಕರಡು ಅಧಿಸೂಚನೆ

ಗೃಹಬಳಕೆಯ ವಿದ್ಯುತ್ ಗ್ರಾಹಕರಿಗೆ, ಪಂಪ್ ಸೆಟ್ ಬಳಕೆದಾರ ರೈತರಿಗೆ ಬೀಳಲಿದೆ ಮತ್ತಷ್ಟು ಬರೆ

ಒಕ್ಕೂಟ ಸರ್ಕಾರದ ವಿದ್ಯುತ್ ಸಚಿವರಾದ ಆರ್.ಕೆ. ಸಿಂಗ್ ಅವರು ಲೋಕಸಭೆಯಲ್ಲಿ ನೀಡಿದ ಲಿಖಿತ ಹೇಳಿಕೆಯಲ್ಲಿ "ಭಾರತ ಸರ್ಕಾರವು 2021 ರ ಜುಲೈ 20 ರಂದು "ರಿವಾಂಪ್ಡ್ ಡಿಸ್ಟ್ರಿಬ್ಯೂಷನ್ ಸೆಕ್ಟರ್ ಸ್ಕೀಮ್ (RDSS) ಅನ್ನು ಪ್ರಾರಂಭಿಸಿದೆ, ಇದರ ಅಡಿಯಲ್ಲಿ ಎಲ್ಲಾ ದೇಶೀಯ ಗ್ರಾಹಕರಿಗೆ 25 ಕೋಟಿ ಸ್ಮಾರ್ಟ್ ಪ್ರಿಪೇಯ್ಡ್ ಮೀಟರ್‌ಗಳ ನಿಯೋಜನೆಯನ್ನು ಮಾರ್ಚ್, 2025 ರವರೆಗೆ ಕಲ್ಪಿಸುವ ಗುರಿ ಇಟ್ಟುಕೊಳ್ಳಲಾಗಿದೆ" ಎಂದು ತಿಳಿಸಿದ್ದರು. ಇದನ್ನು ಕರ್ನಾಟಕದಲ್ಲಿ ಜಾರಿಗೆ ತರಲು ರಾಜ್ಯ ಸರ್ಕಾರ ಮುಂದಾಗಿದೆ. ರಾಜ್ಯದಲ್ಲಿ ಆಡಳಿತ ನಡೆಸುವ ಸರ್ಕಾರ ಕಾಂಗ್ರೆಸ್ ಪಕ್ಷದ್ದಾದರೇನು, ಬಿಜೆಪಿಯದ್ದಾದರೇನು, ಅವರು ಖಾಸಗೀಕರಣದ ನೀತಿಗಳನ್ನು ಜಾರಿಗೆ ತರಲು ಶ್ರಮಿಸುತ್ತಲೇ ಇರುತ್ತಾರೆ. ಕರ್ನಾಟಕದ ಕಾಂಗ್ರೆಸ್ ಸರ್ಕಾರ 'ಸುಧಾರಣೆ' ಹೆಸರಿನಲ್ಲಿ ವಿದ್ಯುತ್ ಖಾಸಗೀಕರಣ ಮಾಡಲು ಹೊರಟಿರುವುದರಲ್ಲಿ ನಾವಿದನ್ನು ಸ್ಪಷ್ಟವಾಗಿ ಕಾಣಬಹುದು. ರಾಜ್ಯದಲ್ಲಿ ಪ್ರಿಪೇಯ್ಡ್ ಮೀಟರ್ ಅಳವಡಿಕೆಗೆ ಕೆಇಆರ್‌ಸಿ ಮುಂದಾಗಿದೆ.

ಸ್ಮಾರ್ಟ್ ಮೀಟರ್ ಅಳವಡಿಕೆಯ ನಂತರ ಈಗ ಪ್ರಿಪೇಯ್ಡ್ (ಪೂರ್ವ ಪಾವತಿ) ವಿದ್ಯುತ್ ಮೀಟರ್ ಅಳವಡಿಕೆ ಸಂಬಂಧ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (KERC) ಅಧಿಸೂಚನೆ ಹೊರಡಿಸಿದೆ. ಪ್ರಸ್ತಾವಿತ ಕರಡು "ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಪೂರ್ವ-ಪಾವತಿಸಿದ ಸ್ಮಾರ್ಟ್ ಮೀಟರಿಂಗ್) ನಿಯಮಗಳು, 2023" ಎಂಬುದಾಗಿದೆ. ಇದನ್ನು 16-08-2023 ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ. ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಿಸಿದ ದಿನಾಂಕದಿಂದ 30 ದಿನಗಳೊಳಗೆ ಆಕ್ಷೇಪಣೆ ಮತ್ತು ಸಲಹೆಗಳನ್ನು ಸಲ್ಲಿಸಲು ಕೋರಲಾಗಿತ್ತು. ಈ ನಿಯಮಗಳು ಕರ್ನಾಟಕದ ಅಧಿಕೃತ ಗೆಜೆಟ್‌ನಲ್ಲಿ ಪ್ರಕಟವಾದ ದಿನಾಂಕದಿಂದ ಇಡೀ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ ಜಾರಿಗೆ ಬರುತ್ತವೆ ಎಂದು ಅಧಿಸೂಚನೆಯಲ್ಲಿ ಹೇಳಲಾಗಿದೆ.

ಪೂರ್ವ-ಪಾವತಿಸಿದ ಮೀಟರ್

ಎಲ್ಲಾ ವರ್ಗದ ವಿದ್ಯುತ್ ಗ್ರಾಹಕರಿಗೆ (ಹೊಸ ಮತ್ತು ಅಸ್ತಿತ್ವದಲ್ಲಿರುವ ಗ್ರಾಹಕರು) ಪೂರ್ವ-ಪಾವತಿಸಿದ ಮೀಟರ್ (ಪ್ರಿಪೇಯ್ಡ್ ಮೀಟರ್) ಗಳ ಅಡಿಯಲ್ಲಿ ಸೌಲಭ್ಯವನ್ನು ಪಡೆದುಕೊಳ್ಳಬಹುದು. ಆದಾಗ್ಯೂ, ಪ್ರಿ-ಪೇಯ್ಡ್ ಸ್ಮಾರ್ಟ್ ಮೀಟರ್ ಮೂಲಕ ವಿದ್ಯುತ್ ಪೂರೈಕೆಯನ್ನು ಪಡೆಯುವುದು ಗ್ರಾಹಕರ ಆಯ್ಕೆಯಾಗಿರುತ್ತದೆ ಎಂದು ಆಯೋಗ ಹೇಳಿದೆಯಾದರೂ, ಇದು ನಿದಾನವಾಗಿ ಎಲ್ಲರಿಗೂ ಕಡ್ಡಾಯ ಮಾಡುವುದಂತೂ ಖಂಡಿತ. ಗ್ರಾಹಕರು ತಮ್ಮ ಸ್ವಂತ ವೆಚ್ಚದಲ್ಲಿ ಸಂಬಂಧಿತ ಮಾನದಂಡಗಳು/IS ಗೆ ಅನುಗುಣವಾಗಿ ಮಾರುಕಟ್ಟೆಯಲ್ಲಿ ಮೀಟರ್ ಅನ್ನು ಖರೀದಿಸಬೇಕು.



ಕಾರ್ಪೊರೇಟ್‌ಗಳಿಗೆ ವಿದ್ಯುತ್ 'ಸುಧಾರಣೆ' ಲಾಭ

ನರೇಂದ್ರ ಮೋದಿ ಸರ್ಕಾರವು ವಿದ್ಯುತ್ ಕ್ಷೇತ್ರದಲ್ಲಿ ವೇಗವಾಗಿ 'ಸುಧಾರಣೆ'ಗಳನ್ನು ಜಾರಿಗೆ ತರುತ್ತಿದೆ. ರೈತರ ಐತಿಹಾಸಿಕ ಪ್ರತಿಭಟನೆಯ ನಂತರ 2021 ರಲ್ಲಿ ಕೃಷಿ ಕಾನೂನುಗಳನ್ನು ಹಿಂಪಡೆಯುವಂತೆ ಮಾಡಲು ಸಾಧ್ಯವಾಯಿತು. ಆಗ ರೈತರ ಸಮಸ್ಯೆಗಳನ್ನು ಪರಿಗಣಿಸದೆ ವಿದ್ಯುತ್ ಕಾಯ್ದೆ (ತಿದ್ದುಪಡಿ) ಮಸೂದೆಯನ್ನು ತರುವುದಿಲ್ಲ ಎಂದು ಸರ್ಕಾರ ಭರವಸೆ ನೀಡಿತ್ತು. ಆದರೆ ಇದನ್ನು ಉಲ್ಲಂಘಿಸಲಾಗಿದೆ.

ವಿದ್ಯುತ್ (ವಿತರಣೆ) ಕಾಯಿದೆ-1948 ಮತ್ತು ರಾಜ್ಯ ವಿದ್ಯುಚ್ಛಕ್ತಿ ಮಂಡಳಿಗಳನ್ನು ನಿಯಂತ್ರಿಸುವ ನಿಯಮಗಳು ಸಮಾಜಕ್ಕೆ, ಸಾಮಾಜಿಕ-ಆರ್ಥಿಕ ಅಭಿವೃದ್ಧಿ ಮತ್ತು ಕೈಗೆಟುಕುವ ದರವನ್ನು ಒತ್ತಿಹೇಳುತ್ತವೆ. ಆಹಾರ ಭದ್ರತೆ, ಕೃಷಿ ಅಭಿವೃದ್ಧಿ ಮತ್ತು ಬಡವರಿಗೆ ವಿದ್ಯುತ್ ಒದಗಿಸುವ ಉದ್ದೇಶದಿಂದ ವಿದ್ಯುತ್ ಸಬ್ಸಿಡಿ ನೀಡಲಾಯಿತು. ಇದರಿಂದ ಗ್ರಾಹಕರಿಗೆ ಕೈಗೆಟುಕುವ ದರದಲ್ಲಿ ವಿದ್ಯುತ್ ದೊರೆಯುತ್ತಿದೆ. ಹೆಚ್ಚುವರಿ ವೆಚ್ಚವನ್ನು ಸರ್ಕಾರದ ಬಜೆಟ್ ಹಂಚಿಕೆಗಳ ಮೂಲಕ ಪೂರೈಸಲಾಗುತ್ತದೆ. ಆದರೆ, ನವ ಉದಾರವಾದಿ ನೀತಿಗಳು ಮತ್ತು ಕಾರ್ಪೊರೇಟ್ ಏಕಸ್ವಾಮ್ಯಗಳು ಈ ವ್ಯವಸ್ಥೆಯನ್ನು ಬುಡಮೇಲು ಮಾಡಲು ಪ್ರಯತ್ನಿಸಿದವು. ವಾಜಪೇಯಿ ಆಡಳಿತದ ಅವಧಿಯ 2001 ರಲ್ಲಿ ಅಮೆರಿಕದ ಬಂಡವಾಳವನ್ನು ಆಕರ್ಷಿಸಲು, ವಿದ್ಯುತ್ ಮಸೂದೆಯನ್ನು ರೂಪಿಸಿದರು. ಇದು ವಿದ್ಯುತ್ ವಲಯವನ್ನು ಅನಿಯಂತ್ರಿತಗೊಳಿಸಿತು ಮತ್ತು ಖಾಸಗಿ ಕಂಪನಿಗಳಿಗೆ ಉತ್ಪಾದನೆ, ಪ್ರಸರಣ ಮತ್ತು ವಿತರಣೆಯಲ್ಲಿ ಮುಕ್ತ ನಿಯಂತ್ರಣವನ್ನು ನೀಡಿತು. ವಿದ್ಯುತ್ ಕಾರ್ಮಿಕರು, ರೈತರು ಮತ್ತು ಕಾರ್ಮಿಕ ವರ್ಗದ ತೀವ್ರ ವಿರೋಧದಿಂದ ಅಂದು ಅಂತಹ ಪ್ರಯತ್ನಗಳನ್ನು ವಿಫಲಗೊಳಿಸಲಾಯಿತು.

2003 ರ ಸುಂಕ ನಿಯಂತ್ರಣ ಕಾಯ್ದೆ

2001ರಲ್ಲಿ ವಾಜಪೇಯಿ ಸರಕಾರ ತಂದಿದ್ದ ವಿದ್ಯುತ್ ಮಸೂದೆ ಹಲವು ಬದಲಾವಣೆಗಳೊಂದಿಗೆ 2003ರಲ್ಲಿ ಸಂಸತ್ತಿನಲ್ಲಿ ಅಂಗೀಕಾರವಾಯಿತು. 2003 ರ ಸುಂಕ ನಿಯಂತ್ರಣ ಕಾಯ್ದೆಯ ಸೆಕ್ಷನ್ 61 ರ ಪ್ರಕಾರ ವಿದ್ಯುತ್ ಉತ್ಪಾದನೆ, ಪ್ರಸರಣ ಮತ್ತು ವಿತರಣೆಯು ವಾಣಿಜ್ಯ ಆಧಾರದ ಮೇಲೆ ಇರಬೇಕು, ವಿದ್ಯುತ್ ಒದಗಿಸುವ ವೆಚ್ಚವನ್ನು ಕಡಿಮೆ ಮಾಡಲು ಸಬ್ಸಿಡಿಗಳನ್ನು ಕಡಿಮೆ ಮಾಡಲಾಗುವುದು ಎಂಬುದು ಕಾನೂನಿನ ಪ್ರಮೇಯವಾಗಿತ್ತು.

ವಿದ್ಯುಚ್ಛಕ್ತಿ (ತಿದ್ದುಪಡಿ) ಕಾಯಿದೆ, 2007

ವಿದ್ಯುಚ್ಛಕ್ತಿ (ತಿದ್ದುಪಡಿ) ಕಾಯಿದೆ, 2007 ಸಬ್ಸಿಡಿಯನ್ನು ತೆಗೆದುಹಾಕಲು ಇದ್ದ ಕಾಯಿದೆಯ ಸೆಕ್ಷನ್ ಅನ್ನು ತಿದ್ದುಪಡಿ ಮಾಡಿದೆ. ಮೊದಲ ಯುಪಿಎ ಸರ್ಕಾರಕ್ಕೆ ಸಿದ್ಧಪಡಿಸಿದ 'ಕನಿಷ್ಠ ಸಾಮಾನ್ಯ ಕಾರ್ಯಕ್ರಮ' ಪಟ್ಟಿಯಲ್ಲಿ ಎಡಪಕ್ಷಗಳ ಮಧ್ಯಪ್ರವೇಶ ಇದಕ್ಕೆ ಕಾರಣವಾಗಿತ್ತು. ಆದರೆ 2014ರಲ್ಲಿ ಮೋದಿ ಅಧಿಕಾರಕ್ಕೆ ಬಂದ ಆರು ತಿಂಗಳಲ್ಲೇ ಪರಿಸ್ಥಿತಿಯನ್ನು ಸಂಪೂರ್ಣವಾಗಿ ವಿಶ್ಲೇಷಿಸದೆ ಮತ್ತೊಂದು ಕರಡು ಮಸೂದೆ ಮಂಡಿಸಿದರು. ಕೃಷಿ ಮಸೂದೆ ಮತ್ತು ಕಾರ್ಮಿಕ ಮಸೂದೆ ಸೇರಿದಂತೆ ಮೂರು ಮಸೂದೆಗಳನ್ನು ಸಂಸತ್ತಿನಲ್ಲಿ ಏಪ್ರಿಲ್ 17, 2020 ರಂದು ಮತ್ತು ನಂತರ ಆಗಸ್ಟ್ 8, 2022 ರಂದು ಮಂಡಿಸಲಾಯಿತು. ಜನರು ಕೊರೋನಾ ವೈರಸ್ ಸಾಂಕ್ರಾಮಿಕದಿಂದ ತತ್ತರಿಸಿ ಹೋಗಿದ್ದ ಸಮಯದಲ್ಲಿ ಏಕಸ್ವಾಮ್ಯ ಬಂಡವಾಳದ ಆಜ್ಞೆಯ ಮೇರೆಗೆ ಇದನ್ನು ನಡೆಸಲಾಯಿತು.



ಕೇಂದ್ರಾಡಳಿತ ಪ್ರದೇಶಗಳ ಮೇಲೆ ಹೇರುವ ಪ್ರಯತ್ನ

ಮೋದಿ ಸರ್ಕಾರವು ವಿದ್ಯುತ್ ಕಾಯ್ದೆ ತಿದ್ದುಪಡಿ ಮತ್ತು ಸ್ಮಾರ್ಟ್ ಮೀಟರ್‌ಗಳೊಂದಿಗೆ ಬಂದಾಗ, ವಿದ್ಯುತ್ ಕ್ಷೇತ್ರದ ಸುಧಾರಣೆಗಳಿಗೆ ವಿರೋಧ ಹುಟ್ಟಿಕೊಂಡಿತು. ನಂತರ ಭಾರತದ ಬುದ್ಧಿವಂತ ಆಡಳಿತ ವರ್ಗವು ಮೊದಲು ಕೇಂದ್ರಾಡಳಿತ ಪ್ರದೇಶಗಳಲ್ಲಿ ಅವುಗಳನ್ನು ಜಾರಿಗೆ ತರಲು ಪ್ರಯತ್ನಿಸಿತು. ದಾದರ್ ಮತ್ತು ನಗರ್ ಹವೇಲಿಯ ಎಲ್ಲಾ ಆಸ್ತಿಗಳನ್ನು ಗುಜರಾತ್ ಮೂಲದ ಟೊರೆಂಟ್ ಗೆ ವರ್ಗಾಯಿಸಲಾಯಿತು. 2022-23 ರಲ್ಲಿ ಕಂಪನಿಯ ನಿವ್ವಳ ಲಾಭವು 458.7 ಕೋಟಿ ರೂ.ಗಳಿಂದ 2164.6 ಕೋಟಿ ರೂ.ಗೆ 371 ಪ್ರತಿಶತ ಏರಿಕೆಯಾಗಿದೆ. ಇದು ಆದಾಯದ ಮೇಲೆ ಸುಮಾರು 80 ಪ್ರತಿಶತದಷ್ಟು ಹೆಚ್ಚಾಗಿದೆ. ಕಾಲಾನಂತರದಲ್ಲಿ, ಗ್ರಿಡ್ ತಂತ್ರಜ್ಞಾನದ ಆಧುನೀಕರಣದಲ್ಲಿ ಭಾರಿ ವೆಚ್ಚವನ್ನು ಉಲ್ಲೇಖಿಸಿ ಗ್ರಾಹಕರ ಮೇಲೆ ಭಾರಿ ಹೊರೆಗಳನ್ನು ಹಾಕಲಾಗಿದೆ. ಮೋದಿ ಆಡಳಿತದಲ್ಲಿ, ಅದಾನಿ, ಅಂಬಾನಿ ಮತ್ತು ಟಾಟಾ ಕಂಪನಿಗಳು ವಿದ್ಯುತ್ ಕ್ಷೇತ್ರದಲ್ಲಿ ಪ್ರಾಬಲ್ಯ ಹೊಂದಿವೆ. ಅದಾನಿ ಪವರ್ ಲಿಮಿಟೆಡ್ 13,650 MW ಸಾಮರ್ಥ್ಯದೊಂದಿಗೆ NTPC ನಂತರ ಭಾರತದ ಅತಿದೊಡ್ಡ ಖಾಸಗಿ ಉಷ್ಣ ವಿದ್ಯುತ್ ಉತ್ಪಾದಕ ಎಂದು ಹೇಳಿಕೊಳ್ಳುತ್ತದೆ. ಅದಾನಿ ಗ್ರೀನ್ ಎನರ್ಜಿ ಲಿಮಿಟೆಡ್ (AGEL) ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಅತಿ ದೊಡ್ಡ ಹೂಡಿಕೆದಾರ. ಅದಾನಿಯು ಭಾರತದ ಖಾಸಗಿ ಶಾಖೋತ್ಪನ್ನ ವಿದ್ಯುತ್ ಉತ್ಪಾದನೆಯ 22 ಪ್ರತಿಶತವನ್ನು ನಿಯಂತ್ರಿಸುತ್ತದೆ, ಹೆಚ್ಚಿನ ಸಂಖ್ಯೆಯ ಸೌರ ಮತ್ತು ಗಾಳಿ ಫಾರ್ಮ್‌ಗಳು ಮತ್ತು 51 ಪ್ರತಿಶತ ಖಾಸಗಿ ವಿದ್ಯುತ್ ಪ್ರಸರಣವನ್ನು ಹೊಂದಿದೆ. ಇತರ ವಿದ್ಯುತ್ ಕಂಪನಿಗಳಲ್ಲಿ ಅನಿಲ್ ಅಂಬಾನಿಯವರ ರಿಲಯನ್ಸ್ ಪವರ್ ಲಿಮಿಟೆಡ್ ಮತ್ತು ಟಾಟಾ ಪವರ್ ಲಿಮಿಟೆಡ್ ಸೇರಿವೆ.

ಏಪ್ರಿಲ್ 2025 ರ ಗುರಿ

ಕೇಂದ್ರ ಸರ್ಕಾರವು ಎಲ್ಲಾ ಕೊಳವೆಬಾವಿಗಳು ಮತ್ತು ನೀರಾವರಿ ಮೋಟಾರ್‌ಗಳನ್ನು ಸ್ಮಾರ್ಟ್ ಮೀಟರ್‌ಗಳೊಂದಿಗೆ ಸಂಪರ್ಕಿಸಲು ಮತ್ತು ಏಪ್ರಿಲ್ 2025 ರ ವೇಳೆಗೆ ಎಲ್ಲಾ ಕೃಷಿ ವಿದ್ಯುದ್ದೀಕರಣವನ್ನು ನಿಯಂತ್ರಿಸುವ ಗುರಿಯನ್ನು ಹೊಂದಿದೆ. ಪ್ರತಿ ಯೂನಿಟ್ ಗೆ 10 ರೂ. ದಿನಕ್ಕೆ 6 ಗಂಟೆಗಳ ಕಾಲ 34 ಯೂನಿಟ್ ಬಳಸಿದರೆ 7.5 ಅಶ್ವಶಕ್ತಿಯ ಪಂಪ್ ಗೆ 340 ರೂ. ಅಂದರೆ ತಿಂಗಳಿಗೆ ರೂ.10,200 ಮೊದಲೇ ಕೊಟ್ಟು ವಿದ್ಯುತ್ ಖರೀದಿಸಬೇಕಾಗುತ್ತದೆ. ಕೃಷಿಯನ್ನು ಕಾರ್ಪೊರೇಟೀಕರಣ ಮಾಡಲು ಹೊರಟಿರುವ ➚

ಏನಿದು ಪ್ರಿಪೇಯ್ಡ್ ಮೀಟರ್?


ಪ್ರಿಪೇಯ್ಡ್ ಎಂದರೆ ನೀವು ಪಡೆಯುವ ಸೇವೆಗೆ ಮೊದಲೇ ಹಣ ಪಾವತಿಸು ಎಂದರ್ಥ. ಮೊಬೈಲ್ ಬಳಕೆ ಮಾಡುವವರು ಮೊದಲೇ ಒಂದಷ್ಟು ಹಣ ಕೊಟ್ಟು ರೀಚಾರ್ಜ್ ಮಾಡಿಸುತ್ತಾರಲ್ಲಾ ಹಾಗೆ. ಸಾಮಾನ್ಯವಾಗಿ 28 ದಿನಗಳಿಗೆ ಮೊಬೈಲ್ ಮಾಸಿಕ ರೀಚಾರ್ಜ್ ಮಾಡಿಸುತ್ತೇವೆ. 28 ನೇ ದಿನ ಮಧ್ಯರಾತ್ರಿ 12 ಗಂಟೆಗೆ ಸರಿಯಾಗಿ ನಮ್ಮ ಮೊಬೈಲ್ ಸಂಪರ್ಕ ಕಡಿತಗೊಳ್ಳುತ್ತದೆ. ಮತ್ತೆ ಮೊಬೈಲ್ ಕಂಪನಿಗಳು ನಿಗದಿಪಡಿಸಿದ ಯಾವುದಾದರೂ ಒಂದು ಮೊತ್ತ ನೀಡಿ ರೀಚಾರ್ಜ್ ಮಾಡಿಸಬೇಕು. ನಮ್ಮ ಬಳಿ ಹಣ ಇಲ್ಲದಿದ್ದರೆ ಮೊಬೈಲ್ ಬಳಕೆ ಮಾಡಲಾಗದು.

ವಿದ್ಯುತ್ ಪ್ರಿಪೇಯ್ಡ್ ಮೀಟರ್ ಸರಿಸುಮಾರು ಇದೇ ರೀತಿ ಕೆಲಸ ಮಾಡುತ್ತದೆ. ನಮ್ಮ ಮನೆಗೆ ಅಥವಾ ನಮ್ಮ ಕೃಷಿ ಜಮೀನಿನ ಪಂಪ್ ಸೆಟ್ ಗಳಿಗೆ ವಿದ್ಯುತ್ ಸಂಪರ್ಕ ಬೇಕು ಎಂದರೆ ಪ್ರಿಪೇಯ್ಡ್ ಸ್ಮಾರ್ಟ್ ಮೀಟರ್ ಅಳವಡಿಸಿಕೊಳ್ಳಬೇಕು. ವಿತರಣಾ ಕಂಪನಿಗಳು ತಿಂಗಳೊಂದಕ್ಕೆ ನಿಗದಿಪಡಿಸಿದ ಕನಿಷ್ಠ ಮೊತ್ತದ ಜೊತೆಗೆ ನಮಗೆ ಅವಶ್ಯಕವಿರುವ ವಿದ್ಯುತ್ ಗೆ ಮೊದಲೇ ಹಣ ಕೊಟ್ಟು ರೀಚಾರ್ಜ್ ಮಾಡಿಸಬೇಕು. ಉದಾಹರಣೆಗೆ, ಮನೆಗಳಿಗೆ ಒಂದು ಎಚ್ ಪಿ ಸಂಪರ್ಕ ಪಡೆದಿರುವ ಸಾಮಾನ್ಯ ಬಳಕೆದಾರರಿಗೆ ನಿಗದಿತ ಮಾಸಿಕ ಶುಲ್ಕ 100 ರೂ. ಇದೆ. ಬೋರ್ ವೆಲ್ ಕೊರೆದು, ಅದರ ನೀರು ಬಳಕೆ ಮಾಡುವ 3 ಎಚ್.ಪಿ. ಸಂಪರ್ಕ ಪಡೆದಿರುವ ಮನೆಗಳಿಗೆ ಇನ್ನೂ ಹೆಚ್ಚು. (ಖಾಸಗಿಯವರ ತೆಕ್ಕೆಗೆ ಹೋದರೆ ಈ ನಿಗದಿತ ಶುಲ್ಕ ಎಷ್ಟಾಗುತ್ತದೋ ಹೇಳಲಾಗದು. ಕೆಇಆರ್ ಸಿ ಅಧಿಸೂಚನೆಯಲ್ಲಿ ಹೇಳಿರುವಂತೆ, ಒಂದು ತಿಂಗಳಲ್ಲಿ ಸ್ಮಾರ್ಟ್ ಮೀಟರ್‌ನಿಂದ ದಾಖಲಾದ ಗರಿಷ್ಠ ಬೇಡಿಕೆಯು ಮಂಜೂರಾದ ಲೋಡ್ ಅನ್ನು ಮೀರಿದರೆ, ಆ ಬಿಲ್ಲಿಂಗ್ ಸೈಕಲ್‌ನ ಬಿಲ್ ಅನ್ನು ನಿಜವಾದ ದಾಖಲಾದ ಗರಿಷ್ಠ ಬೇಡಿಕೆಯ ಆಧಾರದ ಮೇಲೆ ಲೆಕ್ಕಹಾಕಲಾಗುತ್ತದೆ.) ಇದರ ಜೊತೆಗೆ ಮತ್ತಷ್ಟು ಹಣವನ್ನು ಸೇರಿಸಿ ರೀಚಾರ್ಜ್ ಮಾಡಿಸಬೇಕು. ಈ ಮೊತ್ತಕ್ಕೆ ಸರ್ಕಾರ ವಿಧಿಸುವ ಶೇ. 5 ರಷ್ಟು ತೆರಿಗೆಯೂ ಸೇರುತ್ತದೆ. ನೀವು ಎಷ್ಟು ಹಣವನ್ನು ತುಂಬಿರುತ್ತೀರೋ ಅಷ್ಟು ಹಣದ ವಿದ್ಯುತ್ ಖರ್ಚಾಗುವ ವರೆಗೂ ನಿಮ್ಮ ಮನೆಗೆ ವಿದ್ಯುತ್ ಸಂಪರ್ಕ ಇರುತ್ತದೆ. ಹಣ ಖಾಲಿಯಾಗುತ್ತಿದ್ದಂತೆ ವಿದ್ಯುತ್ ಸಂಪರ್ಕ ಕಡಿತವಾಗುತ್ತದೆ. ನಿಮಗೆ ವಿದ್ಯುತ್ ಬೇಕೆಂದರೆ ಮತ್ತೆ ಹಣ ತುಂಬಿ ರೀಚಾರ್ಜ್ ಮಾಡಿಸಬೇಕು. ಈ ರೀತಿ ಮಧ್ಯದಲ್ಲಿ ರೀಚಾರ್ಜ್ ಮಾಡಿಸಿದರೂ, ನೀವು ರೀಚಾರ್ಜ್ ಮಾಡಿಸಿದ ಹಣದಷ್ಟು ವಿದ್ಯುತ್ ಬಳಕೆ ಮಾಡದಿದ್ದರೂ 28 ನೇ ದಿನದ ಮಧ್ಯರಾತ್ರಿ 12 ಗಂಟೆಗೆ ಸರಿಯಾಗಿ ವಿದ್ಯುತ್ ಸಂಪರ್ಕ ಕಡಿತವಾಗುತ್ತದೆ. ಮತ್ತೆ ಮಾಸಿಕ ಶುಲ್ಕದ ಜೊತೆಗೆ ಒಂದಷ್ಟು ಹಣ ಸೇರಿಸಿ ರೀಚಾರ್ಜ್ ಮಾಡಿಸಬೇಕು. ಅಥವಾ ರೀಚಾರ್ಜ್ ಅವಧಿ ಮುಗಿಯುವ ಒಂದು ದಿನ ಮೊದಲೇ ರೀಚಾರ್ಜ್ ಮಾಡಿಸಬೇಕು.

ಸಂಸತ್ತಿನಲ್ಲಿ ದ್ವೇಷ ಭಾಷಣ

ಸುಪ್ರಿಮ್ ಕೋರ್ಟಿನ ಎಚ್ಚರಿಕೆಯ ನಡುವೆಯೂ ನಮ್ಮ ಸಮಾಜದಲ್ಲಿ ಈಗ ವ್ಯಾಪಕಗೊಂಡಿರುವ ಮುಸ್ಲಿಮ್ ವಿರೋಧಿ ವಿಷ ಪ್ರಚಾರವು ಸಂಸತ್ತಿನೊಳಕ್ಕೂ ನುಗ್ಗಿ ನಿರ್ಭಯವಾಗಿ ತಲೆ ಎತ್ತಿದೆ ಎಂಬುದು ಬಹಳ ಆತಂಕಕಾರಿ ವಿಷಯವಾಗಿದೆ.

ಪ್ರಕಾಶ್ ಕಾರತ್



ಸಮಾಜದಲ್ಲಿ ಬಹಳ ವ್ಯಾಪಕವಾಗಿರುವ ಮುಸ್ಲಿಮರ ವಿರುದ್ಧದ ದ್ವೇಷ ಭಾಷಣ ಇದೀಗ ಸಂಸತ್ತಿನ ಒಳಗೂ ಪ್ರವೇಶಿಸಿದ್ದು, ದಾಳಿಯ ರೂಪ ತಾಳಿದೆ. ಹೊಸ ಸಂಸತ್ತಿನ ಕಟ್ಟಡದಲ್ಲಿ ನಡೆದ ವಿಶೇಷ ಅಧಿವೇಶನದ ಕೊನೆಯ ದಿನದಂದು, ದೆಹಲಿಯ ಬಿಜೆಪಿ ಸಂಸದ ರಮೇಶ್ ಬಿಧುರಿ ಅವರು ಬಹುಜನ ಸಮಾಜ ಪಕ್ಷವನ್ನು ಪ್ರತಿನಿಧಿಸುವ ಡ್ಯಾನಿಶ್ ಅಲಿ ವಿರುದ್ಧ ಅತ್ಯಂತ ಅಸಹ್ಯಕರವಾದ ಮತ್ತು ಹಸಿ ಹಸಿ ದ್ವೇಷದ ಮುಸ್ಲಿಂ ವಿರೋಧಿ ಪದಗಳನ್ನು ಬಳಸಿದರು. ಲೋಕಸಭೆ. ಸಂಸತ್ತಿನಲ್ಲಿ ಹಿಂದೆಂದೂ ಕೇಳಿರದ 'ಭಯೋತ್ಪಾದಕ ಮುಲ್ಲಾ' ಎಂಬಂತಹ ಪದಗಳು, ಡ್ಯಾನಿಶ್ ಅಲಿಯನ್ನು ಗುರಿಯಾಗಿಸಿಕೊಂಡು ಪದೇ ಪದೇ ಬಿಧುರಿಯಿಂದ ಕೇಳಿಬಂದವು. ಬಿಧುರಿ ಅವರ ವಾಗ್ದಾಳಿಯ ವೀಡಿಯೊವನ್ನು ದೇಶಾದ್ಯಂತ ಹತ್ತಾರು ಸಾವಿರ ಜನರು ವೀಕ್ಷಿಸಿದ್ದಾರೆ, ಇದು ವ್ಯಾಪಕ ಅಸಮಾಧಾನ ಮತ್ತು ಆಕ್ರೋಶಕ್ಕೆ ಕಾರಣವಾಗಿದೆ.

ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಮತ್ತು ಆಡಳಿತ ಪಕ್ಷದ ನಾಯಕತ್ವವು ತಪ್ಪಿತಸ್ಥ ಸದಸ್ಯರ ವಿರುದ್ಧ ತಕ್ಷಣ ಕಠಿಣ ಕ್ರಮ ತೆಗೆದುಕೊಂಡಿದೆ ಎಂದು ಯಾರಾದರೂ ಭಾವಿಸಿರಬಹುದು. ಆದರೆ ಅಂಥದ್ದೇನೂ ನಡೆಯಲಿಲ್ಲ. ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್, 'ಒಂದು ವೇಳೆ', ಪ್ರತಿಪಕ್ಷಗಳ ಭಾವನೆಗಳಿಗೇನಾದರೂ, ಇದರಿಂದ ಧಕ್ಕೆಯಾಗಿದ್ದರೆ ವಿಷಾದ ವ್ಯಕ್ತಪಡಿಸುತ್ತೇನೆ ಎಂದರು ಅಷ್ಟೆ. 'ಒಂದು ವೇಳೆ' ಎಂಬುದನ್ನು ಹೊರತುಪಡಿಸಿ, ಬಿಧುರಿ ಯವರ, ಮುಸ್ಲಿಂ ವಿರೋಧಿ ನಿಂದನೆಗೆ ಯಾವುದೇ ಖಂಡನೆಯನ್ನು ಅವರು ಮಾಡಲಿಲ್ಲ ಅಥವಾ ಡ್ಯಾನಿಶ್ ಅಲಿಯವರಲ್ಲಿ, ಕ್ಷಮೆ ಕೇಳಿ ಎಂದು ಬಿದುರಿಯವರಿಗೆ ಹೇಳಲೂ ಇಲ್ಲ.

ಬಿಧುರಿ ಅವರನ್ನು ಸದನದಿಂದ ಅಮಾನತುಗೊಳಿಸಿ ಶೀಘ್ರ ಕ್ರಮ ಕೈಗೊಳ್ಳಬೇಕಿದ್ದ ಸ್ಪೀಕರ್, ಬಿಧುರಿಗೆ ಎಚ್ಚರಿಕೆ ನೀಡಿ ಇಂತಹ ನಡವಳಿಕೆಯ ಪುನರಾವರ್ತನೆಯನ್ನು ಸಹಿಸುವುದಿಲ್ಲ ಎಂದಷ್ಟೆ ಹೇಳಿದ್ದಾರೆ.

ಲೋಕಸಭೆ ಮತ್ತು ರಾಜ್ಯಸಭೆ ಎರಡರ ಸಭಾ ಪೀಠಾಧಿಪತಿಗಳು ಪ್ರತಿಪಕ್ಷದ ಸದಸ್ಯರು ನಿರಂತರವಾಗಿ ಸಮಸ್ಯೆಗಳನ್ನು ಎತ್ತಲು ಅಥವಾ ಸರ್ಕಾರವನ್ನು ಪ್ರಶ್ನಿಸಲು ಪ್ರಯತ್ನಿಸಿದಾಗಲೆಲ್ಲ ಅವರ ಜೊತೆ ವ್ಯವಹರಿಸಿದ ರೀತಿಗೆ ಇದು ಸಂಪೂರ್ಣವಾಗಿ ವ್ಯತಿರಿಕ್ತವಾಗಿದೆ. ರಾಜ್ಯಸಭೆಯಲ್ಲಿ, ಎಎಪಿ ಸಂಸದ ಸಂಜಯ್ ಸಿಂಗ್ ಅವರನ್ನು ಮುಂಗಾರು ಅಧಿವೇಶನದ ಸಂಪೂರ್ಣ ಅವಧಿಗೆ ಅಮಾನತುಗೊಳಿಸಲಾಗಿದೆ ಮತ್ತು ಅವರ ವಿರುದ್ಧದ ದೂರಿನ ಬಗ್ಗೆ ವಿಶೇಷಾಧಿಕಾರ ಸಮಿತಿಯು ನಿರ್ಧರಿಸುವವರೆಗೆ ಅಮಾನತು ಮುಂದುವರಿಯುತ್ತದೆ. ಎಎಪಿಯ ಮತ್ತೊಬ್ಬ ಸಂಸದ ರಾಘವ್ ಚಡ್ಡಾ ಅವರನ್ನು ಕಳೆದ ಅಧಿವೇಶನದಲ್ಲಿ ಅಮಾನತುಗೊಳಿಸಲಾಗಿತ್ತು. ಲೋಕಸಭೆಯಲ್ಲಿ, ಮುಂಗಾರು ಅಧಿವೇಶನದ ಉಳಿದ ಅವಧಿಗೆ ಎಎಪಿ ಸದಸ್ಯ ಸುಶೀಲ್ ಕುಮಾರ್ ರಾಠಿ ಅವರನ್ನು ಅಮಾನತುಗೊಳಿಸಿದರೆ, ಲೋಕಸಭೆಯಲ್ಲಿ ಕಾಂಗ್ರೆಸ್ ಪಕ್ಷದ ನಾಯಕ ಅಧೀರ್ ರಂಜನ್ ಚೌಧುರಿ ಅವರನ್ನು ಸವಲತ್ತುಗಳ ಸಮಿತಿ, ಸಭೆ ನಡೆಸಿ, ಅವರ ಸದಸ್ಯತ್ವ ಮರುಸ್ಥಾಪನೆಗೆ, ಶಿಫಾರಸು ಮಾಡುವವರೆಗೆ ಅಮಾನತು ಗೊಳಿಸಲಾಗಿದೆ.

ಬಿಧುರಿ ವಿರುದ್ಧ ಕ್ರಮಕ್ಕೆ ಮನವಿ ಮಾಡಿರುವ ಡ್ಯಾನಿಶ್ ಅಲಿ ಪತ್ರಕ್ಕೆ ಸ್ಪೀಕರ್ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಬಿಜೆಪಿ ಅವರಿಗೆ ಶೋಕಾಸ್ ನೋಟಿಸ್ ನೀಡಿದ್ದರೂ ಇದುವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ.

ಬಿಧುರಿ ವರ್ತನೆ ವಿರುದ್ಧ ಕ್ರಮವಹಿಸುವುದಕ್ಕಿಂತ, ಅವರಿಗೆ ರಕ್ಷಣೆ ಒದಗಿಸುವಲ್ಲಿ ಬಿಜೆಪಿ ಹೆಚ್ಚು ಕಾಳಜಿ ವಹಿಸುತ್ತಿದೆ. ನಿಶಿಕಾಂತ್ ದುಬೆಯಂತಹ ಬಿಜೆಪಿ ಸಂಸದರು, ಡ್ಯಾನಿಶ್ ಅಲಿ ಪ್ರಧಾನಿ ವಿರುದ್ಧ ಅಸಹ್ಯಕರ ಹೇಳಿಕೆಗಳನ್ನು ನೀಡುವ ಮೂಲಕ ಬಿಧುರಿ ಅವರನ್ನು ಕೆರಳಿಸಿದ್ದರು ಎಂದು ಆರೋಪಿಸಿ ಸ್ಪೀಕರ್‌ಗೆ ಪತ್ರ ಕಳುಹಿಸಿದ್ದಾರೆ.

ಬಿಧುರಿಯವರ ದ್ವೇಷದ ಭಾಷಣವನ್ನು ದೇಶದಾದ್ಯಂತ ಹಿಂದುತ್ವ ಪಡೆಗಳಿಂದ ನಡೆಯುತ್ತಿರುವ ಮುಸ್ಲಿಂ ವಿರೋಧಿ ವಿಷ ಪ್ರಚಾರ ಮತ್ತು ದಾಳಿಗಳ ಹಿನ್ನೆಲೆಯಲ್ಲಿ ನೋಡಬೇಕಾಗಿದೆ. 'ಧರಮ್ ಸಂಸದ್' ಮುಸ್ಲಿಮರನ್ನು ದೇಶದಲ್ಲಿ ನಿರ್ಮೂಲನೆ ಮಾಡಲು ಕರೆ ನೀಡಿದೆ; ಆ ನಿಟ್ಟಿನಲ್ಲಿ, ಶಂಕಿತ ಜಾನುವಾರು ಕಳ್ಳಸಾಗಣೆ ಅಥವಾ ದನದ ಮಾಂಸ ಸಾಗಿಸುವ ಮುಸ್ಲಿಮರ ಮೇಲೆ ಹಲ್ಲೆ ನಡೆಸುವುದು, ಬಿಜೆಪಿ ಆಡಳಿತದ ರಾಜ್ಯಗಳಾದ ಹರಿಯಾಣ, ಮಧ್ಯಪ್ರದೇಶ ಮಹಾರಾಷ್ಟ್ರಗಳಲ್ಲಿ ಇಂತಹ ಘಟನೆಗಳು ನಿರಂತರವಾಗಿ ಸಂಭವಿಸುತ್ತಲೇ ಇವೆ; ರೈಲ್ವೇ ಪ್ರೊಟೆಕ್ಷನ್ ಫೋರ್ಸ್ (RPF) ಕಾನ್ಸ್‌ಟೇಬಲ್, ಚಲಿಸುವ ರೈಲಿನಲ್ಲಿ ತಾನು ಮುಸ್ಲಿಮರೆಂದು ಗುರುತಿಸಿದ ಮೂವರನ್ನು ಗುಂಡು ಹಾರಿಸಿದ ಕೊಂದನು. ಮುಜಾಫರ್‌ನಗರದ ಖಾಸಗಿ ಶಾಲೆಯ ಶಿಕ್ಷಕಿಯೊಬ್ಬರು ಏಳು ವರ್ಷದ ಮುಸ್ಲಿಂ ಬಾಲಕನಿಗೆ ಸರದಿಯಂತೆ ಕಪಾಳಮೋಕ್ಷ ಮಾಡುವಂತೆ ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ಆದೇಶಿಸಿದ್ದರು. ಹಾಗೆಯೇ, ಮುಸ್ಲಿಂ ವ್ಯಾಪಾರಿಗಳು ಹಿಂದೂ ಪ್ರದೇಶಗಳಲ್ಲಿ ತಮ್ಮ ವ್ಯಾಪಾರ ನಡೆಸುವುದನ್ನು ತಡೆಯುವುದು, ಒಟ್ಟಾರೆಯಾಗಿ, ಆರ್ಥಿಕ ಬಹಿಷ್ಕಾರದ ಬೆದರಿಕೆಯ ಹಿನ್ನೆಲೆಯಲ್ಲಿ ಮುಸ್ಲಿಂರ ಮೇಲೆ ಈ ರೀತಿಯ ದಾಳಿಗಳೆಲ್ಲವೂ ನಡೆಯುತ್ತಿವೆ.

ಬಿಧುರಿ ವಿರುದ್ಧ ಸಂಸತ್ತಿನಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಲ್ಲಿ ವಿಫಲವಾದ ಕಾರಣ, ಸಂಸತ್ತಿನ ಘನತೆಗೆ ಕುಂದುಂಟಾಗಿದೆ, ಸಂಸತ್ತಿಗೆ ಅವಮಾನವಾಗಿದೆ ಮತ್ತು ಈ ಮೂಲಕ ಆಡಳಿತ ಪಕ್ಷವು ಪೋಷಿಸಿದ 'ಇಸ್ಲಾಮೋಫೋಬಿಯಾ'ಕ್ಕೆ ಸಮರ್ಥನೆಯ ಮುದ್ರೆಯನ್ನು ಒತ್ತಲಾಗಿದೆ. ಬಿಧುರಿ ಅವರ ದ್ವೇಷದ ಭಾಷಣವು ಬಿಜೆಪಿಯ ಒಟ್ಟಾರೆ ಮನಸ್ಥಿತಿಯ ಭಾಗವಾಗಿದೆ ಎಂದು ಇದು ಬಹಿರಂಗ ಪಡಿಸುತ್ತದೆ. ಹೊಸ ಸಂಸತ್ ಭವನದಲ್ಲಿ 'ಸೆಂಗೋಲ್' ಅಳವಡಿಸಲಾಗಿದ್ದು, ಬಿಜೆಪಿ ಸಂಸತ್ತಿನ ಸದಸ್ಯರು ಇದನ್ನು 'ಹಿಂದುತ್ವ ಶಕ್ತಿ' ಎಂದು ಅರ್ಥೈಸುತ್ತಿದ್ದಾರೆ ಮತ್ತು ಹಾಗೆಯೇ, ವರ್ತಿಸುತ್ತಿದ್ದಾರೆ ಎಂಬುದು ಗೊತ್ತಾಗುತ್ತಿದೆ.

ಅನು: ನಾಗರಾಜ ನಂಜುಂಡಯ್ಯ

ಕೇಂದ್ರ ಸರ್ಕಾರದ ನೀತಿಗಳಿಂದಾಗಿ, ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಂಬಲ ಬೆಲೆ ಸಿಗದ ಕಾರಣದಿಂದಾಗಿ, ಕೃಷಿಗೆ ಬಳಕೆಮಾಡುವ ರಸಗೊಬ್ಬರ, ವಿದ್ಯುತ್, ಪೆಟ್ರೋಲಿಯಂ ಉತ್ಪನ್ನಗಳು ಮತ್ತು ಇತರೇ ಪರಿಕರಗಳ ಬೆಲೆ ಏರಿಕೆಯಿಂದಾಗಿ ಈಗಾಗಲೇ ರೈತರು ಸಂಕಷ್ಟಕ್ಕೆ ಸಿಲುಕಿ ನರಳುತ್ತಿದ್ದಾರೆ. ಇದರ ಜೊತೆಗೆ ದುಬಾರಿ ಬೆಲೆಯ ವಿದ್ಯುತ್ ಅನ್ನೂ ಮುಂಗಡವಾಗಿ ಹಣ ಕೊಟ್ಟು ಕೃಷಿ ಮಾಡಲು ಸಾಧ್ಯವೇ ಎಂಬ ಆತಂಕ ಮೂಡುತ್ತದೆ.

ಯುಪಿ ಮತ್ತು ಆಂಧ್ರದ ರೈತರು

ಇದು ರೈತರಿಗೆ ಮತ್ತು ಬಡವರಿಗೆ ಸಬ್ಸಿಡಿ ಮತ್ತು ಉಚಿತ ವಿದ್ಯುತ್ ಅನ್ನು ತೆಗೆದುಹಾಕುತ್ತದೆ. ಉತ್ತರ ಪ್ರದೇಶ ಮತ್ತು ಆಂಧ್ರಪ್ರದೇಶದಲ್ಲಿ ರೈತರು ಸ್ಮಾರ್ಟ್ ಮೀಟರ್‌ಗಳನ್ನು ತ್ಯಜಿಸಲು ಇದೇ ಕಾರಣ. ಪ್ರಸ್ತುತ ಆಂಧ್ರ ಸರ್ಕಾರವು ನೇರ ನಗದು ವರ್ಗಾವಣೆಯಂತಹ ವಿವಿಧ ಪ್ರಯೋಜನಗಳನ್ನು ಒದಗಿಸುತ್ತಿದೆ. ಇಂತಹ ಪ್ರಯೋಗಗಳಲ್ಲಿ ತೊಡಗುವುದು ದೇಶದ ಜೀವ ವಿಜ್ಞಾನ, ಕೃಷಿ ಮತ್ತು ಆಹಾರ ಭದ್ರತೆಗೆ ಮರಣ ಶಾಸನವಾಗಲಿದೆ. ಆದ್ದರಿಂದ ಇದರ ವಿರುದ್ಧ ಎಲ್ಲ ವರ್ಗಗಳು ಒಗ್ಗಟ್ಟಾಗಿ ನಿಲ್ಲುವುದು ಅಗತ್ಯವಾಗಿದೆ.

ಅನುಮತಿಸುವುದಿಲ್ಲ ಎಂದ ಕೇರಳ

ಕೇರಳದಲ್ಲಿ ಎಡ ಪ್ರಜಾಸತ್ತಾತ್ಮಕ ರಂಗದ ಸರ್ಕಾರವು ರೈತರು ಮತ್ತು ಗ್ರಾಹಕರಿಗೆ ಹಾನಿಯುಂಟುಮಾಡುವ ಯಾವುದನ್ನೂ ಅನುಮತಿಸುವುದಿಲ್ಲ ಎಂದು ಘೋಷಿಸುವ ಮೂಲಕ TODEX ಮಾದರಿಯ (ಒಟ್ಟು ವೆಚ್ಚ) ಸ್ಮಾರ್ಟ್ ಮೀಟರ್‌ಗಳ ವಿರುದ್ಧ ಹೋರಾಡಲು ದಾರಿ ಮಾಡಿಕೊಟ್ಟಿದೆ. ಕೇಂದ್ರ ಸರ್ಕಾರ ರೂಪಿಸಿರುವ ಮಾರ್ಗಸೂಚಿಗಳನ್ನು ಗೌಪ್ಯವಾಗಿ ಜಾರಿಗೆ ತರಲು ಯತ್ನಿಸುತ್ತಿರುವ ಆಡಳಿತ ವರ್ಗವನ್ನು ನಿರ್ದಾಕ್ಷಿಣ್ಯವಾಗಿ ವಿರೋಧಿಸಲು ಸಿಐಟಿಯು ಮತ್ತು ಎಲೆಕ್ಟ್ರಿಕಲ್ ಎಂಪ್ಲಾಯೀಸ್ ಫೆಡರೇಷನ್ ಆಫ್ ಇಂಡಿಯಾ ಸಕಾಲಿಕ ಮಧ್ಯಪ್ರವೇಶದ ಫಲವೂ ಇದಾಗಿದೆ. ಇಂತಹ ದೃಢವಾದ ರಕ್ಷಣೆ ಮುಂದುವರಿಯಬೇಕು. ಕತ್ತಲೆ ಮತ್ತು ವಿನಾಶದ ವಿರುದ್ಧ–ವಂಚನೆ ಮತ್ತು ಕಾರ್ಪೊರೇಟ್ ದರೋಡೆ ವಿರುದ್ಧ ನಾವು ಒಂದಾಗೋಣ.

–ಸಿಐಟಿ

ಸನಾತನ ಭಾವನೆಗಳು ಮತ್ತು ಸನಾತನ ಧರ್ಮ........ ಪುಟ 2 ರಿಂದ

ನಿಷ್ಠರಾಗಿರುತ್ತೇವೆ ಎಂದು ಪ್ರತಿಜ್ಞೆ ಮಾಡಿದರೂ, ವಾಸ್ತವದಲ್ಲಿ ಮನುವಾದಕ್ಕೆ ಅವು ಹೆಚ್ಚು ನಿಷ್ಠವಾಗಿವೆ. 'ಸನಾತನ ಧರ್ಮ' ಎಂದರೆ ಅವರ ದೃಷ್ಟಿಯಲ್ಲಿ 'ಮನುಧರ್ಮ'. ಆದರೆ ನೇರವಾಗಿ ಮನುಧರ್ಮವನ್ನು ಜಾರಿಗೆ ತರುತ್ತೇವೆ ಎಂದು ಹೇಳುವ ಧೈರ್ಯ ಮಾಡಲಾರರು. ಆದುದರಿಂದ ಬದಲಾಗಿ ಸನಾತನ ಧರ್ಮ ಎಂಬ ಪದವನ್ನು ಮುಂದಿಡಲಾಯಿತು. ಅವರ ದೃಷ್ಟಿಯಲ್ಲಿ ಪ್ರಜಾಪ್ರಭುತ್ವ, ಜಾತ್ಯತೀತತೆ, ಸ್ವಾತಂತ್ರ್ಯ ಮತ್ತು ಸಮಾನತೆ ಮುಂತಾದ ತತ್ವಗಳಿಗೆ ಬೆಲೆ ಇಲ್ಲ.

ಹಾಗಾಗಿ 'ಸನಾತನ ಧರ್ಮ' ಎಂಬ ಪದವನ್ನು ನೋಡಿ ಇದನ್ನು ವಿರೋಧಿಸುವುದು ಎಂದರೆ ಗತಕಾಲದಲ್ಲಿ ನಮ್ಮ ಸಮಾಜ ಅಂದು ಸಾಧಿಸಿದ ಸಾಧನೆಗಳಿಗೆ ವಿರುದ್ಧ ಎಂದು ಭಾವಿಸಬಾರದು. ನಾವು ಹೆಮ್ಮೆಪಡುವ ಗತಕಾಲದ ಉದಾತ್ತತೆ ಬಹಳ ಸೀಮಿತವಾಗಿದೆ. ಈಗ ಬಡತನ, ಅನಕ್ಷರತೆ, ನಿರುದ್ಯೋಗ ಮತ್ತು ಹಸಿವಿನಿಂದ ನರಳುತ್ತಿರುವ ಕೋಟಿಗಟ್ಟಲೆ ಜನರ ಅಗತ್ಯಗಳನ್ನು ಪೂರೈಸುವ ಬದಲು 'ಜಗತ್ತು ಸಂತೋಷ ಮತ್ತು ಸಮೃದ್ಧವಾಗಿದೆ' ಎಂಬ ಸಂತೃಪ್ತ ಭಾವನೆಯನ್ನು ಬಿತ್ತಲು, ಈ ಸಾಂಪ್ರದಾಯಿಕ ಮನುವಾದವನ್ನು ಅಗೆದು ಹೂಳಬೇಕಾಗಿದೆ. ಜಾತಿ ವ್ಯವಸ್ಥೆ ತೊಲಗಬೇಕು. 'ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾ' (ಎಲ್ಲಿ ನಾರಿಯು ಗೌರವಕ್ಕೆ ಪಾತ್ರಳಾಗುತ್ತಾಳೋ ಅಲ್ಲಿ ದೇವತೆಗಳು ನೆಲೆಸುತ್ತಾರೆ) ಎಂಬ ಮಾತು ನಿಜಕ್ಕೂ ಆಚರಣೆಗೆ ಬರಬೇಕಾದರೆ ಮನುವಾದ ಮತ್ತು ಅದರ ಪ್ರತಿಪಾದಕರನ್ನು ನಮ್ಮ ಸಮಾಜದಿಂದ ಹೊರಹಾಕಬೇಕು.

ಈ ವಿಷಯದ ಮೇಲೆ ಚರ್ಚೆ ಆರಂಭಿಸಿದಕ್ಕಾಗಿ ಉದಯನಿಧಿ ಸ್ಟಾಲಿನ್ ಅವರನ್ನು ಅಭಿನಂದಿಸಲೇಬೇಕು. ಆದರೆ ಅದು ಸಾಕಾಗುವುದಿಲ್ಲ. ಸಾಮಾಜಿಕ ಪ್ರಗತಿ ಬಯಸುವ ಎಲ್ಲ ಶಕ್ತಿಗಳು ರಂಗಕ್ಕೆ ಬರಬೇಕು. ಜತೆಯಾಗಿ ಎಲ್ಲರೂ ಮುನ್ನಡೆಯಬೇಕು.

ಓಂ ಶಾಂತಿ: ಶಾಂತಿ: ಶಾಂತಿ:

(ಕೃಪೆ: ಪ್ರಜಾಶಕ್ತಿ)

ಚಂದಾದಾರರಾಗಿರಿ

ವಾರ್ಷಿಕ ಚಂದಾ : ರೂ.500.00
ದ್ವೈವಾರ್ಷಿಕ ಚಂದಾ : ರೂ.1000.00

ಚಂದಾದಾರರು ಸಂರ್ಕಿಸಿ:
ಕ್ರಿಯಾ ಪ್ರಕಾಶನ, ಸೂರಿ ಭವನ, ನಂ.40/5, 2ನೇ 'ಬಿ' ಮುಖ್ಯರಸ್ತೆ, 16ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು 560027
ಕಛೇರಿ ದೂರವಾಣಿ: 080–22234369
ಫೋನ್: 9448578021, 9483966467

ಸಹಸ್ರಾರು ಕೋಟಿ ರೂಗಳ ಭೂ ಹಗರಣದ ವಿರುದ್ಧ ರೈತ ಹೋರಾಟದ ರಣ ಕಹಳೆ

ಬಿಎಂಐಸಿ– ನೈಸ್ ಎಂದು ಕುಖ್ಯಾತವಾಗಿರುವ ಭೂ ಹಗರಣ ಆರಂಭವಾಗಿ ಈಗ 27 ವರ್ಷ

ಟಿ. ಯಶವಂತ



ಬೆಂಗಳೂರು–ಮೈಸೂರು ನಡುವಿನ ನಾಲ್ಕು ಪಥಗಳ ಹೆದ್ದಾರಿ ನಿರ್ಮಾಣದ ಯೋಜನೆಯೊಂದಿಗೆ ಕಾರ್ಯಾಚರಣೆಗೆ ಇಳಿದ ಕುಖ್ಯಾತ ನೈಸ್ ಸಂಸ್ಥೆ ಈ 27 ವರ್ಷಗಳ ಉದ್ದಕ್ಕೂ ಹಲವು ಹಗರಣಗಳ ಸರಮಾಲೆಯನ್ನೇ ಸೃಷ್ಟಿಸಿದೆ. ಉದ್ಯಮಿಗಳು, ಸರಕಾರದ ಅಧಿಕಾರಶಾಹಿ, ರಾಜಕಾರಣಿಗಳು ಮತ್ತು ಅವರು ಸಾಕಿಕೊಂಡ ಮಾಫಿಯಾ ಗಳ ಕುತಂತ್ರ, ದಬ್ಬಾಳಿಕೆ ಮತ್ತು ವಂಚನೆಗಳ ನಡುವಿನಲ್ಲಿ ಆ ಭಾಗದ ರೈತರು ಮತ್ತು ಸಾಮಾನ್ಯ ಜನತೆ ನಲುಗಿ ರೋಸಿ ಹೋಗಿದ್ದಾರೆ. ಇದರ ವಿರುದ್ಧದ ಪ್ರತಿಭಟನೆಯ ಧ್ವನಿ ಈಗ ರಣಕಹಳೆಯಾಗಿ ಮೊಳಗಿದೆ. ಆ ಕುರಿತ ವರದಿ ಇಲ್ಲಿ, ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಯಿಂದ.

ಸರಿಸುಮಾರು 27 ವರ್ಷದ ಹಿಂದೆ, ಬೆಂಗಳೂರು–ಮೈಸೂರು ನಡುವಿನ 111 ಕಿಮೀ ಉದ್ದದ ನಾಲ್ಕು ಪಥಗಳ ಟೋಲ್ ಹೆದ್ದಾರಿ ನಿರ್ಮಾಣ ಸೇರಿದಂತೆ, 41 ಕಿಮೀ ಪೆರಿಫೆರಲ್ ರಿಂಗ್ ರಸ್ತೆ, 9.8 ಕಿಮೀ ಲಿಂಕ್ ರಸ್ತೆ ಹಾಗೂ ಐದು ಟೌನ್ ಶಿಪ್ ಗಳನ್ನು ನಿರ್ಮಾಣ ಮಾಡಲು, ಅಂದಿನ ರಾಜ್ಯ ಸರ್ಕಾರ ಮತ್ತು ನೈಸ್ ಸಂಸ್ಥೆ ನಡುವೆ, ಬಿಲ್ಡ್, ಓನ್, ಆಪರೇಟ್ ಮತ್ತು ಟ್ರಾನ್ಸಫರ್ (BOOT- build, own, operate, transfer) ಆಧಾರದಲ್ಲಿ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಅಂದರೆ, ಈ ಯೋಜನೆಗೆ ಅಗತ್ಯವಾದ ಭೂಮಿಗೆ ಪರಿಹಾರ ನೀಡಿ, ಸಿಮೆಂಟ್ ಕಾಂಕ್ರೀಟ್ ಮೂಲಕ ರಸ್ತೆಗಳನ್ನು ನಿರ್ಮಿಸಿ, ಮೂವತ್ತು ವರ್ಷಗಳ ಕಾಲ ಟೋಲ್ ಸಂಗ್ರಹದ ಜೊತೆಗೆ ರಸ್ತೆಗಳನ್ನು ನಿರ್ವಹಿಸಿ, ಆನಂತರ ಸರ್ಕಾರಕ್ಕೆ ಹಸ್ತಾಂತರಿಸುವ ಒಪ್ಪಂದದ ಆಧಾರದಲ್ಲಿ. ಬೆಂಗಳೂರು, ಮೈಸೂರು ನಡುವಿನ ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆ (BMIC) ಅಸ್ತಿತ್ವಕ್ಕೆ ಬಂದು ಈ ಯೋಜನೆಯನ್ನು ಪೂರ್ಣಗೊಳಿಸುವ ಜವಾಬ್ದಾರಿಯನ್ನು ನೈಸ್ ಸಂಸ್ಥೆಗೆ ವಹಿಸಲಾಗಿತ್ತು.

ಆದರೆ, ನೈಸ್ ಕಂಪನಿಯ ದುರುದ್ದೇಶವೇ ಬೇರೆಯಾಗಿತ್ತು. ಹೆದ್ದಾರಿ ನಿರ್ಮಾಣದ ನೆಪದಲ್ಲಿ ಬೆಂಗಳೂರಿನಿಂದ ಮೈಸೂರಿನ ತನಕ ಅತಿ ಹೆಚ್ಚು ಬೆಲೆಬಾಳುವ ಭೂಮಿಯ ಕಬಳಿಕೆಗೆ ತನ್ನದೇ ರಹಸ್ಯ ನೀಲ ನಕ್ಷೆ ತಯಾರಿಸಿಕೊಂಡು, ಭ್ರಷ್ಟ ಅಧಿಕಾರಿಗಳು, ಭ್ರಷ್ಟ ರಾಜಕಾರಣಿಗಳು ಹಾಗೂ ಬಲಿಷ್ಠ ಭೂ ದಲ್ಲಾಳಿಗಳ ಪಡೆಯನ್ನು ನಿರ್ಮಿಸಿಕೊಂಡು, ಗುಪ್ತ ಕಾರ್ಯಾಚರಣೆ ನಡೆಸಿದ ಫಲವಾಗಿ, ನೈಸ್ ಸಂಸ್ಥೆಯ ಮಾಲೀಕ ಆಶೋಕ್ ಖೇಣಿ ಇಂದು ಕರ್ನಾಟಕದ ಅತಿದೊಡ್ಡ ಬಂಡವಾಳಶಾಹಿ, ಭೂ ಮಾಲೀಕನಾಗಿ ಹೊರಹೊಮ್ಮಿದ್ದಾನೆ.

ಮೂಲ ಒಪ್ಪಂದದ ಚೌಕಟ್ಟು (Frame work agreement- FWA) ಪ್ರಕಾರ ಈತನಿಗೆ ಕೆಎಐಡಿಬಿ ಹಸ್ತಾಂತರಿಸಬೇಕಿದ್ದ ಭೂಮಿ 20,196 ಎಕರೆಯಾಗಿದ್ದರೆ, ಇವನು ತಯಾರಿಸಿಕೊಂಡ ನೀಲನಕ್ಷೆ ಪ್ರಕಾರ ಅಂದರೆ, ಔಟ್ ಲೈನ್ ಡೆವಲಪ್ಮೆಂಟ್ ಪ್ಲಾನ್ (ODP) ಪ್ರಕಾರ 1,73,223.24 ಎಕರೆ (7,01,00.6 ಹೆಕ್ಟೇರ್).

ಹೀಗೆ ಯೋಜನೆ ಮೂಲ ಒಪ್ಪಂದದ ಚೌಕಟ್ಟು ಕರಾರು ಆದ 3–4–1997 ರಿಂದಲೇ ಮೂಲ ಒಪ್ಪಂದವನ್ನು ಉಲ್ಲಂಘಿಸಿತ್ತು. ಅಕ್ರಮಗಳ ಮೇಲೆ ಅಕ್ರಮಗಳನ್ನು ಸೃಷ್ಟಿಸುತ್ತಾ ನೈಸ್ ಈ ಇಪ್ಪತ್ತೇಳು ವರ್ಷಗಳನ್ನು ಕ್ರಮಿಸಿದೆ. ಪೂರ್ಣವಾಗಿ ಸಿಮೆಂಟ್ ಕಾಂಕ್ರಿಟ್ ನಲ್ಲಿ ನಿರ್ಮಿಸಬೇಕಿದ್ದ ಪೆರಿಫೆರಲ್ ರಿಂಗ್ ರಸ್ತೆಯ ಬಹುತೇಕ ಭಾಗವನ್ನು ಒಪ್ಪಂದಕ್ಕೆ ವಿರುದ್ಧವಾಗಿ ಡಾಂಬರಿನಲ್ಲಿ ನಿರ್ಮಿಸಿ, ಯೋಜನೆ ಪೂರ್ಣಗೊಳ್ಳದಿದ್ದರೂ ಮನಸೋ ಇಚ್ಛೆ ಟೋಲ್ ಸಂಗ್ರಹಿಸುತ್ತಿರುವ ನೈಸ್ ಕಂಪನಿ, ಹತ್ತಾರು ವರ್ಷಗಳ ಸುಮಾರು ರೂ. 1200 ಕೋಟಿಗೂ ಹೆಚ್ಚು ಹಣ ಕ್ರೋಢೀಕರಣಗೊಂಡ ನಂತರ, ಮತ್ತೆ ರೈತರ ಭೂಮಿಗೆ ಬಾಯಿ ಹಾಕಲು ಹೊರಟಿದೆ.

27 ವರ್ಷ ಕಳೆದರೂ ಅಭಿವೃದ್ಧಿ ಚಟುವಟಿಕೆ ಇಲ್ಲ

ಕೆಎಐಡಿಬಿ ಮೂಲಕ ಭೂಮಿ ಪಡೆದ ನೈಸ್ ಕಂಪನಿ, ಸುಮಾರು 27 ವರ್ಷ ಕಳೆದರೂ ಯಾವುದೇ ಅಭಿವೃದ್ಧಿ ಚಟುವಟಿಕೆ ನಡೆಸದೇ, ಮೂಲ ಒಪ್ಪಂದದ ಚೌಕಟ್ಟನ್ನು ಉಲ್ಲಂಘಿಸಿದೆ. ರೈತರ ಒಪ್ಪಿಗೆ ಇಲ್ಲದೇ, ರೈತರ ಗಮನಕ್ಕೂ ಬಾರದಂತೆ ಭೂ ಸ್ವಾಧೀನದ ಎಲ್ಲಾ ಪ್ರಕ್ರಿಯೆಗಳನ್ನು ಮುಗಿಸಿಕೊಂಡಿದೆ. ಸಂಸ್ಥೆಯು ಕಾನೂನು ಬಾಹಿರ ಕ್ರಿಯಾ ಯೋಜನೆಗಳ ಮೂಲಕ ಹಾಗೂ ಕೆಎಐಡಿಬಿ ಜೊತೆಗೆ ಯೋಜನಾ ಅನುಷ್ಠಾನದ ಕಾನೂನು ಬಾಹಿರ ಒಪ್ಪಂದಗಳ ಮೂಲಕ ಸಾವಿರಾರು ಎಕರೆ ಹೆಚ್ಚುವರಿ ಭೂಮಿಯನ್ನು ಕಬಳಿಕೆ ಮಾಡಿದೆ.

ರಿಯಲ್ ಎಸ್ಟೇಟ್ ದಂದೆ

1997 ರಿಂದ ಇಲ್ಲಿಯವರೆಗೂ ನೈಸ್ ಕಂಪನಿಯು, ರೈತರ ಮೇಲೆ ನಡೆಸಿರುವ ದೌರ್ಜನ್ಯ, ದಬ್ಬಾಳಿಕೆ ಹಾಗೂ ಅಕ್ರಮಗಳು ಅಸಂಖ್ಯ. ಇದೊಂದು ಹಗರಣಗಳ ಸರಮಾಲೆಯನ್ನು ಧರಿಸಿರುವ ಒಂದು ದರೋಡೆಕೋರ ಕಂಪನಿಯಾಗಿದೆ. ನೈಸ್ ಕಂಪನಿಯ ಭೂ ಕಬಳಿಕೆಯಿಂದ ಮುಕ್ತವಾಗಲು ಕೋರ್ಟ್–ಕಛೇರಿಗಳನ್ನು ಅಲೆದು, ನೊಂದ ರೈತರು ಲಕ್ಷಾಂತರ ರೂಪಾಯಿಗಳನ್ನು ಕಳೆದುಕೊಂಡಿದ್ದಾರೆ. ಅಕ್ರಮಗಳ ಮೇಲೆ ಅಕ್ರಮ ಸೃಷ್ಟಿಸಿ, ದೌರ್ಜನ್ಯ–ದಬ್ಬಾಳಿಕೆಯ ಸಾಧನಗಳ ಮೂಲಕ ಭಯ ಹುಟ್ಟಿಸಿ ಭೂ ಕಬಳಿಕೆಯ ಬಹಳ ದೊಡ್ಡ ಹಗರಣವನ್ನು ನಡೆಸಿದೆ. 2013 ರ ಭೂಸ್ವಾಧೀನ ಕಾಯ್ದೆಯ ಪ್ರಕಾರ, ಗ್ರಾಮೀಣ ಬಾಗದಲ್ಲಿ ಮಾರುಕಟ್ಟೆ ದರದ ನಾಲ್ಕು ಪಟ್ಟು ಹಾಗೂ ನಗರ ಪ್ರದೇಶದಲ್ಲಿ ಎರಡು ಪಟ್ಟು ಪರಿಹಾರ ನೀಡಬೇಕಿದ್ದರೂ, ಇದಕ್ಕೆ ಸಂಪೂರ್ಣ ತದ್ವಿರುದ್ಧವಾಗಿ ಮಾರುಕಟ್ಟೆ ದರದ ಶೇಕಡಾ 5 ರಿಂದ ಶೇಕಡಾ 10 ರಷ್ಟಕ್ಕೆ ಭೂಮಿ ಕಬಳಿಕೆ ಮಾಡಿಕೊಳ್ಳುತ್ತಿದೆ. ಕೆರೆ, ಸ್ಮಶಾನ ಸೇರಿದಂತೆ ಸರ್ಕಾರಿ ಜಮೀನುಗಳನ್ನು ಒತ್ತುವರಿ ಮಾಡಿಕೊಳ್ಳಲು ಅನುಕೂಲವಾಗುವಂತೆ ಖಾಸಗಿ ಹಿಡುವಳಿ ಜಮೀನುಗಳನ್ನು ಸ್ವಾಧೀನಕ್ಕೆ ಗುರುತಿಸಿಕೊಳ್ಳಲಾಗಿದೆ. ಈಘಾಂ ವ್ಯಾಪ್ತಿಯ ಸರ್ಕಾರಿ ಭೂಮಿಗಳನ್ನು ಬಹುತೇಕ ಬಿಟ್ಟಿಯಾಗಿ ಪಡೆದು, ಅದರ ಮೇಲೆ ವಿದೇಶಿ ಸಾಲಗಳನ್ನು ಪಡೆದಿದೆ. ಇಂತಹ ಸಹಸ್ರಾರು ಎಕರೆ ಭೂಮಿಯನ್ನು ಬೇನಾಮಿಯಾಗಿ ಖರೀದಿಸಿ ರಿಯಲ್ ಎಸ್ಟೇಟ್ ದಂಧೆ ನಡೆಸುತ್ತಿದೆ.

ಪುಟ 10 ಕ್ಕೆ

ರಾಜ್ಯ ಮಟ್ಟದ ದುಂಡು ಮೇಜಿನ ಸಭೆ

ನೈಸ್ ಯೋಜನೆ ರದ್ದುಪಡಿಸಿ, ಭೂಮಿ ವಾಪಸ್ಸಾತಿಗೆ ಒಕ್ಕೊರಲ ಆಗ್ರಹ

ನೈಸ್ ಯೋಜನೆ ರದ್ದುಪಡಿಸಿ, ನಿರ್ದಿಷ್ಟ ಗಡುವಿನ ಒಳಗೆ ರೈತರಿಗೆ ಭೂಮಿ ಹಿಂತಿರುಗಿಸಬೇಕು ಎಂದು ಒತ್ತಾಯಿಸಿರುವ ರೈತರು, ನಿರ್ದಿಷ್ಟ ಗಡುವಿನ ನಂತರವೂ ನೈಸ್ ಸಂತ್ರಸ್ಥ ರೈತರ ಆಗ್ರಹಗಳು ಈಡೇರದೇ ಇದ್ದರೆ ನೈಸ್ ಸಂತ್ರಸ್ಥರ ರಾಜ್ಯ ಮಟ್ಟದ ಸಮಾವೇಶವನ್ನು ಸಂಘಟಿಸಿ, ರಾಜ್ಯ ಮಟ್ಟದ ಹೋರಾಟವಾಗಿ ರೂಪಿಸಲಾಗುವುದು ಎಂದು ನಿರ್ಧರಿಸಿದ್ದಾರೆ. ಸೆಪ್ಟೆಂಬರ್ 28 ರಂದು ಬೆಂಗಳೂರಿನ ಶಾಸಕರ ಭವನದ ಸಮ್ಮೇಳನ ಸಭಾಂಗಣದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ(ಕೆಪಿಆರ್ಎಸ್) ಏರ್ಪಡಿಸಿದ್ದ ನೈಸ್ ಸಂತ್ರಸ್ಥರ ರಾಜ್ಯ ಮಟ್ಟದ ದುಂಡುಮೇಜಿನ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ರೈತರ ಮೇಲೆ ನಡೆಯುತ್ತಿರುವ ನೈಸ್ ಸಂಸ್ಥೆ ಅನ್ಯಾಯ–ದೌರ್ಜನ್ಯಗಳ ಕುರಿತು ಸಾರ್ವಜನಿಕರ ಹಾಗೂ ಸರ್ಕಾರದ ಗಮನ ಸೆಳೆಯಲು ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿಯಾಗಿ ನೈಸ್ ಕಂಪನಿಯ ಬಿಎಂಐಸಿ ಯೋಜನೆಯನ್ನು ರದ್ದುಗೊಳಿಸಬೇಕು, ನೈಸ್ ಕಂಪನಿಯ ಭೂ ಸ್ವಾಧೀನ ಮತ್ತು ರಸ್ತೆ ನಿರ್ಮಾಣದ ಹಗರಣಗಳನ್ನು ತನಿಖೆಗೆ ಒಳಪಡಿಸಿ ಹಗರಣದಲ್ಲಿ ಭಾಗಿಯಾಗಿರುವವರನ್ನು ಶಿಕ್ಷಿಸಬೇಕು, ರೈತರ ಒಪ್ಪಿಗೆ ಇಲ್ಲದೇ, ರೈತರ ಗಮನಕ್ಕೆ ಬಾರದಂತೆ ಭೂ ಸ್ವಾಧೀನ ಮಾಡಿರುವ ಎಲ್ಲಾ ಪ್ರಕರಣಗಳನ್ನು ರದ್ದುಪಡಿಸಬೇಕು, ನೈಸ್ ಹಗರಣಕ್ಕೆ ಸಂಬಂಧಿಸಿದ ಸದನಸಮಿತಿ ಮತ್ತು ಸಂಪುಟ ಉಪಸಮಿತಿಗಳು ನೀಡಿರುವ ವರದಿಯನ್ನು ಜಾರಿಗೊಳಿಸಬೇಕು, ಟೋಲ್ ಸಂಗ್ರಹಿಸುತ್ತಿರುವ ರಸ್ತೆಗೆ ಭೂಮಿ ಕಳೆದುಕೊಂಡಿರುವ ಎಲ್ಲಾ ರೈತರಿಗೆ 2013 ರ ಭೂ ಸ್ವಾಧೀನ ಕಾಯ್ದೆ ಪ್ರಕಾರ, ನಿವೇಶನ ಹಾಗೂ ಹೆಚ್ಚಿನ ಪರಿಹಾರ ನೀಡಬೇಕು, ಮೂಲ ಒಪ್ಪಂದದ ಚೌಕಟ್ಟು ಉಲ್ಲಂಘಿಸಿ KAIDB ಜೊತೆ ಮಾಡಿಕೊಂಡಿರುವ ನೈಸ್ ಕಂಪನಿಯ ಎಲ್ಲಾ ಒಪ್ಪಂದಗಳನ್ನು ರದ್ದುಪಡಿಸಬೇಕು, ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿಗೆ ವಿರುದ್ಧವಾಗಿ ನೈಸ್ ಕಂಪನಿ ಹೊಂದಿರುವ ಎಲ್ಲಾ ಜಮೀನುಗಳನ್ನು ಕೂಡಲೇ ವಾಪಸ್ಸು ಪಡೆಯಬೇಕು, ನೈಸ್ ಕಂಪನಿಗೆ ಹಸ್ತಾಂತರಿಸಿರುವ ಭೂಮಿಯ ರಿಯಲ್ ಎಸ್ಟೇಟ್ ಮಾರಾಟವನ್ನು ರದ್ದುಪಡಿಸಬೇಕು ಎಂದು ಆಗ್ರಹಿಸಲು ತೀರ್ಮಾನಿಸಲಾಯಿತು.



ಈ ದುಂಡುಮೇಜಿನ ಸಭೆಯಲ್ಲಿ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷ ಜಿ.ಸಿ. ಬಯ್ಯಾರೆಡ್ಡಿ, ಉಪಾಧ್ಯಕ್ಷ ಯು. ಬಸವರಾಜ, ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ವಿ. ನಾಗರಾಜ್, ರಾಜ್ಯ ರೈತ ಸಂಘ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ಜೆ.ಎಂ. ವೀರಸಂಗಯ್ಯ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ(AIAWU) ರಾಜ್ಯಾಧ್ಯಕ್ಷ ಎಂ. ಪುಟ್ಟಮಾದು, ಜನವಾದಿ ಮಹಿಳಾ ಸಂಘಟನೆ ರಾಜ್ಯ ಪ್ರಧಾನ ಕಾರ್ಯದರ್ಶಿ ದೇವಿ ಇವರುಗಳು ಮಾತಾನಾಡಿ, ನೈಸ್ ಸಂಸ್ಥೆ ದೌರ್ಜನ್ಯ–ಭ್ರಷ್ಟಾಚಾರದ ವಿರುದ್ಧದ ಹೋರಾಟದಲ್ಲಿ ಜೊತೆಯಾಗಿ ನಿಲ್ಲುವುದಾಗಿ ಘೋಷಿಸಿದರು. ಹಾಗೂ ನೈಸ್ ಸಂಸ್ಥೆಯ ಆಕ್ರಮಗಳಿಗೆ ಸಂಪೂರ್ಣವಾಗಿ ಸಹಕರಿಸಿರುವ ಕೆಎಐಡಿಬಿ ಹಾಗೂ ವಿವಿಧ ಇಲಾಖೆಗಳು, ನೈಸ್ ಸಂಸ್ಥೆಯ ಕೃಪಾಪೋಷಿತ ಆಕ್ರಮ ಕೂಟದ ಕಪಿಮುಷ್ಠಿಗೆ ಸಿಲುಕಿವೆ ಎಂದು ದುಂಡು ಮೇಜಿನ ಸಭೆ ಅಪಾದಿಸಿತು.

ದುಂಡು ಮೇಜಿನ ಸಭೆಯ ಅಧ್ಯಕ್ಷತೆಯನ್ನು ನೈಸ್ ಸಂತ್ರಸ್ಥ ರೈತರ ಹೋರಾಟ ಸಮಿತಿ ಅಧ್ಯಕ್ಷ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ಎನ್. ವೆಂಕಟಾಚಲಯ್ಯ ಅವರು ವಹಿಸಿದ್ದರು. ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ. ಯಶವಂತ ಪ್ರಾಸ್ತಾವಿಕವಾಗಿ ಮಾತಾನಾಡಿದರು. ರಾಜ್ಯ ಹಣಕಾಸು ಕಾರ್ಯದರ್ಶಿ ಹೆಚ್.ಆರ್. ನವೀನ್ ಕುಮಾರ್ ಸ್ವಾಗತಿಸಿದರು. ರಾಮನಗರ ತಾಲ್ಲೂಕು ನೈಸ್ ಸಂತ್ರಸ್ಥ ರೈತರ ಹೋರಾಟ ಸಮಿತಿ ಅಧ್ಯಕ್ಷ ಶ್ರೀ ನಾರಾಯಣಪ್ಪ ವಂದನಾರ್ಪಣೆಯನ್ನು ನೆರವೇರಿಸಿದರು.

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಮಂಡ್ಯ ಹಾಗೂ ಮೈಸೂರು ಜಿಲ್ಲೆಯ ನೈಸ್ ಸಂತ್ರಸ್ಥ ರೈತರು ಹಾಗೂ ವಿವಿಧ ಸಾಮೂಹಿಕ ಸಂಘಟನೆಗಳ ಮುಖಂಡರು ಭಾಗವಹಿಸಿ ನೈಸ್ ಸಂಸ್ಥೆ ದೌರ್ಜನ್ಯವನ್ನು ಒಗ್ಗಟ್ಟಿನಲ್ಲಿ ಹಿಮ್ಮೆಟ್ಟಿಸಲು ನಿರ್ಧರಿಸಿದರು.



ಬಿಜೆಪಿ ಪಕ್ಷದೊಂದಿಗೆ ಜೆಡಿಎಸ್ ಪಕ್ಷದ ಮೈತ್ರಿ ಏರ್ಪಟ್ಟಿದೆ. ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳಿಗೆ ಮೂರನೆಯ ಪರ್ಯಾಯವಾಗಿ ಜೆಡಿಎಸ್‌ಗೆ ಜನತೆ ಬಲ ತುಂಬಿದ್ದರು. ಆದರೀಗ ಇಂತಹ ಮೈತ್ರಿಯಿಂದ ರಾಜಕೀಯದಲ್ಲಿ ಆಗಬಹುದಾದ ಪರಿಣಾಮಗಳೇನು? ಎನ್ನುವುದು ಚರ್ಚಿತವಾಗುತ್ತಿದೆ. ಇಂತಹ ಸನ್ನಿವೇಶದಲ್ಲಿ ಮಂಡ್ಯ ಜಿಲ್ಲೆಯಲ್ಲಿ ಬೀರಬಹುದಾದ ಪರಿಣಾಮಗಳ ಬಗ್ಗೆ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿಯವರು ಇಲ್ಲಿ ವಿಶ್ಲೇಷಿಸಿದ್ದಾರೆ.

ಜೆಡಿಎಸ್–ಬಿಜೆಪಿ ಮೈತ್ರಿ...

ಜೆಡಿಎಸ್‌ಗೂ ಅಪಾಯ, ಮಂಡ್ಯ ಜಿಲ್ಲೆಯ ಸೌಹಾರ್ದ ಪರಂಪರೆಗೂ ಅಪಾಯ...

ಟಿ.ಎಲ್. ಕೃಷ್ಣೇಗೌಡ

ಕರ್ನಾಟಕದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ನಡುವಣ ಮೈತ್ರಿ ಅಧಿಕೃತವಾಗಿದೆ. ಇದು ರಾಜ್ಯದ ಜನತೆಯಲ್ಲಿ ಆತಂಕ ಮತ್ತು ಕುತೂಹಲ ಎರಡನ್ನೂ ಸೃಷ್ಟಿಸಿದೆ. ಕಳೆದ ವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಜೆಡಿಎಸ್ ವರಿಷ್ಠ ದೇವೇಗೌಡರು ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಯಾದರೂ ರಾಜ್ಯದ ಅಲ್ಪಸಂಖ್ಯಾತರ ಹಿತವನ್ನು ಬಲಿಕೊಡುವುದಿಲ್ಲ ಎಂದು ಹೇಳಿರುವುದನ್ನು ಯಾರೂ ನಂಬದ ಸ್ಥಿತಿಗೆ ಜೆಡಿಎಸ್ ತನ್ನನ್ನು ತಾನು ತಂದು ನಿಲ್ಲಿಸಿಕೊಂಡಿದೆ. ಕರ್ನಾಟಕದಲ್ಲಿ ದೇಶದ ಎರಡು ಆಳುವ ಪಕ್ಷಗಳಿಗೆ ಮೂರನೇ ಪರ್ಯಾಯವೊಂದು ಇರಬಾರದು, ಅದನ್ನು ಹೇಗಾದರೂ ಇಲ್ಲದಂತೆ ಮಾಡಿ ಮುಗಿಸಬೇಕೆಂಬುದು ಬಹಳ ದಿನಗಳ ಕನಸು. ಆ ಕನಸನ್ನು ನನಸಾಗಿಸಲು ಸ್ವತಃ ಜೆಡಿಎಸ್ ನಾಯಕತ್ವ ಸ್ವಯಂ ತ್ಯಾಗ ಮಾಡಿತು. ರಾತ್ರಿ ಕಂಡ ಬಾವಿಗೆ ಹಗಲು ಬೀಳುವ ಈ ರಾಜಕೀಯ ಆಟದಲ್ಲಿ ಜೆಡಿಎಸ್ ನಿಲುವು ಅಂತಿಮವಾಗಿ ಜೆಡಿಎಸ್ ಪಕ್ಷವನ್ನೇ ಇಲ್ಲದಂತೆ ಮಾಡಿ ಬಿಡಬಹುದು ಅಥವಾ ಸಂಪೂರ್ಣ ದುರ್ಬಲಗೊಳಿಸಿ ಬಿಜೆಪಿಯ ಬಾಲಂಗೋಚಿಯಂತೆ ಬಾಲ ಅಲ್ಲಾಡಿಸಿಕೊಂಡು ಇರಬೇಕಾಗಬಹುದು. ದೇಶದ ಹಿರೇ ಬಂಡವಾಳಶಾಹಿ ಭೂಮಾಲೀಕರ ಎರಡು ಪಕ್ಷಗಳಾದ ಬಿಜೆಪಿ ಮತ್ತು ಕಾಂಗ್ರೆಸ್ಸಿಗೆ ಒಂದು ಪ್ರಾದೇಶಿಕ ಅಥವಾ ಮೂರನೇ ಪರ್ಯಾಯವೊಂದು ಇಲ್ಲದ ನಿರ್ವಾತದಲ್ಲಿ ದುಡಿಯುವ ಜನತೆ ನಿರೀಕ್ಷಿಸಬಹುದಾಗಿದ್ದ ಸಣ್ಣ ಆಸೆಯೂ ಕಮರಿಹೋಗುತ್ತಿದೆ. ಈ ಪರ್ಯಾಯದ ನಿರ್ವಾತವನ್ನು ತುಂಬುವ ಕೆಲಸವನ್ನು ದುಡಿಯುವ ವರ್ಗದ ಪಕ್ಷಗಳು ಆದ್ಯತೆಯ ಮೇಲೆ ತೆಗೆದುಕೊಂಡು ಮುಂದೆ ಹೋಗಲು ಸೃಷ್ಟಿಯಾಗಿರುವ ಈ ಅವಕಾಶ ಮತ್ತು ಸವಾಲನ್ನು ಸರಿಯಾಗಿ ಬಳಸಿಕೊಳ್ಳಬೇಕು.

ಮಂಡ್ಯ ಜಿಲ್ಲೆಯಲ್ಲಿ ಜೆಡಿಎಸ್

ಇಡೀ ರಾಜ್ಯದಲ್ಲಿ ಮಂಡ್ಯ ಜಿಲ್ಲೆ ಜೆಡಿಎಸ್ ಪಕ್ಷದ ಭದ್ರ ನೆಲೆಯಾಗಿತ್ತು. ಕಳೆದ 2018ರ ವಿಧಾನಸಭಾ ಚುನಾವಣೆ ಮತ್ತು ಆ ಹಿಂದಿನ ಎರಡು ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಪಕ್ಷದ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದರು. ಅದರಲ್ಲೂ 2018 ರ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯ ಏಳೂ ವಿಧಾನಸಭಾ ಕ್ಷೇತ್ರಗಳಲ್ಲಿ ಜೆಡಿಎಸ್ ಜಯಭೇರಿ ಬಾರಿಸಿತ್ತು. ಇಡೀ ರಾಜ್ಯದಲ್ಲಿ ಕೇವಲ 40 ಸ್ಥಾನಗಳನ್ನು ಮಾತ್ರ ಪಡೆದಿದ್ದ ಜೆಡಿಎಸ್, ಒಂದು ಜಿಲ್ಲೆಯ ಎಲ್ಲಾ ಕ್ಷೇತ್ರಗಳಲ್ಲಿ ಜಯ ಸಾಧಿಸಿದ್ದು ಒಂದು ಅಪರೂಪದ ವಿದ್ಯಮಾನವೇ ಸರಿ.

ಕರ್ನಾಟಕದಲ್ಲಿ ದೇಶದ ಎರಡು ಆಳುವ ಪಕ್ಷಗಳಿಗೆ ಮೂರನೇ ಪರ್ಯಾಯವೊಂದು ಇರಬಾರದು, ಅದನ್ನು ಹೇಗಾದರೂ ಇಲ್ಲದಂತೆ ಮಾಡಿ ಮುಗಿಸಬೇಕೆಂಬುದು ಬಹಳ ದಿನಗಳ ಕನಸು. ಆ ಕನಸನ್ನು ನನಸಾಗಿಸಲು ಸ್ವತಃ ಜೆಡಿಎಸ್ ನಾಯಕತ್ವ ಸ್ವಯಂ ತ್ಯಾಗ ಮಾಡಿತು. ರಾತ್ರಿ ಕಂಡ ಬಾವಿಗೆ ಹಗಲು ಬೀಳುವ ಈ ರಾಜಕೀಯ ಆಟದಲ್ಲಿ ಜೆಡಿಎಸ್ ನಿಲುವು ಅಂತಿಮವಾಗಿ ಜೆಡಿಎಸ್ ಪಕ್ಷವನ್ನೇ ಇಲ್ಲದಂತೆ ಮಾಡಿ ಬಿಡಬಹುದು ಅಥವಾ ಸಂಪೂರ್ಣ ದುರ್ಬಲಗೊಳಿಸಿ ಬಿಜೆಪಿಯ ಬಾಲಂಗೋಚಿಯಂತೆ ಬಾಲ ಅಲ್ಲಾಡಿಸಿಕೊಂಡು ಇರಬೇಕಾಗಬಹುದು.

ಜೆಡಿಎಸ್ ಪಕ್ಷದ ಈ ಸಾಧನೆಗೆ ಕಾರಣ ಮಂಡ್ಯ ಜಿಲ್ಲೆಯ ಸಾಮಾಜಿಕ ಸಂಯೋಜನೆ. ಇಡೀ ರಾಜ್ಯದಲ್ಲೇ ಒಕ್ಕಲಿಗರು ಅದರಲ್ಲೂ ಒಂದೇ ಪಂಗಡ ಗಂಗಟಕಾರ ಒಕ್ಕಲಿಗರು ಬಹುಸಂಖ್ಯಾತರಾಗಿರುವುದು ಮಂಡ್ಯ ಜಿಲ್ಲೆಯಲ್ಲಿ. ಅವರಲ್ಲಿ ಬಹುದೊಡ್ಡ ವಿಭಾಗ ದೇವೇಗೌಡರನ್ನು ಒಕ್ಕಲಿಗರ ಪರಮೋಚ್ಚ ನಾಯಕ ಎಂದು ನಂಬಿರುವುದು. ಇದರ ಜೊತೆಗೆ ಅಲ್ಲೊಂದು ಇಲ್ಲೊಂದು ಲೋಪವಾಗಿದ್ದರೂ ಮುಸ್ಲಿಂ



ಅಲ್ಪಸಂಖ್ಯಾತರು ಜೆಡಿಎಸ್ ಪಕ್ಷಕ್ಕೆ ಹೆಚ್ಚಿನ ಪ್ರಮಾಣದಲ್ಲಿ ತಮ್ಮ ನಿಷ್ಠೆ ಪ್ರದರ್ಶನ ಮಾಡುತ್ತಾ ಬಂದಿದ್ದು. ಜೆಡಿಎಸ್ ಪಕ್ಷ ತನ್ನನ್ನು ತಾನು ಒಕ್ಕಲಿಗರ ಪಕ್ಷ ಎಂದು ಬಿಂಬಿಸಿಕೊಳ್ಳಲು ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸಿತು. ಇದರಿಂದ ಆದ ಲಾಭವೆಂದರೆ ಒಕ್ಕಲಿಗರು ಗಟ್ಟಿಯಾಗಿ ಆ ಪಕ್ಷದ ಹಿಂದೆ ಅಣಿನೆರೆದರು. ಈ ರೀತಿಯಲ್ಲಿ ಸಾಮಾಜಿಕವಾಗಿ ಒಂದು ಸಮುದಾಯದ ಪಕ್ಷ ಎಂದು ಗುರುತಿಸಿಕೊಂಡ ಕಾರಣಕ್ಕೆ ಆದ ನಷ್ಟವೆಂದರೆ, ಒಕ್ಕಲಿಗರನ್ನು ಹೊರತುಪಡಿಸಿ ಉಳಿದೆಲ್ಲಾ ಸಾಮಾಜಿಕ ಗುಂಪುಗಳು ಆ ಪಕ್ಷದಿಂದ ದೂರ ಸರಿದದ್ದು.

ಸಂಕುಚಿತಗೊಂಡ ಸಾಮಾಜಿಕ ಮತ್ತು ಪ್ರಾದೇಶಿಕ ನೆಲೆ

ಜೆಡಿಎಸ್ ಎಲ್ಲಿಯವರೆಗೆ ಎಲ್ಲಾ ಸಾಮಾಜಿಕ ಗುಂಪುಗಳಿಗೆ ತನ್ನ ಸಂಘಟನಾ ಸಂರಚನೆಯೊಳಗೆ ಅವಕಾಶ ಮತ್ತು ಸ್ಥಾನಮಾನ ನೀಡಿತ್ತೋ, ಅಲ್ಲಿಯವರೆಗೆ ಆ ಪಕ್ಷ ಸಾಮಾಜಿಕವಾಗಿ ಮತ್ತು ಪ್ರಾದೇಶಿಕವಾಗಿ ವಿಶಾಲ ನೆಲೆಯನ್ನು ಹೊಂದಿತ್ತು. ದೇವೇಗೌಡರ ಕುಟುಂಬದ ಸುತ್ತ ಅಧಿಕಾರದ ಕೋಟೆ ಕಟ್ಟಿಕೊಳ್ಳಲು ಮತ್ತು ಇಡೀ ಪಕ್ಷವನ್ನು ತನ್ನ ಕುಟುಂಬದ ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಜೆಡಿಎಸ್ ಪ್ರಯತ್ನ ಆರಂಭಿಸಿತೋ, ಆಗ ಜೆಡಿಎಸ್ ಸಾಮಾಜಿಕವಾಗಿ ಮತ್ತು ಪ್ರಾದೇಶಿಕವಾಗಿ ತನ್ನ ನೆಲೆಯನ್ನು ಕಳೆದುಕೊಳ್ಳುತ್ತಾ ಬಂದು, ಒಂದು ಜಾತಿಗೆ ಮತ್ತು ಒಂದು ಕುಟುಂಬಕ್ಕೆ ಸೀಮಿತವಾದ ಪಕ್ಷವಾಗಿ ಗೋಚರಿಸತೊಡಗಿತು. ಬಿಜೆಪಿ ಜೊತೆಗಿನ ಚೆಲ್ಲಾಟ ಆರಂಭವಾದ ನಂತರ, ಜೆಡಿಎಸ್ ಬೆಂಬಲಕ್ಕೆ ನಿಂತಿದ್ದ ಅಳಿದುಳಿದ ಅಲ್ಪಸಂಖ್ಯಾತರೂ ದೂರಾವಾಗಿ, ಜೆಡಿಎಸ್ ಸೊರಗಿಹೋಯಿತು ಮತ್ತು ಬಿಜೆಪಿ ಕೈ ಹಿಡಿಯುವ ಒತ್ತಡಕ್ಕೆ ಒಳಗಾಯಿತು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮಂಡ್ಯ ಕ್ಷೇತ್ರದ ಮತ ಎಣಿಕೆ ನಡೆಯುವಾಗ, ಗ್ರಾಮಾಂತರ ಪ್ರದೇಶದ ಬೂತ್‌ಗಳಲ್ಲಿ 12,000 ಮತಗಳಿಂದ ಮುಂದಿದ್ದ ಜೆಡಿಎಸ್, ಮಂಡ್ಯ ನಗರದ ಬೂತ್ ಎಣಿಸುವಾಗ 14,000 ಮತಗಳಿಂದ ಹಿಂದುಳಿದು, ಕೊನೆಗೆ ಎರಡು ಸಾವಿರ ಮತಗಳಿಂದ ಸೋಲಲ್ಪಟ್ಟಿತು. ಈ ಫಲಿತಾಂಶ ಇವತ್ತಿನ ರಾಜಕೀಯ ಸ್ಥಿತಿ.

ಜನ ಚಳವಳಿಗಳಿಂದ ದೂರ, ಖರ್ಚಿಗೂ ಪರದಾಡಬೇಕಾದ ಜೆಡಿಎಸ್

ಇತ್ತೀಚಿನ ವರ್ಷಗಳಲ್ಲಿ ಜೆಡಿಎಸ್ ಪಕ್ಷ ಅಲ್ಲೊಂದು ಇಲ್ಲೊಂದು ಅಪವಾದಗಳನ್ನು ಹೊರತುಪಡಿಸಿ, ಜನತೆಯ ಜ್ವಲಂತ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಟಗಳನ್ನು ಮಾಡುವ ಕೆಲಸದಿಂದ ದೂರ ಉಳಿಯಿತು. ಕೇವಲ ಭಾವನಾತ್ಮಕ ನಡೆ ನುಡಿಗಳ ಮೂಲಕ ತನ್ನ ಬೆಂಬಲದ ನೆಲೆಯನ್ನು ಕಾಪಾಡಿಕೊಳ್ಳಲು ಜೆಡಿಎಸ್ ಮತ್ತು ಅದರ ನಾಯಕ ಕುಮಾರಸ್ವಾಮಿ ಪ್ರಯತ್ನಿಸಿದರು. ಕಳೆದ ಬಿಜೆಪಿ ಸರ್ಕಾರದ ಅವಧಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನುಸರಿಸಿದ ಜನ ವಿರೋಧಿ ಮತ್ತು ರೈತ ವಿರೋಧಿ ನೀತಿಗಳ ವಿರುದ್ಧ ಒಂದೂ ಮಾತನಾಡದ ಪಕ್ಷ, ಕೇವಲ ಮ್ಯಾನೇಜ್ಮೆಂಟ್ ರಾಜಕಾರಣದಿಂದಲೇ ಅಧಿಕಾರ ಹಿಡಿಯುವ ಕನಸು ಕಾಣುತಿತ್ತು. ಜನತೆಯ ಹೋರಾಟಗಳಿಗೆ ನೇತೃತ್ವ ನೀಡದ ಕಾರಣ, ಯಾವುದೇ ಜನ ವಿಭಾಗ ಆ ಪಕ್ಷವನ್ನು ತನ್ನದು ಎಂದು ಸ್ವೀಕರಿಸಲಿಲ್ಲ. ಸ್ವತಃ ಕುಮಾರಸ್ವಾಮಿಯವರಿಗೆ ಇಂತಹ ಜನ ಹೋರಾಟಗಳಲ್ಲಿ ನಂಬಿಕೆ ಇರಲಿಲ್ಲ. ಇದರಿಂದಾಗಿ ಜನರೇ ನೀಡಿದ ಹಣದಿಂದ ಚುನಾವಣೆ ನಡೆಸುತ್ತಿದ್ದ ಪಕ್ಷ, ಜನರಿಗೆ ಹಣ ನೀಡುವ, ಆ ಮೂಲಕ ಮತ ಖರೀದಿಸುವ ಮಟ್ಟಕ್ಕೆ ತಲುಪಿತು. ಕೊನೆಗೆ ಕುಮಾರಸ್ವಾಮಿಯವರನ್ನು ಸ್ವಾಗತಿಸಲು ಕೂಡಾ ಮೇಲಿನಿಂದ ಬರುವ ಹಣಕ್ಕೆ ಕಾರ್ಯಕರ್ತರು ಕಾಯುವ ಸ್ಥಿತಿಗೆ, ಹಣವುಳ್ಳ ಕುಳಗಳಿಗೆ ಮಣೆ ಹಾಕುವ ಸ್ಥಿತಿಗೆ ಜೆಡಿಎಸ್ ತಲುಪಿತು. ಕಳೆದ ಚುನಾವಣೆಯಲ್ಲಿ ಕುಮಾರಸ್ವಾಮಿಯವರೇ ಹೇಳಿದಂತೆ, ಅನೇಕ ಕ್ಷೇತ್ರಗಳಿಗೆ ಭರವಸೆ ನೀಡಿದ್ದಷ್ಟು ಹಣವನ್ನೂ ಕೂಡ ಚುನಾವಣೆ ಖರ್ಚಿಗೆ ನೀಡಲು ಜೆಡಿಎಸ್ ಪಕ್ಷಕ್ಕೆ ಸಾಧ್ಯವಾಗಲಿಲ್ಲ. ದೇಶದ ದೊಡ್ಡ ಬಂಡವಾಳದಾರರ ಎರಡು ಪಕ್ಷಗಳನ್ನು ಅವರದೇ ಹಾದಿಯಲ್ಲಿ ಮಣಿಸುವ ಕುಮಾರಸ್ವಾಮಿ ಮತ್ತು ಜೆಡಿಎಸ್ ನಾಯಕರ ಸಾಹಸ, ಆರ್ಥಿಕವಾಗಿ ಜೆಡಿಎಸ್ ಪಕ್ಷವನ್ನು ದುರ್ಬಲಗೊಳಿಸಿತು. ಈ ಸಾಹಸಗಳು ಜೆಡಿಎಸ್ ಪಕ್ಷವನ್ನು ಬಿಜೆಪಿಯ ನೆರಳಿಗೆ ಸರಿಯುವಂತೆ ಮಾಡಿದವು.

ಜೆಡಿಎಸ್ ಪಕ್ಷವನ್ನು ಉಳಿಸಿಕೊಳ್ಳಲು ಬಿಜೆಪಿ ಜೊತೆ ಮೈತ್ರಿ ಅನಿವಾರ್ಯ ಎಂಬ ಅವಕಾಶವಾದಿ ಮತ್ತು ಹತಾಶೆಯ ಮಾತುಗಳನ್ನು ಜೆಡಿಎಸ್ ಮುಖಂಡರು ಆಡುತ್ತಿದ್ದಾರೆ. ಇದೊಂದು ರೀತಿಯಲ್ಲಿ ಹುಲಿಯ ಮೇಲಿನ ಸವಾರಿ. ಇಡೀ ದೇಶದ ಬೇರೆಲ್ಲಾ ಅನುಭವಗಳು ಇದಕ್ಕೆ ವ್ಯತಿರಿಕ್ತವಾದ ವಿಷಯವನ್ನೇ ಹೇಳುತ್ತಿವೆ. ಬಿಜೆಪಿ ಸಹವಾಸ ಮಾಡಿದ ಸರಿಸುಮಾರು ಎಲ್ಲಾ ಪಕ್ಷಗಳು ಒಂದೋ ನಾಶವಾಗಿವೆ ಅಥವಾ ಬಿಜೆಪಿ ಜೊತೆ ವಿಲೀನಗೊಂಡಿವೆ.

ಜೆಡಿಎಸ್ ಪಕ್ಷವನ್ನು ಉಳಿಸಿಕೊಳ್ಳಲು ಬಿಜೆಪಿ ಜೊತೆ ಮೈತ್ರಿ ಅನಿವಾರ್ಯ ಎಂಬ ಅವಕಾಶವಾದಿ ಮತ್ತು ಹತಾಶೆಯ ಮಾತುಗಳನ್ನು ಜೆಡಿಎಸ್ ಮುಖಂಡರು ಆಡುತ್ತಿದ್ದಾರೆ. ಇದೊಂದು ರೀತಿಯಲ್ಲಿ ಹುಲಿಯ ಮೇಲಿನ ಸವಾರಿ. ಇಡೀ ದೇಶದ ಬೇರೆಲ್ಲಾ ಅನುಭವಗಳು ಇದಕ್ಕೆ ವ್ಯತಿರಿಕ್ತವಾದ ವಿಷಯವನ್ನೇ ಹೇಳುತ್ತಿವೆ. ಬಿಜೆಪಿ ಸಹವಾಸ ಮಾಡಿದ ಸರಿಸುಮಾರು ಎಲ್ಲಾ ಪಕ್ಷಗಳು ಒಂದೋ ನಾಶವಾಗಿವೆ ಅಥವಾ ಬಿಜೆಪಿ ಜೊತೆ ವಿಲೀನಗೊಂಡಿವೆ. ಇದಕ್ಕೆ ಭಿನ್ನವಾಗಿ ಬಹುಶಃ ಯಾವುದೇ ಪವಾಡ ನಡೆಯುವ ಸಾಧ್ಯತೆಯಿಲ್ಲ. ಬಿಜೆಪಿ ಜೊತೆ ಹೋದರೆ ಮಂಡ್ಯ ಜಿಲ್ಲೆಯಲ್ಲೂ ಜೆಡಿಎಸ್ ಉಳಿಯಲು ಸಾಧ್ಯವಿಲ್ಲ. ಬಿಜೆಪಿ ಜೊತೆ ಯಾವುದೇ ಕಾರಣಕ್ಕೂ ಹೋಗುವುದಿಲ್ಲ ಎಂದು ಜೆಡಿಎಸ್ ದೃಢವಾಗಿ ಹೇಳಿದ್ದರೆ, ಮಂಡ್ಯ ಮತ್ತು ನಾಗಮಂಗಲ ಕ್ಷೇತ್ರಗಳಲ್ಲಿ ಜೆಡಿಎಸ್ ನಿರಾಯಾಸವಾಗಿ ಗೆಲ್ಲುತ್ತಿತ್ತು. ಆ ಎರಡೂ ಕ್ಷೇತ್ರಗಳಲ್ಲಿ ಸಣ್ಣ ಪ್ರಮಾಣದಲ್ಲಿ ಅಲ್ಪಸಂಖ್ಯಾತ ಮತಗಳು ಜೆಡಿಎಸ್ ಪಕ್ಷಕ್ಕೆ ಬಿದ್ದಿದ್ದರೂ ಜೆಡಿಎಸ್‌ಗೆ ಲಾಭವಾಗುತ್ತಿತ್ತು. ಇನ್ನು ಬಿಜೆಪಿ ಜೊತೆ ಮೈತ್ರಿ ಅಧಿಕೃತ ಆದ ಮೇಲೆಂತೂ, ಅಳಿದುಳಿದ ಅಲ್ಪಸಂಖ್ಯಾತ ಜನರೂ ಕೂಡ ಜೆಡಿಎಸ್‌ನಿಂದ ದೂರವಾಗುತ್ತಾರೆ.

ಜೆಡಿಎಸ್ ನಾಯಕನಾಗಲು ಸಾಧ್ಯವೆ?

ಸಾಮಾಜಿಕವಾಗಿ ಬಹುಸಂಖ್ಯಾತ ಒಕ್ಕಲಿಗರು ಜೆಡಿಎಸ್ ಜೊತೆ, ದಲಿತರು ಮತ್ತು ಇತರೆ ಹಿಂದುಳಿದವರು ಕಾಂಗ್ರೆಸ್ ಜೊತೆ ಮತ್ತು ಲಿಂಗಾಯತ ಹಾಗೂ ಇತರೆ ಮುಂದುವರಿದ ಜಾತಿಗಳು ಬಿಜೆಪಿ ಜೊತೆ ಎಂಬ ಸ್ಥಿತಿ ಮಂಡ್ಯ ಜಿಲ್ಲೆಯಲ್ಲಿ ಇದೆ. ಅಲ್ಪಸಂಖ್ಯಾತರು ಕಾಂಗ್ರೆಸ್ ಮತ್ತು ಜೆಡಿಎಸ್ ನಡುವೆ ಹಂಚಿ ಹೋಗಿದ್ದರು. ಈಗ ಅಲ್ಪಸಂಖ್ಯಾತರು ಜೆಡಿಎಸ್ ನಿಂದ ದೂರ ಸರಿದರೆ ಸಹಜವಾಗಿಯೇ ಕಾಂಗ್ರೆಸ್ ಕಡೆ ಸರಿಯುತ್ತಾರೆ. ಜೆಡಿಎಸ್ ಪಕ್ಷದ ಬಗ್ಗೆ ಸಹಾನುಭೂತಿ ಹೊಂದಿದ್ದ ದಲಿತರೂ ಕೂಡಾ ಸಹಜವಾಗಿ ಜೆಡಿಎಸ್ ಪಕ್ಷದಿಂದ ದೂರ ಸರಿಯುತ್ತಾರೆ. ಜೆಡಿಎಸ್ ದಲಿತರು ಮತ್ತು ಅಲ್ಪಸಂಖ್ಯಾತರಿಂದ ಉಂಟಾಗುವ ನಷ್ಟವನ್ನು ಲಿಂಗಾಯತರು ಮತ್ತು ಇತರೆ ಮುಂದುವರಿದ ಜಾತಿಗಳಿಂದ ತುಂಬಿಕೊಳ್ಳಬೇಕು. ಆದರೆ ಅದು ಅಷ್ಟು ಸುಲಭಕ್ಕೆ ಸಾಧ್ಯವಾಗುವ ವಿಚಾರವಲ್ಲ. ಏಕೆಂದರೆ ಬಿಜೆಪಿ ಪ್ರವರ್ಧಮಾನಕ್ಕೆ ಬರುವವರೆಗೆ ಲಿಂಗಾಯತರು ಕಾಂಗ್ರೆಸಿನ ಬೆಂಬಲಿಗರಾಗಿದ್ದರು. ಈಗಲೂ ಕೂಡಾ ಜಿಲ್ಲೆಯಲ್ಲಿ ಜೆಡಿಎಸ್ ಮತ್ತು ಕಾಂಗ್ರೆಸ್ ನಡುವಿನ ಆಯ್ಕೆಯ ಪ್ರಶ್ನೆ ಬಂದರೆ, ಲಿಂಗಾಯತರು ಕಾಂಗ್ರೆಸ್ ಪಕ್ಷದ ಕಡೆಗೆ ಸರಿಯುವ ಸಾಧ್ಯತೆಗಳಿವೆ. ಬಿಜೆಪಿಯ ಬಾಸ್‌ಗಳೂ ಕೂಡಾ ಇಂತಹ ತಂತ್ರ ಎಣೆದು, ಜೆಡಿಎಸ್ ಪಕ್ಷವನ್ನು ಅಪ್ರಸ್ತುತಗೊಳಿಸಿ, ನಂತರ ತಮ್ಮ ಪ್ರಾಬಲ್ಯವನ್ನು ಸಾಧಿಸುವ ದಾರಿ ಹುಡಕಲಿದ್ದಾರೆ. ಕ್ರಮೇಣ ಒಕ್ಕಲಿಗರೂ ಕೂಡಾ ಧ್ರುವೀಕರಣಗೊಂಡು, ಕಾಂಗ್ರೆಸ್ ಮತ್ತು ಬಿಜೆಪಿಯ ನಡುವೆ ಹಂಚಿಹೋಗಲಿದ್ದಾರೆ.

ಪುಟ 10 ಕ್ಕೆ

“ಅಮೆರಿಕದ ಕೃಷಿ ಉದ್ಯಮಗಳಿಗೆ ಲಾಭಕ್ಕಾಗಿ ಭಾರತೀಯ ರೈತರಿಗೆ ಹಾನಿ ಮಾಡುವುದನ್ನು ನಿಲ್ಲಿಸಬೇಕು”

ಮುಕ್ತ ವ್ಯಾಪಾರ ಒಪ್ಪಂದಗಳು ಬೇಡ– ಕೃಷಿಯನ್ನು ಡಬ್ಲ್ಯುಟಿಒ ದಿಂದ ಹೊರಗಿಡಬೇಕು ಎಂದು ಎಐಕೆಎಸ್ ಆಗ್ರಹ

ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಮತ್ತು ಯುಎಸ್ ಸರ್ಕಾರ ಜೂನ್‌ನಲ್ಲಿ ನಡೆದ ಜಂಟಿ ಸಭೆಯಲ್ಲಿ ವಿಶ್ವ ವ್ಯಾಪಾರ ಸಂಘಟನೆಯಲ್ಲಿ (ಡಬ್ಲ್ಯುಟಿಒ) ಉಭಯ ದೇಶಗಳ ನಡುವಿನ ಬಾಕಿ ಉಳಿದಿರುವ ವ್ಯಾಪಾರ ವಿವಾದಗಳನ್ನು ಪರಿಹರಿಸಲು ನಿರ್ಧರಿಸಿವೆ. ಬಹುವಿವಾದಗಳ ಪೈಕಿ, ಕೊನೆಯದಾಗಿ ತೀರ್ಮಾನಿಸಿದ ವಿಷಯವೆಂದರೆ 2012 ರಲ್ಲಿ ಭಾರತವು ಸಲ್ಲಿಸಿದ ಏವಿಯನ್ ಫ್ಲೂಗೆ ಸಂಬಂಧಿಸಿದ ಕಳವಳಗಳ ಕಾರಣದಿಂದ ಅಮೆರಿಕ ಸಂಯುಕ್ತ ಸಂಸ್ಥಾನಗಳಿಂದ ಬಾತುಕೋಳಿ ಮತ್ತು ಟರ್ಕಿಯಂತಹ ಕೋಳಿ ಉತ್ಪನ್ನಗಳ ಮೇಲಿನ ಆಮದು ನಿರ್ಬಂಧದ ಕುರಿತಾದ್ದು.

ವಿವಾದ ಪರಿಹಾರದ ಹೆಸರಿನಲ್ಲಿ ಭಾರತ ಸರ್ಕಾರ ಭಾರತೀಯ ರೈತರ ಹಿತಾಸಕ್ತಿಗಳನ್ನು ಬಿಟ್ಟುಕೊಟ್ಟಿದೆ ಎಂದು ಈ ಕುರಿತು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಹೇಳಿಕೆಯೊಂದರಲ್ಲಿ ಟಿಪ್ಪಣಿ ಮಾಡಿದೆ. ಇದು ಕಡಲೆ, ಮಸೂರ, ಬಾದಾಮಿ, ವಾಲ್‌ನಟ್ಸ್, ಸೇಬುಗಳನ್ನು ಒಳಗೊಂಡಂತೆ ಕೆಲವು ಯುಎಸ್ ಉತ್ಪನ್ನಗಳ ಮೇಲಿನ ಸುಂಕಗಳಲ್ಲಿ ಕಡಿತವನ್ನು ಒದಗಿಸಿದೆ. ಯುಎಸ್ ವ್ಯಾಪಾರ ಪ್ರತಿನಿಧಿಯ ಕಚೇರಿಯ ಅಭಿನಂದನಾ ಟಿಪ್ಪಣಿಯಲ್ಲಿ ಇದನ್ನು ಘೋಷಿಸಲಾಗಿದೆ. "ಈ ಸುಂಕ ಕಡಿತವು ಯುಎಸ್ ಕೃಷಿ ಉತ್ಪಾದಕರಿಗೆ ಒಂದು ಮಹತ್ವದ ಮಾರುಕಟ್ಟೆಯಲ್ಲಿ ಆರ್ಥಿಕ ಅವಕಾಶಗಳನ್ನು ವಿಸ್ತರಿಸುತ್ತದೆ ಮತ್ತು ಭಾರತದಲ್ಲಿ ಗ್ರಾಹಕರಿಗೆ ಹೆಚ್ಚಿನ ಯುಎಸ್ ಉತ್ಪನ್ನಗಳನ್ನು ತರಲು ಸಹಾಯ ಮಾಡುತ್ತದೆ" ಎಂದು ಈ ಟಿಪ್ಪಣಿ ಹೇಳಿದೆ. ಅಮೆರಿಕ ಮತ್ತು ಯುರೋಪಿಯನ್ ಒಕ್ಕೂಟ ತಮ್ಮ ಅನುಕೂಲಕ್ಕಾಗಿ ಹೊಂದಾಣಿಕೆಗಳನ್ನು ಗಿಟ್ಟಿಸುವುದಕ್ಕಾಗಿ ಅಭಿವೃದ್ಧಿಶೀಲ ರಾಷ್ಟ್ರಗಳ ವಿರುದ್ಧ ಪ್ರಕರಣಗಳನ್ನು ಎತ್ತಲು ಡಬ್ಲ್ಯುಟಿಒ ದ ದ ವಿವಾದ ಪರಿಹಾರ ವ್ಯವಸ್ಥೆಯನ್ನು ಕಾರ್ಯವಿಧಾನವನ್ನು ಬಳಸಿಕೊಂಡಿದೆ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ ಎಂದು ಎಐಕೆಎಸ್ ಈ ಸಂದರ್ಭದಲ್ಲಿ ನೆನಪಿಸಿದೆ.

ಬಲವಾದ ಪ್ರತಿಭಟನೆಗಳ ನಂತರ ಭಾರತೀಯ ಸರ್ಕಾರದ ನಿಲುವನ್ನು ಮುಜುಗರದಿಂದ ಪಾರು ಮಾಡುವ ಪ್ರಯತ್ನದಲ್ಲಿ, ವಾಣಿಜ್ಯ ಸಚಿವಾಲಯವು "50% ಮತ್ತು 100% ದ 'ಮೋಸ್ಟ್ ಫೇವರ್ಡ್ ನೇಷನ್' ಸುಂಕವು ಯುಎಸ್‌ನ ಸೇಬುಗಳು ಮತ್ತು ವಾಲಟ್ ಗಳ ಮೇಲೆ ಮುಂದುವರೆಯುತ್ತದೆ, ಏಕೆಂದರೆ ಕೇವಲ 20% ಹೆಚ್ಚುವರಿ ಸುಂಕವನ್ನಷ್ಟೇ ತೆಗೆಯಲಾಗಿದೆ" ಎಂದಿದೆ. ಅನ್ವಯಿಸುತ್ತದೆ. ಕರ್ತವ್ಯವನ್ನು ತೆಗೆದುಹಾಕಲಾಗಿದೆ." ಯುಎಸ್ ಸೇಬುಗಳು, ಬೀಜಗಳು ಮತ್ತು ಮಸೂರಗಳ ಮೇಲಿನ ಹೆಚ್ಚುವರಿ 'ಪ್ರತಿಕಾರ ಸುಂಕ'ವನ್ನು ತೆಗೆದುಹಾಕುವುದರಿಂದ ಭಾರತೀಯ ಉತ್ಪಾದಕರಿಗೆ ಅಡ್ಡಿಯಾಗುವುದಿಲ್ಲ ಎಂದು ಟಿಪ್ಪಣಿ ಹೇಳುತ್ತದೆ. ಆದರೆ ಇದೊಂದು ಸುಳ್ಳು ಆಶ್ವಾಸನೆ, ಈ ಮುಚ್ಚಿದ ಬಾಗಿಲಿನ 'ವಿವಾದ ಪರಿಹಾರ' ನೂರಾರು ಭಾರತೀಯ ರೈತರ ಜೀವನೋಪಾಯವನ್ನು ಅಪ್ಪಚ್ಚಿ ಮಾಡುತ್ತದೆ ಎಂದು ಎಐಕೆಎಸ್ ಆಕ್ರೋಶ ವ್ಯಕ್ತಪಡಿಸಿದೆ. ಈ ಹಿಂದೆ 2020ರಲ್ಲಿ, ಭಾರತ–ಯುಎಸ್ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಮುದ್ರೆಯೊತ್ತಲು ಭಾರತವು ತನ್ನ ಕೋಳಿ ಮತ್ತು ಹೈನುಮಾರುಕಟ್ಟೆಗಳನ್ನು ತೆರೆಯಲು ಒಪ್ಪಿಕೊಂಡಿತ್ತು. ಸುಂಕಪಟ್ಟಿಗಳಲ್ಲಿನ ಈ ಕಡಿತವು ಭಾರತೀಯ ರೈತರ ಹಿತಗಳನ್ನು ಬಲಿಗೊಟ್ಟು ಯುನೈಟೆಡ್ ಸ್ಟೇಟ್ಸ್‌ನ ಇಚ್ಛೆಗೆ ಭಾರತ ಸರ್ಕಾರ ಜೀಹುಜೂರ್ ಎಂದಿದೆ ಎಂಬುದನ್ನು ಸೂಚಿಸುತ್ತಿದೆ ಎಂದಿರುವ ಎಐಕೆಎಸ್, ಇದರಿಂದಾಗಿ ಅಮೆರಿಕಾದ ಅಗ್ಗದ ಕೃಷಿ ಉತ್ಪನ್ನಗಳನ್ನು ತಂದು ಸುರಿಯುವುದರ ಪರಿಣಾಮವಾಗಿ ಒಂದು ಫಲದಾಯಕ ಆದಾಯವನ್ನು ಪಡೆಯುವ ಭಾರತೀಯ ರೈತರ ನಿರೀಕ್ಷೆಗಳು ಮತ್ತಷ್ಟು ಸೊರಗಿ ಹೋಗುತ್ತವೆ ಎಂದು ಹೇಳಿದೆ.

ಈ ಹಿಂದೆ, ಭಾರತ ಇತರ ಅಭಿವೃದ್ಧಿಶೀಲ ರಾಷ್ಟ್ರಗಳೊಂದಿಗೆ, ಕೃಷಿಯ ಮೇಲಿನ ಡಬ್ಲ್ಯುಟಿಒ ಒಪ್ಪಂದ ಮತ್ತು ಎಂಎಫ್‌ಎನ್(ಮೋಸ್ಟ್ ಫೇವರ್ಡ್ ನೇಷನ್) ಕಲಮಿನ ಬಗ್ಗೆ ಪ್ರಶ್ನೆಗಳನ್ನು ಎತ್ತಿತ್ತು. ಏಕೆಂದರೆ ಇವು ತನ್ನ ರೈತರಿಗೆ ದೊಡ್ಡ ಮಟ್ಟದ ಸಬ್ಸಿಡಿಗಳನ್ನು ನೀಡುವ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಪಕ್ಷಪಾತಿಯಾಗಿದೆ. ಅಂದಾಜಿನ ಪ್ರಕಾರ, ಒಬ್ಬ ಅಮೇರಿಕನ್ ರೈತ 61,286 ಡಾಲರ್ ಮೌಲ್ಯದ ಸಬ್ಸಿಡಿಗಳನ್ನು ಪಡೆದರೆ, ಒಬ್ಬ ಭಾರತೀಯ ರೈತ ಕೇವಲ 282 ಡಾಲರ್ ಪಡೆಯುತ್ತಾನೆ. ದೊಡ್ಡ ಪ್ರಮಾಣದ ಸಬ್ಸಿಡಿಯಲ್ಲದೆ, ದೊಡ್ಡ ಪ್ರಮಾಣದಲ್ಲಿ ಸೇಬು ಬೆಳೆಸುವ ಅನುಕೂಲವನ್ನೂ ಪಡೆದಿರುವ 'ದೊಡ್ಡ' ಅಮೇರಿಕನ್ ಸೇಬು ರೈತ ಮತ್ತು ಸಣ್ಣ ಹಿಡುವಳಿಗಳಲ್ಲಿ ಬೆಳೆ ತೆಗೆಯುವ ಭಾರತೀಯ ಸೇಬು ರೈತರ ನಡುವೆ ಅಸಮಾನ ಸ್ಪರ್ಧೆಯನ್ನು ಸೃಷ್ಟಿಸುತ್ತದೆ. ಉತ್ಪಾದನೆ ಮತ್ತು ಮೂಲಸೌಕರ್ಯದ ಸವಾಲುಗಳ ಜೊತೆಗೆ, ಈ ವಿರೂಪಗೊಳಿಸುವ ಎಂಎಫ್‌ಎನ್ ಕಲಮು ಪರ್ವತ ರಾಜ್ಯಗಳಾದ್ಯಂತ ಹರಡಿರುವ ಭಾರತೀಯ ಸೇಬು ಬೆಳೆಗಾರರ ಕುತ್ತಿಗೆಗೆ ಕುಣಿಕೆಯನ್ನು ಬಿಗಿಗೊಳಿಸುತ್ತದೆ ಎಂದು ಎಐಕೆಎಸ್ ಹೇಳಿದೆ.

ಭಾರತವು ಕೆಲವು ಸಮಯದಿಂದ ಮಸೂರ್ ಮತ್ತು ಇತರ ಬೇಳೆಕಾಳುಗಳ ಉತ್ಪಾದನೆಯಲ್ಲಿ ಕೊರತೆಯನ್ನು ಕಂಡಿದೆ. ಈಗಾಗಲೇ ಕಡಿಮೆ ಮಾರುಕಟ್ಟೆ ಬೆಲೆ ಮತ್ತು ಸರಕಾರದಿಂದ ಖರೀದಿಯ ಕೊರತೆಯಿಂದಾಗಿ ಬಳಲುತ್ತಿರುವ ಸಣ್ಣ ಮತ್ತು ತಳಮಟ್ಟದ ಭಾರತೀಯ ಉತ್ಪಾದಕರಿಗೆ ಅಮೇರಿಕನ್ ಮಸೂರಕ್ಕೆ ಸುಂಕದ ಕಡಿತ ದ್ವಿದಳ ಧಾನ್ಯಗಳನ್ನು ಬೆಳೆಯುವಲ್ಲಿ ಮತ್ತಷ್ಟು ನಿರುತ್ಸಾಹ ಉಂಟು ಮಾಡುತ್ತದೆ ಎಂದಿರುವ ಅಖಿಲ ಭಾರತ ಕಿಸಾನ್ ಸಭಾ ಕೋಳಿ, ಸೇಬು, ಬೀಜಗಳು ಮತ್ತು ಮಸೂರ ಸೇರಿದಂತೆ ವಿವಿಧ ಯುಎಸ್ ಮೂಲದ ಕೃಷಿ ಉತ್ಪನ್ನಗಳಿಗೆ ಒದಗಿಸಲಾದ ಸುಂಕ ಕಡಿತವನ್ನು ತಕ್ಷಣವೇ ಹಿಂಪಡೆಯಬೇಕೆಂದು ಆಗ್ರಹಿಸಿದೆ.

ಭಾರತೀಯ ರೈತರಿಗೆ ಹಾನಿಕರವಾಗಿರುವ ಕೃಷಿಯಲ್ಲಿ ಮುಕ್ತ ವ್ಯಾಪಾರ ಒಪ್ಪಂದಗಳನ್ನು ಭಾರತ ಸರ್ಕಾರವು ಮಾಡಿಕೊಳ್ಳಬಾರದು ಎಂದು ಒತ್ತಾಯಿಸುತ್ತ ಎಐಕೆಎಸ್ ಕೃಷಿಯನ್ನು ಡಬ್ಲ್ಯುಟಿಒದ ಕೃಷಿ ಒಪ್ಪಂದದಿಂದ ಹೊರತರಬೇಕು ಎಂಬ ತನ್ನ ದೀರ್ಘಕಾಲದ ಆಗ್ರಹವನ್ನು ಪುನರುಚ್ಚರಿಸಿದೆ.

ಬಿಜೆಪಿ ರಾಜಕಾರಣಕ್ಕೆ ಬೆಸೆದುಕೊಳ್ಳುತ್ತಿರುವ ಜೆಡಿಎಸ್... ಪುಟ 3 ರಿಂದ

ಕುಮಾರಸ್ವಾಮಿಯವರು ತಲುಪಿರುವುದು ದೊಡ್ಡ ರಾಜಕೀಯ ಅದಪತನವನ್ನು ಸೂಚಿಸುತ್ತದೆ. ಸ್ವಯಂಕೃತ ಅಪರಾಧಗಳಿಂದ ಹಂತ ಹಂತವಾಗಿ ದುರ್ಬಲ ಗೊಂಡಿರುವ ಜೆಡಿಎಸ್ ಪಕ್ಷ ಉಳಿದುಕೊಳ್ಳಲು ಈ ಬಾರಿ ಮತ್ತೆ ಆಲಂಗಿಸಿರುವುದು ಫ್ಯಾಶಿಸ್ಟ್ ವಾದಿ ದೈತ್ಯ ಬಿಜೆಪಿಯನ್ನೇ. ಇದರ ಪರಿಣಾಮ ಏನೆಲ್ಲಾ ಆಗಬಹುದು ಎನ್ನುವುದು ಕೂಡ ಅತ್ಯಂತ ಆತಂಕಕಾರಿ. ತನ್ನನ್ನು ಉಳಿಸಿಕೊಳ್ಳಬೇಕು ಎಂದು ಹೇಳಿಕೊಳ್ಳುತ್ತಲೇ ಇಲ್ಲವಾಗುವ ಜೆಡಿಎಸ್ಸಿನ ಆತ್ಮಹತ್ಯಾ ರಾಜಕಾರಣ ಹಲವು ದುರಂತಗಳನ್ನು ತೆರೆದಿಡಬಹುದು. ಈ ಕಾರಣದಿಂದಲೂ ಆ ಪಕ್ಷದ ಜೊತೆಗೆ ಇದ್ದ ಬಹಳಷ್ಟು ಮುಸ್ಲಿಂ ನಾಯಕರು ಅಲ್ಲಿಂದ ಹೊರ ನಡೆಯುತ್ತಿದ್ದಾರೆ. ಇದು ಕೇವಲ ಬಿಜೆಪಿ ಜೊತೆಗೆ ಸೇರಿದ್ದರಿಂದ ಮುಸ್ಲಿಮರು ಮಾತ್ರವೇ ಹೊರ ಹೋಗುತ್ತಾರೆ ಎಂದು ಭಾವಿಸುವುದೂ ಸಹ ತಪ್ಪಾಗುತ್ತದೆ. ಅಲ್ಲಿ ಬಿಜೆಪಿಯನ್ನು ದೃಢವಾಗಿ ವಿರೋಧಿಸುವ ಹಲವು ಇತರೆ ಸಮುದಾಯಗಳ ಜನತೆ ಇದ್ದಾರೆ ಎನ್ನುವುದನ್ನು ಮರೆಯಬಾರದು. ಈ ಸಂದರ್ಭದಲ್ಲಿ ತಾನು ಉಳಿದುಕೊಳ್ಳಬೇಕು ಎಂದು ಹೋಗುತ್ತಲೇ ಇಲ್ಲವಾಗುವ ದುರಂತ ಸ್ಥಿತಿ ಮುಂದಿನ ವಾಸ್ತವ ಆಗಬಹುದು.

ಸಹಸ್ರಾರು ಕೋಟಿ ರೂಗಳ ಭೂ ಹಗರಣದ ವಿರುದ್ಧ ರೈತ ಹೋರಾಟದ ರಣ ಕಹಳೆ...... ಪುಟ 8 ರಿಂದ

ಭೂ ಕಬಳಿಕೆ ಯತ್ನವನ್ನು ಮತ್ತೆ ಚುರುಕುಗೊಳಿಸಿದೆ

ಈ ರೀತಿ ಹಗರಣಗಳ ಸರಮಾಲೆಯನ್ನು ನಡೆಸಿರುವ ನೈಸ್ ಸಂಸ್ಥೆ ಮತ್ತೆ ತನ್ನ ಭೂ ಕಬಳಿಕೆ ಯತ್ನವನ್ನು ಚುರುಕುಗೊಳಿಸಿದೆ. 1997 ರಿಂದ 2003 ರವರೆಗೆ ಆಗಿರುವ ಭೂ ಸ್ವಾಧೀನವನ್ನು ನೆಪ ಮಾಡಿಕೊಂಡು, ಈಗ ಯಾವುದೇ ಪರಿಹಾರ ನೀಡದೇ, ಸಿವಿಲ್ ನ್ಯಾಯಲಯಗಳಲ್ಲಿ ಹಿಡುವಳಿದಾರರಾಗಿರುವ ರೈತರ ವಿರುದ್ಧ ಪ್ರತಿಬಂಧಾಕಾಜ್ಞೆ ಆದೇಶ ತಂದು, ರೈತರನ್ನು ಅವರ ಭೂಮಿಯಿಂದ ಬಲವಂತವಾಗಿ ಒಕ್ಕಲೆಬ್ಬಿಸುತ್ತಿದೆ. ಈಗಾಗಲೇ ಬೆಂಗಳೂರು ದಕ್ಷಿಣ ತಾಲ್ಲೂಕಿನ ಹಾಗೂ ರಾಮನಗರ ತಾಲ್ಲೂಕಿನ ರೈತರಿಗೆ ಇಂತಹ ನೋಟೀಸ್ ಗಳು ತಲುಪಿ ಆತಂಕವನ್ನು ಉಂಟುಮಾಡಿವೆ. ಕೆಲವರ ಭೂಮಿಯನ್ನು ವಶಕ್ಕೆ ಪಡೆದುಕೊಂಡಿದೆ. ಹಂತ ಹಂತವಾಗಿ ಮೈಸೂರಿನ ತನಕ ಭೂಮಿ ಕಿತ್ತುಕೊಳ್ಳುವ ದೌರ್ಜನ್ಯಕ್ಕೆ ನೈಸ್ ಕಂಪನಿ ತನ್ನ ಖಾಸಗಿ ಗೂಂಡಾಪಡೆಯನ್ನು ಹಾಗೂ ಪೊಲೀಸ್ ಬಲವನ್ನು ಬಳಸುತ್ತಿದೆ.

ಕಾನೂನು ಉಲ್ಲಂಘನೆ–ಅಕ್ರಮ–ಭ್ರಷ್ಟಾಚಾರಗಳ ಆರೋಪಗಳು

ಸನ್ಮಾನ್ಯ ಶ್ರೀ ಟಿ.ಬಿ. ಜಯಚಂದ್ರ ರವರ ಅಧ್ಯಕ್ಷತೆಯಲ್ಲಿ ರಚನೆಯಾಗಿದ್ದ ಸದನ ಸಮಿತಿಯ ತನಿಖಾ ವರದಿಯಲ್ಲಿ, ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ನ ಹಲವಾರು ತೀರ್ಪುಗಳಲ್ಲಿ, ಸಂಪುಟ ಉಪ ಸಮಿತಿ ನಡಾವಳಿಯಲ್ಲಿ, ನೈಸ್ ಸಂಸ್ಥೆ ಮೂಲ ಒಪ್ಪಂದದ ಚೌಕಟ್ಟನ್ನು ಉಲ್ಲಂಘಿಸಿರುವುದು, ಮೂಲ ಒಪ್ಪಂದದ ಚೌಕಟ್ಟಿಗೆ ಸಂಬಂದಿಸದೇ ಇರುವ ಭೂಮಿಗಳನ್ನು ಅಕ್ರಮವಾಗಿ ಕಬಳಿಸಿರುವುದು, ಟೋಲ್ ರಸ್ತೆಯನ್ನು ಒಪ್ಪಂದದಂತೆ ಅಭಿವೃದ್ಧಿ ಪಡಿಸದೇ ಒಪ್ಪಂದ ಉಲ್ಲಂಘಿಸಿರುವುದು, ಟೋಲ್ ದರವನ್ನು ಕಾನೂನು ಬಾಹಿರವಾಗಿ ಹೆಚ್ಚಳ ಮಾಡಿರುವುದು ಸಾಬೀತಾಗಿದೆ. ಯೋಜನೆಯನ್ನು ಪೂರ್ಣಗೊಳಿಸದೇ ಇದ್ದರೂ, ಕಾನೂನು ಉಲ್ಲಂಘನೆ–ಅಕ್ರಮ–ಭ್ರಷ್ಟಾಚಾರಗಳನ್ನು ನಡೆಸಿದ್ದರೂ ನೈಸ್ ಸಂಸ್ಥೆಯನ್ನು ಯಾವ ಕಾರಣಕ್ಕಾಗಿ ಈ ಯೋಜನೆ ಪೂರ್ಣಗೊಳಿಸಲು ಉಳಿಸಿಕೊಳ್ಳಲಾಗಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ನೈಸ್ ಸಂತ್ರಸ್ಥ ರೈತರ ಹೋರಾಟ ಸಮಿತಿ ರಾಜ್ಯ ಸರ್ಕಾರವನ್ನು ಈಗಾಗಲೇ ಪ್ರಶ್ನಿಸಿದೆ.

ಬೆಂಗಳೂರು–ಮೈಸೂರು ನಡುವಿನ ರಾಜ್ಯ ಹೆದ್ದಾರಿಯು ಈಗ ಹತ್ತು ಪಥಗಳ ರಾಷ್ಟ್ರೀಯ ಹೆದ್ದಾರಿಯಾಗಿ ವಿಸ್ತರಿಸಲಾಗಿದೆ. ಹೀಗಾಗಿ, ನೈಸ್ ರಸ್ತೆ ಈಗ ಟೋಲ್ ಸಂಗ್ರಹಿಸುತ್ತಿರುವ ಪೆರಿಫೆರಲ್ ರಿಂಗ್ ರಸ್ತೆಗೆ ಮುಕ್ತಾಯವಾಗಿದೆ ಎಂದೇ ಭಾವಿಸಿ, ತಮ್ಮ ಜಮೀನುಗಳ ಭೂ ದಾಖಾಲಾತಿಗಳಲ್ಲಿ ಆಗಿರುವ ಏಂಖಆಃ ಸ್ವಾಧೀನವನ್ನು ರದ್ದು ಮಾಡಲಾಗುತ್ತದೆ ಎಂದು ರೈತರು ನಂಬಿದ್ದರು. ಆದರೆ ಇತ್ತೀಚೆಗೆ ಮೂಲ ಒಪ್ಪಂದದ ಚೌಕಟ್ಟಿನ ಹೊರಗೆ ಇರುವ ರೈತರು ಸೇರಿದಂತೆ, ಬೆಂಗಳೂರು ದಕ್ಷಿಣ ತಾಲ್ಲೂಕು ಹಾಗೂ ರಾಮನಗರ ತಾಲ್ಲೂಕಿನ ರೈತರಿಗೆ 1997 ರ ಹಿಂದಿನ ಮಾರ್ಗಸೂಚಿ ದರದ ಪ್ರಕಾರ ಅವಾರ್ಡ್ ನೋಟೀಸ್ ನೀಡುತ್ತಿರುವುದು ಇಲ್ಲಿನ ರೈತರಲ್ಲಿ ಆತಂಕವನ್ನು ಉಂಟು ಮಾಡಿದೆ.


ಜೆಡಿಎಸ್–ಬಿಜೆಪಿ ಮೈತ್ರಿ.... ಪುಟ 9 ರಿಂದ

ಏಕೆಂದರೆ, ರಾಜ್ಯ ರಾಜಕಾರಣದಲ್ಲಿ ಸಹಜವಾಗಿಯೇ ಬಿಜೆಪಿ ದೊಡ್ಡಣ್ಣನ ಸ್ಥಾನದಲ್ಲಿ ಇರುತ್ತದೆ. ಮೈತ್ರಿ ರಾಜಕಾರಣದಲ್ಲಿ ಯಾವುದೇ ಕಾರಣಕ್ಕೂ ಜೆಡಿಎಸ್‌ಗೆ ಬಿಜೆಪಿ ಹೆಚ್ಚಿನ ಸ್ಥಾನಗಳನ್ನು ಬಿಟ್ಟುಕೊಡುವುದಿಲ್ಲ ಮತ್ತು ಗೆಲ್ಲದಂತೆ ನೋಡಿಕೊಳ್ಳುತ್ತದೆ. ಇದರಿಂದಾಗಿ ಸಹಜವಾಗಿಯೇ ಜೆಡಿಎಸ್ ನಾಯಕನ ಸ್ಥಾನಕ್ಕೆ ಬರುವುದೇ ಇಲ್ಲ. ಕುಮಾರಸ್ವಾಮಿ ಮೂಲಕ ಒಕ್ಕಲಿಗ ನಾಯಕನ್ನು ಕಾಣುತ್ತಿದ್ದ ಮತ್ತು ಕುಮಾರಸ್ವಾಮಿ ಮೂಲಕ ಒಕ್ಕಲಿಗನೊಬ್ಬರನ್ನು ಮುಖ್ಯಮಂತ್ರಿ ಕುರ್ಚಿಯಲ್ಲಿ ಕೂರಿಸಿದಂತೆ ಕನಸು ಕಾಣುತ್ತಿದ್ದ ಒಕ್ಕಲಿಗರು, ಅಂತಹ ಕನಸು ಕಾಣುವ ಸಾಧ್ಯತೆಗಳು ಕ್ಷೀಣಿಸುತ್ತಿದ್ದಂತೆಯೇ ಮತ್ತೊಬ್ಬ ತನ್ನ ಜಾತಿಯ ಪ್ರಭಲ ನಾಯಕನನ್ನು ಹುಡುಕತೊಡಗುತ್ತಾರೆ. ಅಲ್ಲಿಗೆ ಜೆಡಿಎಸ್ ಒಕ್ಕಲಿಗರ ನೆಲೆಯನ್ನೂ ಕಳೆದೊಂಡ ಪಕ್ಷವಾಗುತ್ತದೆ. ಅಳಿದುಳಿದ ಮುಖಂಡರು ಬಿಜೆಪಿಯೂ ಸೇರಿದಂತೆ ಇತರೆ ಪಕ್ಷಗಳಲ್ಲಿ ನೆಲೆ ಕಂಡುಕೊಂಡರೆ, ಜೆಡಿಎಸ್ ಇತಿಹಾಸದ ಭಾಗವಾಗಬಹುದು.

ಬಿಜೆಪಿಗೆ ನೆಲೆ ಒದಗಿಸಲಿರುವ ಮೈತ್ರಿ

ಮಂಡ್ಯ ಜಿಲ್ಲೆಯಲ್ಲಿ ಏನೇ ಕಸರತ್ತು ಮಾಡಿದರೂ ಬಿಜೆಪಿಗೆ ಒಂದು ನೆಲೆ ಸಿಕ್ಕಿರಲಿಲ್ಲ. ಜೆಡಿಎಸ್ ಜೊತೆಗಿನ ಮೈತ್ರಿ ಆ ಪಕ್ಷಕ್ಕೆ ಗ್ರಾಮೀಣ ಪ್ರದೇಶದಲ್ಲೆಲ್ಲಾ ಸಂಪರ್ಕ ವಿಸ್ತರಿಸಿಕೊಳ್ಳಲು ನೆರವಾಗಬಹುದು. ಇದರಿಂದಾಗಿ ಬಿಜೆಪಿಗೆ ತನ್ನ ನೆಲೆ ವಿಸ್ತರಿಸಿಕೊಳ್ಳಲು ಸಹಾಯವಾಗಬಹುದು. ಬಿಜೆಪಿ ಜೆಡಿಎಸ್‌ನ ಮಿತ್ರಪಕ್ಷ ಎಂಬ ಕಾರಣಕ್ಕೆ, ಬಿಜೆಪಿಯ ಕುತ್ಸಿತ ರಾಜಕಾರಣಕ್ಕೆ ಜೆಡಿಎಸ್‌ನ ಬೆಂಬಲಿಗರು ಮುಖ್ಯವಾಗಿ ಒಕ್ಕಲಿಗರು ಸಹಾನುಭೂತಿ ಸೂಚಿಸಬಹುದು. ಇದರಿಂದಾಗಿ ಮುಂದೆ ಆಗಬಹುದಾದ ಅಪಾಯಗಳನ್ನು ಊಹೆ ಮಾಡುವುದೇ ಕಷ್ಟವಾಗುತ್ತದೆ. ಜೆಡಿಎಸ್ ತನ್ನ ನೆಲೆ ಮತ್ತು ಬೆಲೆಯನ್ನು ಕಳೆದುಕೊಳ್ಳುವುದರ ಜೊತೆಗೆ, ಅಲ್ಲೆಲ್ಲಾ ಬಿಜೆಪಿ ಮತ್ತು ಸಂಘ ಪರಿವಾರ ನೆಲೆಯೂರಲು ಅವಕಾಶ ಮಾಡಿಕೊಡುತ್ತದೆ. ಈಗಾಗಲೇ ಆರಂಭಿಸಿರುವ ಶ್ರೀರಂಗಪಟ್ಟಣದ ಆಂಜನೇಯಸ್ವಾಮಿ ದೇವಸ್ಥಾನ ಮತ್ತು ಮಸೀದಿ ವಿಚಾರವನ್ನು ಇನ್ನಷ್ಟು ಆಕ್ರಮಣಕಾರಿಯಾಗಿ ಮುಂದೊಯ್ಯಲು ಸಂಘ ಪರಿವಾರಕ್ಕೆ ಅವಕಾಶವಾಗುತ್ತದೆ.

ಒಟ್ಟಾರೆಯಾಗಿ ಬಿಜೆಪಿ ಜೊತೆಗಿನ ಜೆಡಿಎಸ್ ಪಕ್ಷದ ಈ ಅವಕಾಶವಾದಿ ಮತ್ತು ಹತಾಶ ಮೈತ್ರಿ ಜೆಡಿಎಸ್ ಪಕ್ಷವನ್ನು ನಾಶ ಮಾಡುವುದಲ್ಲದೆ, ಜಿಲ್ಲೆಯ ಸೌಹಾರ್ದತೆ ಮತ್ತು ಸಾಮರಸ್ಯವನ್ನು ನಾಶ ಮಾಡಲು ಕಾರಣವಾಗುತ್ತದೆ. ಆದ್ದರಿಂದ ಜಿಲ್ಲೆಯ ಪ್ರಗತಿಪರ ಮತ್ತು ಜಾತ್ಯಾತೀತ ಶಕ್ತಿಗಳು ಈ ಸವಾಲನ್ನು ಎದುರಿಸುವ ಸಂಕಲ್ಪ ಮಾಡಬೇಕಾಗಿದೆ.





ಅಂತ್ಯ ಕಾಣದ ಭಾರತದ ಅತಿದೊಡ್ಡ ರಕ್ಷಣಾ ಹಗರಣ

ರಫೆಲ್ ಯುದ್ಧ ವಿಮಾನ ಒಪ್ಪಂದ

ಸಿ. ಸಿದ್ದಯ್ಯ

ಭಾರತದ ಅತಿದೊಡ್ಡ ರಕ್ಷಣಾ ಹಗರಣ ಎಂದೇ ಹೇಳಲಾದ, 2016ರಲ್ಲಿ ಫ್ರಾನ್ಸ್ ದೇಶದ ಡಸ್ಸಾಲ್ಟ್ ಏವಿಯೇಷನ್ ಕಂಪನಿಯ ಜೊತೆಗೆ ರೂ. 59,000 ಕೋಟಿ ಮೊತ್ತದ, 36 ರಫೆಲ್ ಯುದ್ಧ ವಿಮಾನ ಒಪ್ಪಂದದ ಕುರಿತು ಈ ಭಾಗದಲ್ಲಿ ಬರೆಯುವ ಪ್ರಯತ್ನ ಮಾಡುತ್ತೇನಾದರೂ, ಇದರ ಸಂಪೂರ್ಣ ವಿವರ ಬರೆದರೆ ಒಂದು ದೊಡ್ಡ ಪುಸ್ತಕವೇ ಆಗುತ್ತದೆ. ಈ ಹಗರಣದ ಕುರಿತಂತೆ ಈಗಾಗಲೇ, ಸ್ವತಂತ್ರ ಪತ್ರಕರ್ತರಾದ ರವಿ ನಾಯರ್ ಮತ್ತು ಪರಂಜಾಯ್ ಗುಹಾ ಠಾಕುರ್ತಾ 2022ರಲ್ಲಿ "ರಫೇಲ್ ಡೀಲ್ ಫ್ಲೈಯಿಂಗ್ ಲೈಸ್?" ಎಂಬ 500 ಪುಟಗಳ ಪುಸ್ತಕ ಬರೆದಿದ್ದಾರೆ. ಇದರಲ್ಲಿ, ಈ ಹಗರಣದಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಪಾತ್ರದ ಕುರಿತು ವಿವರಿಸಲಾಗಿದೆಯೆಂದು 7 ಡಿಸೆಂಬರ್ 2022 ರಂದು, ಬಿಸಿನೆಸ್ ಸ್ಟ್ಯಾಂಡರ್ಡ್ ಪತ್ರಿಕೆಯು ಪುಸ್ತಕದ ವಿಮರ್ಶೆಯನ್ನು ಪ್ರಕಟಿಸಿದೆ. 'ಜನಶಕ್ತಿ'ಗೆ ಸೀಮಿತ ಬರಹ ಬೇಕಿರುವುದರಿಂದ ರಫೇಲ್ ಹಗರಣದ ಬಗ್ಗೆ ಕೆಲವು ಮುಖ್ಯವಾದ ಅಂಶಗಳನ್ನು ಮಾತ್ರ ಇಲ್ಲಿ ಉಲ್ಲೇಖಿಸಲಾಗಿದೆ.

ಮೋದಿ 9 ವರ್ಷಗಳು-ಭಾಗ-18

ಎಚ್.ಎ.ಎಲ್. ಜೊತೆಗಿನ ಒಪ್ಪಂದ ರದ್ದುಗೊಳಿಸಿದ ನರೇಂದ್ರ ಮೋದಿಯವರ ಒಕ್ಕೂಟ ಸರ್ಕಾರ, 2016 ರಲ್ಲಿ, ರಿಲಯನ್ಸ್ ಪಾಲುದಾರಿಕೆ ಹೊಂದಿರುವ ಫ್ರಾನ್ಸ್ ದೇಶದ ಡಸ್ಸಾಲ್ಟ್ ಏವಿಯೇಷನ್ ಕಂಪನಿಯ ಜೊತೆಗೆ ರಫೇಲ್ ಯುದ್ಧ ವಿಮಾನ ಖರೀದಿ ಒಪ್ಪಂದಕ್ಕೆ ಸಹಿ ಹಾಕಿತು. ಕ್ಯಾಬಿನೆಟ್ ಸಮಿತಿಯ ಅನುಮತಿಯ ನಂತರ 36 ಯುದ್ಧ ವಿಮಾನಗಳನ್ನು ಖರೀದಿಸಲು ಅಂತರ-ಸರ್ಕಾರಿ ಒಪ್ಪಂದ(IGA) ಕ್ಕೆ ಭಾರತ ಮತ್ತು ಫ್ರಾನ್ಸ್ ಸಹಿ ಹಾಕಿದವು.

ಫ್ರಾನ್ಸ್ ಮತ್ತು ಭಾರತದ ನಡುವೆ IGA ಗೆ ಸಹಿ ಹಾಕಿದ ನಂತರ, ಒಪ್ಪಂದದ ವಿವರಗಳನ್ನು ಸಾರ್ವಜನಿಕಗೊಳಿಸುವಂತೆ ಕಾಂಗ್ರೆಸ್ ಪಕ್ಷ, ಸಿಪಿಐ(ಎಂ) ಸೇರಿದಂತೆ ವಿರೋಧ ಪಕ್ಷಗಳು ಕೇಳಿದವು. ಪ್ರತಿ ವಿಮಾನದ ವೆಚ್ಚವನ್ನು ರೂ. 715 ಕೋಟಿಯಿಂದ ರೂ. 1,600 ಕೋಟಿಗೆ ಹೆಚ್ಚಿಸಿದ್ದೇಕೆ ಎಂದು ಅವರು ಪ್ರಶ್ನಿಸಿದರು. ರಫೇಲ್ ಒಪ್ಪಂದದಲ್ಲಿ ಊಂಖ ಅನ್ನು ಕಡೆಗಣಿಸಲಾಗಿದೆ ಎಂದು ಆರೋಪಿಸಿದರು. 36 ಸಂಪೂರ್ಣ ನಿರ್ಮಿತ ವಿಮಾನಗಳನ್ನು ಸ್ವಾಧೀನಪಡಿಸಿಕೊಳ್ಳುವ ಮೋದಿಯವರ ಘೋಷಣೆಯ ಸಮಯದಲ್ಲಿ ಫ್ರಾನ್ಸ್‌ನಲ್ಲಿ ಅನಿಲ್ ಅಂಬಾನಿ ಉಪಸ್ಥಿತಿಯನ್ನು ಅವರು ಪ್ರಶ್ನಿಸಿದರು. 10 ಏಪ್ರಿಲ್ 2015 ರಂದು ಇಂಡೋ-ಫ್ರೆಂಚ್ ಸಿಇಓ ಫೋರಮ್‌ನೊಂದಿಗಿನ ಸಂವಾದದಲ್ಲಿ ಮೋದಿ ಮತ್ತು ಹೊಲಾಂಡೆ ಇರುವ ಚಿತ್ರದಲ್ಲಿ ಎರಡನೇ ಸಾಲಿನಲ್ಲಿ ಅನಿಲ್ ಅಂಬಾನಿ ಹೆಡ್‌ಫೋನ್‌ಗಳನ್ನು ಧರಿಸಿ ಕುಳಿತಿರುವ ಚಿತ್ರವನ್ನು ಮಾಧ್ಯಮಗಳು ಪ್ರಕಟಿಸಿವೆ.

ನಾಲ್ವರು ನ್ಯಾಯಾಧೀಶರಿಂದ ಮಾಧ್ಯಮ ಗೋಷ್ಠಿ!

ರಫೆಲ್ ಹಗರಣದ ಕುರಿತು ಬರೆಯುವ ಮುನ್ನ, ದೇಶದ ಗಮನ ಸೆಳೆದ ಭಾರತದ ನ್ಯಾಯಾಂಗದ ಒಂದು ಅಪರೂಪದ ಘಟನೆಯನ್ನು ನೆನಪಿಸಿಕೊಳ್ಳುವುದು ಸೂಕ್ತ ಎನಿಸುತ್ತದೆ. 12 ಜನವರಿ 2018 ರಂದು, ಭಾರತದ ಮುಖ್ಯ ನ್ಯಾಯಾಧೀಶರ ನಂತರದ ಎರಡನೇ ಹಿರಿಯ ನ್ಯಾಯಮೂರ್ತಿ ಜಸ್ಟಿಸ್ ಜೆ. ಚೆಲಮೇಶ್ವರ್ ಸೇರಿದಂತೆ, ನಾಲ್ವರು ನ್ಯಾಯಾಧೀಶರು ಜಂಟಿ ಸುದ್ದಿಗೋಷ್ಠಿ ನಡೆಸಿದ ಅಭೂತಪೂರ್ವ ನಡೆ ನ್ಯಾಯಾಂಗ ಮತ್ತು ಜನರನ್ನು ದಿಗ್ಭ್ರಮೆಗೊಳಿಸಿತು. ಇವರಲ್ಲಿ ರಂಜನ್ ಗೋಗೊಯ್, ಮದನ್ ಲೋಕುರ್ ಮತ್ತು ಕುರಿಯನ್ ಜೋಸೆಫ್ ಇದ್ದರು. "ದೇಶದ ಅತ್ಯುನ್ನತ ನ್ಯಾಯಾಲಯವನ್ನು ಬಾಧಿಸುತ್ತಿದೆ, ಈ ಸಂಸ್ಥೆಯನ್ನು ಸಂರಕ್ಷಿಸದ ಹೊರತು, ಈ ದೇಶದಲ್ಲಿ "ಪ್ರಜಾಪ್ರಭುತ್ವವು ಉಳಿಯುವುದಿಲ್ಲ" ಎಂದು ಚೆಲಮೇಶ್ವರ್ ಅನಿಯಂತ್ರಿತ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. ಸ್ವತಂತ್ರ ಭಾರತದಲ್ಲಿ ಈ ರೀತಿಯ ಘಟನೆ ಮೊದಲನೆಯದು.

"ಕೆಲವೊಮ್ಮೆ ಸುಪ್ರೀಂ ಕೋರ್ಟ್‌ನ ಆಡಳಿತವು ಕ್ರಮಬದ್ಧವಾಗಿಲ್ಲ ಮತ್ತು ಕಳೆದ ಕೆಲವು ತಿಂಗಳುಗಳಲ್ಲಿ ಅಪೇಕ್ಷಣೀಯಕ್ಕಿಂತ ಕಡಿಮೆಯಾದ ಅನೇಕ ವಿಷಯಗಳು ನಡೆದಿವೆ" ಎಂದು ಅವರು ಹೇಳಿದರು. ನ್ಯಾಯ ವಿತರಣಾ ವ್ಯವಸ್ಥೆಯಲ್ಲಿನ ವೈಫಲ್ಯ ಮತ್ತು ಪ್ರಕರಣಗಳ ಹಂಚಿಕೆಯ ವಿಷಯದಲ್ಲಿ ನ್ಯಾಯಾಲಯವನ್ನು ಕಾಡುತ್ತಿರುವ ಸಮಸ್ಯೆಗಳನ್ನು ಅವರು ಆರೋಪಿಸಿದರು ಮತ್ತು ಡಿಸೆಂಬರ್ 2014 ರಲ್ಲಿ ನಿಧನರಾದ ಸಿಬಿಐ ವಿಶೇಷ ನ್ಯಾಯಾಧೀಶರಾಗಿದ್ದ ಬಿ.ಎಚ್. ಲೋಯಾ ಅವರ ಸಾವಿನ ಪ್ರಕರಣವನ್ನು ಹಂಚಿಕೆ ಮಾಡುವ ವಿಷಯದಲ್ಲಿ ಮುಖ್ಯ ನ್ಯಾಯಮೂರ್ತಿ ಅರುಣ್ ಮಿಶ್ರಾ ಅವರ ನಿರ್ಧಾರಗಳ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಅಸಮಾದಾನ ವ್ಯಕ್ತಪಡಿಸಿದರು. ನ್ಯಾಯಮೂರ್ತಿ ಲೋಯಾ ಅವರು 2004 ರ ಸೊಹ್ರಾಬುದ್ದೀನ್ ಶೇಖ್ ಪ್ರಕರಣದ ವಿಚಾರಣೆ ನಡೆಸುತ್ತಿದ್ದರು. ಈ ಪ್ರಕರಣದಲ್ಲಿ ಬಿಜೆಪಿ ಮುಖ್ಯಸ್ಥ ಅಮಿತ್ ಶಾ ಹೆಸರಿಸಲಾಗಿದೆ.

ವಿಷಯ ರಫೆಲ್ ಬಿಟ್ಟು ಬೇರೆ ಕಡೆ ತಿರುಗುತ್ತಿದೆ ಎನಿಸುತ್ತಿದೆಯಲ್ಲವೇ? ಕೇಂದ್ರದ ಬಿಜೆಪಿ ಆಡಳಿತ ನ್ಯಾಯಂಗವನ್ನೂ ಹೇಗೆಲ್ಲಾ ತನ್ನ ಅನುಕೂಲಕ್ಕೆ ತಕ್ಕಂತೆ ಬಳಕೆ ಮಾಡಿಕೊಳ್ಳುತ್ತಿದೆ, ನ್ಯಾಯಾಂಗದ ಮೇಲೆ ಹಿಡಿತ ಸಾಧಿಸಲು ಹೇಗೆಲ್ಲಾ ತಂತ್ರ, ಕುತಂತ್ರಗಳನ್ನು ಮಾಡುತ್ತದೆ ಎಂಬುದನ್ನು ಅರಿಯಬೇಕಾದರೆ, ಈ ವಿಷಯಗಳನ್ನು ಪ್ರಸ್ತಾಪಿಸಲೇ ಬೇಕಿದೆ.

ಅನನುಭವಿ ರಿಲಯನ್ಸ್ ಪಾಲುದಾರರಾಗಿ

ಮಾರ್ಚ್ 2015 ರಲ್ಲಿ, ಅನನುಭವಿ ರಿಲಯನ್ಸ್ ಅನ್ನು ಇನ್ನೂ ಸಹಿ ಮಾಡದ ರಫೇಲ್ ಒಪ್ಪಂದದಲ್ಲಿ ಫ್ರಾನ್ಸ್ ದೇಶದ ಡಸಾಲ್ಟ್‌ನ ಹೊಸ ಪ್ರಮುಖ ಭಾರತೀಯ ಪಾಲುದಾರರಾಗಿ ರಹಸ್ಯವಾಗಿ ಗೊತ್ತುಪಡಿಸಲಾಯಿತು. ಏರೋ ರಚನೆಗಳು, ಎಲೆಕ್ಟ್ರಾನಿಕ್ಸ್ ಮತ್ತು ಎಂಜಿನ್ ಘಟಕಗಳ ಮೇಲೆ ಕೇಂದ್ರೀಕರಿಸಲು ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಉತ್ತೇಜಿಸಲು ಡಸಾಲ್ಟ್ ರಿಲಯನ್ಸ್ ಏರೋಸ್ಪೇಸ್ ಲಿಮಿಟೆಡ್ (DRAL) ಹೆಸರಿನ 51:49 ಜಂಟಿ ಉದ್ಯಮವನ್ನು ರಚಿಸುವುದಾಗಿ ಘೋಷಿಸಿತು.

ಇದಕ್ಕೂ ಹಿಂದೆ ಈ ಪಾತ್ರದಲ್ಲಿ ಭಾರತೀಯ ಸರ್ಕಾರಿ ಸ್ವಾಮ್ಯದ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (HAL) ನೇಮಕಾತಿಯನ್ನು ರದ್ದುಗೊಳಿಸಿತ್ತು.

ಎಚ್.ಎ.ಎಲ್. ಒಪ್ಪಂದ ರದ್ದು

ಒಂದು ತಿಂಗಳ ನಂತರ, ಏಪ್ರಿಲ್ 2015 ರಲ್ಲಿ, ಮೋದಿ ಅವರು ಅನಿಲ್ ಅಂಬಾನಿ ಅವರೊಂದಿಗೆ ಫ್ರಾನ್ಸ್‌ಗೆ ಭೇಟಿ ನೀಡುತ್ತಾರೆ. ಅಲ್ಲಿ ನೊಂದಿಗೆ ಡಸಾಲ್ಟ್‌ನಿಂದ 126 ರಫೇಲ್ ಯುದ್ಧ ವಿಮಾನಗಳ ಸಹ-ಉತ್ಪಾದನೆಯ ಹಿಂದಿನ ಎಚ್.ಎ.ಎಲ್. ಒಪ್ಪಂದವನ್ನು ರದ್ದುಗೊಳಿಸಿದ ಪ್ರಧಾನ ಮಂತ್ರಿ, ಡಸಾಲ್ಟ್‌ನಿಂದ 36 ವಿಮಾನಗಳ ಸಂಪೂರ್ಣ ಖರೀದಿಗಾಗಿ ನಿರ್ಧರಿಸುತ್ತಾರೆ.

ಒಪ್ಪಂದದ ಪ್ರಕಟಣೆಯ 14 ದಿನಗಳ ನಂತರ ರಿಲಯನ್ಸ್ ಏರೋಸ್ಟ್ರಕ್ಚರ್ ಅನ್ನು ಸಂಘಟಿಸುತ್ತದೆ. ಮತ್ತು 22 ಫೆಬ್ರವರಿ 2016 ರಂದು ಅದರ ಉತ್ಪಾದನಾ ಪರವಾನಗಿಯನ್ನು ಪಡೆಯುತ್ತದೆ.

ತಮ್ಮ ಮೇಲಿನ ಲೈಂಗಿಕ ಕಿರುಕುಳದ ಆರೋಪವನ್ನು ನಿರಾಕರಿಸಿದ ಗೋಗೊಯ್ ಅವರು, ನ್ಯಾಯಾಂಗದ ವ್ಯವಸ್ಥೆ ಈ ಹಿಂದೆಂದೂ ಕಾಣದ ರೀತಿಯಲ್ಲಿ ಅಪಾಯದಲ್ಲಿದೆ ಎನ್ನುತ್ತಾರೆ. 20 ವರ್ಷಗಳಿಂದ ನ್ಯಾಯಾಧೀಶರಾಗಿ ಕೆಲಸ ಮಾಡುತ್ತಿದ್ದು, ನನ್ನ ಬ್ಯಾಂಕ್ ಬ್ಯಾಲೆನ್ಸ್ ಕೇವಲ 6.80 ಲಕ್ಷ ಇದೆ. ನನ್ನ ಮೇಲೆ ಭ್ರಷ್ಟಾಚಾರ ಆರೋಪ ಹೊರಿಸಲಾಗದೇ ಈ ರೀತಿಯ ಕೀಳು ಆರೋಪ ಹೊರಿಸಿ ತೇಜೋವಧೆಗೆ ಮುಂದಾಗಿದ್ದಾರೆ. ಈ ಪ್ರಕರಣದ ಹಿಂದೆ ದೊಡ್ಡ ಷಡ್ಯಂತ್ರ ಇದ್ದಂತಿದೆ, ಮುಖ್ಯ ನ್ಯಾಯಮೂರ್ತಿಗಳ ಕಚೇರಿಯನ್ನು ಸ್ತಬ್ದಗೊಳಿಸುವ ಉದ್ದೇಶ ಇದೆ ಎಂದು ಗಂಭೀರ ಆರೋಪ ಮಾಡುತ್ತಾರೆ.

ಸೆಪ್ಟೆಂಬರ್ 2016: ಭಾರತ ಮತ್ತು ಫ್ರಾನ್ಸ್ ಭದ್ರತೆಯ ಮೇಲಿನ ಭಾರತದ ಕ್ಯಾಬಿನೆಟ್ ಸಮಿತಿಯ ಅನುಮತಿಯ ನಂತರ 36 ಯುದ್ದ ವಿಮಾನಗಳನ್ನು ಖರೀದಿಸಲು ಅಂತರ-ಸರ್ಕಾರಿ ಒಪ್ಪಂದಕ್ಕೆ (ಖಉಂ) ಸಹಿ ಹಾಕಿದವು. ಎಚ್.ಎ.ಎಲ್. ಜೊತೆಗಿನ ಒಪ್ಪಂದದಲ್ಲಿ ಒಂದು ವಿಮಾನಕ್ಕೆ ರೂ.715 ಕೋಟಿ. ಫ್ರೆಂಚ್ ಕಂಪನಿಯ ಜೊತೆಗಿನ ಒಪ್ಪಂದದಲ್ಲಿ ಒಂದು ವಿಮಾನಕ್ಕೆ ರೂ. 1,600 ಕೋಟಿ.

ಅವಿಶ್ವಾಸ ನಿರ್ಣಯ

20 ಜುಲೈ 2018 ರಂದು ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಅವಿಶ್ವಾಸ ನಿರ್ಣಯವನ್ನು ತೆಗೆದುಕೊಳ್ಳಲಾಯಿತು. ಚರ್ಚೆಯ ಸಂದರ್ಭದಲ್ಲಿ, ಗೌಪ್ಯತೆಯ ಒಪ್ಪಂದವನ್ನು ಉಲ್ಲೇಖಿಸಿದ ರಫೇಲ್ ಸ್ವಾಧೀನದ ವೆಚ್ಚದ ವಿವರಗಳನ್ನು ನೀಡಲು ನಿರಾಕರಿಸಿದ ಸರ್ಕಾರ, ವಿರೋಧ ಪಕ್ಷಗಳ ಆರೋಪಗಳನ್ನು ನಿರಾಕರಿಸಿತು.

22 ಸೆಪ್ಟೆಂಬರ್ 2018: "ಜಂಟಿ ಸಂಸದೀಯ ಸಮಿತಿಯನ್ನು ವಿಳಂಬ ಮಾಡದೆ ರಚಿಸಬೇಕು" ಸಿಪಿಎಂ ಸೇರಿದಂತೆ ಪ್ರಮುಖ ವಿರೋಧ ಪಕ್ಷಗಳಿಂದ ಒತ್ತಾಯಿಸಿದವು.

ಮೋದಿ ಸರ್ಕಾರದ ಒತ್ತಾಯದ ಹಿನ್ನಲೆಯಲ್ಲಿ ಅಂಬಾನಿಯನ್ನು ರಫೇಲ್‌ನ ಪಾಲುದಾರನಾಗಿ ಒಪ್ಪಂದಕ್ಕೆ ತರಲಾಯಿತು ಎಂದು ಮಾಜಿ ಫ್ರೆಂಚ್ ಅಧ್ಯಕ್ಷ ಫ್ರಾಂಕೋಯಿಸ್ ಹೊಲಾಂಡ್ 2018 ರ ಸಂದರ್ಶನವೊಂದರಲ್ಲಿ ಬಹಿರಂಗಪಡಿಸಿದರು. ಡಸಾಲ್ಟ್ ಏವಿಯೇಷನ್ ಮತ್ತು ರಿಲಯನ್ಸ್ ಇದನ್ನು ಅಲ್ಲಗಳೆದವು. ಫ್ರೆಂಚ್ ಕಂಪನಿ ತೆಗೆದುಕೊಂಡಿರುವ 'ವಾಣಿಜ್ಯ ನಿರ್ಧಾರ'ದಲ್ಲಿ ತನಗೆ ಹೇಳಲು ಏನೂ ಇಲ್ಲ ಎಂದು ಭಾರತ ಸರ್ಕಾರ ಹೇಳಿತು. ಸುಪ್ರೀಂ ಕೋರ್ಟ್ ತನಿಖೆಗೆ ಆದೇಶಿಸಲು ನಿರಾಕರಿಸಿತು. ಆದರೆ ಒಪ್ಪಂದವು ಫ್ರಾನ್ಸ್‌ನಲ್ಲಿ ಕ್ರಿಮಿನಲ್ ತನಿಖೆಯ ವಿಷಯವಾಗಿದೆ.

ರಂಜನ್ ಗೋಗೊಯ್ ಸಿಜೆಐ ಆಗಿ ನೇಮಕ

3 ಅಕ್ಟೋಬರ್, 2018 ರಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ರಂಜನ್ ಗೋಗೊಯ್ ನೇಮಕಗೊಂಡರು.



ಡಿಸೆಂಬರ್ 14, 2018 ರಂದು, ಮುಖ್ಯ ನ್ಯಾಯಮೂರ್ತಿ ರಂಜನ್ ಗೊಗೊಯ್ ನೇತೃತ್ವದ ತ್ರಿಸದಸ್ಯ ಪೀಠವು, ಭಾರತ ಮತ್ತು ಫ್ರಾನ್ಸ್ ನಡುವಿನ 36 ರಫೇಲ್ ಯುದ್ಧ ವಿಮಾನಗಳ ಖರೀದಿ ಒಪ್ಪಂದದ ವಿರುದ್ಧದ ಎಲ್ಲಾ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು (ಪಿಐಎಲ್) ವಜಾಗೊಳಿಸಿತು. ಯಾವುದೇ ವಾಣಿಜ್ಯ ಒಲವು ಮತ್ತು ಸಂದರ್ಭವನ್ನು ಹೊಂದಿಲ್ಲ ಎಂದು ತೀರ್ಪಿನಲ್ಲಿ ಹೇಳಿತು. ಎಲ್ಲಾ ಮೂರು ವಿವಾದಾತ್ಮಕ ವಿಷಯಗಳ-ನಿರ್ಣಯ ಪ್ರಕ್ರಿಯೆ, ತುಲನಾತ್ಮಕ ಬೆಲೆ ಮತ್ತು ಭಾರತೀಯ ಆಫ್‌ಸೆಟ್ ಪಾಲುದಾರರ (ಐಒಪಿ) ಆಯ್ಕೆಯ ಕುರಿತು ಒಪ್ಪಂದಕ್ಕೆ ಕ್ಲೀನ್ ಚಿಟ್ ನೀಡಿತು. ಭಾರತ ಸರ್ಕಾರವು 36 ರಕ್ಷಣಾ ವಿಮಾನಗಳನ್ನು ಖರೀದಿಸುವ ಸೂಕ್ಷ್ಮ ವಿಷಯದ ಬಗ್ಗೆ ಈ ನ್ಯಾಯಾಲಯದ ಯಾವುದೇ ಹಸ್ತಕ್ಷೇಪಕ್ಕೆ ನಮಗೆ ಯಾವುದೇ ಕಾರಣವಿಲ್ಲ ಎಂದಿತು. ಈ ತೀರ್ಪಿನಲ್ಲಿ ಸರ್ಕಾರದ ಹೇಳಿಕೆಗಳನ್ನು ತಪ್ಪಾಗಿ ಅಥವಾ ಉದ್ದೇಶಪೂರ್ವಕವಾಗಿ ಅರ್ಥೈಸಿಕೊಂಡ ಕೆಲವು ಅಂಶಗಳೂ ಇದ್ದವು.

15 ಡಿಸೆಂಬರ್ 2018 ರಂದು, ಕೇಂದ್ರ ರಕ್ಷಣಾ ಸಚಿವಾಲಯವು ಪತ್ರಿಕಾಗೋಷ್ಠಿಯಲ್ಲಿ ಸುಪ್ರೀಂ ಕೋರ್ಟ್ ಒಪ್ಪಂದದ ಕುರಿತು ಸರ್ಕಾರದ

ಪುಟ 14 ಕ್ಕೆ

"ಐತಿಹಾಸಿಕ ಮಸೂದೆ ಒಂದೆಡೆ-ಲೈಂಗಿಕ ಕಿರುಕುಳದ ಆರೋಪಿಗೆ ಸಂರಕ್ಷಣೆ ಮತ್ತೊಂದೆಡೆ"

ಇದು ಅಮೃತ ಕಾಲ

ಒಂದು ಕಡೆ ಸರ್ಕಾರವು ಮಹಿಳೆಯರಿಗೆ ಗೌರವ ನೀಡಲು ಶಾಸನ ಸಭೆಗಳಲ್ಲಿ 33ಶೇ. ಮೀಸಲಾತಿಯ ಮಸೂದೆಯನ್ನು ತಂದಿದೆ, ಇನ್ನೊಂದೆಡೆಯಲ್ಲಿ ಲೈಂಗಿಕ ಶೋಷಣೆಯ ಆರೋಪಿ ಬ್ರಿಜ್‌ಭೂಷಣ್ ಸಿಂಗ್ ರಂತಹ ವ್ಯಕ್ತಿಗೆ ಸಂರಕ್ಷಣೆ ನೀಡುತ್ತದೆ. ಇದು ಹೇಗೆ ಸಾಧ್ಯ? ಈ ಪ್ರಶ್ನೆಯನ್ನು ಕೇಳಿರುವವರು ಕಾಮನ್ವೆಲ್ತ್ ಮತ್ತು ಏಷ್ಯನ್ ಕ್ರೀಡಾಕೂಟಗಳಲ್ಲಿ ಭಾರತಕ್ಕೆ ಮೊತ್ತ ಮೊದಲ ಬಾರಿಗೆ ಚಿನ್ನದ ಪದಕ ತಂದು ಕೊಟ್ಟ ಮಹಿಳಾ ಕುಸ್ತಿಪಟು ವಿನೇಶ್ ಫೋಗಟ್.

ಮಹಿಳಾ ಮೀಸಲಾತಿ ಮಸೂದೆ ತಂದುದಕ್ಕೆ ಕೇಂದ್ರ ಸರ್ಕಾರವನ್ನು ಅಭಿನಂದಿಸುತ್ತಾ ಅವರು ಈ ಪ್ರಶ್ನೆ ಕೇಳಿದ್ದಾರೆ.

"ಸರ್ಕಾರವು ಬ್ರಿಜ್ ಭೂಷಣ್ ಅವರಂತಹ ವ್ಯಕ್ತಿಯನ್ನು ಉಳಿಸುತ್ತಿದೆ ಮಾತ್ರವಲ್ಲದೆ ಅಂತಹ ಮನಸ್ಥಿತಿಯ ಜನರಿಗೆ ಉತ್ತೇಜನ ನೀಡುತ್ತಿದೆ, ಈ ಮಸೂದೆಯನ್ನು ತಂದ ನಂತರ, ಸಂಸತ್ತಿನಲ್ಲಿ ಕುಳಿತುಕೊಳ್ಳುವ 181 ಮಹಿಳಾ ಸಂಸದೆಯರು ಮಹಿಳೆಯರ ಗೌರವಕ್ಕಾಗಿ ಹೋರಾಡುತ್ತಾರೆ ಮತ್ತು ಮಹಿಳೆಯರ ಜತೆ ನಿಲ್ಲುತ್ತಾರೆ ಎಂದು ನಾನು ಭಾವಿಸುತ್ತೇನೆ " ಎಂದು ಟ್ವೀಟ್‌ನಲ್ಲಿ ಆಶಿಸಿದ್ದಾರೆ ಎಂದು ವರದಿಯಾಗಿದೆ.

ಇದರ ಜೊತೆಗೇ ಬಂದಿದ್ದ ಇನ್ನೊಂದು ಸುದ್ದಿಯೆಂದರೆ, ಹೊಸ ಸಂಸತ್ ಭವನದಲ್ಲಿ ನಡೆದ ಮೊದಲ ಅಧಿವೇಶನದಲ್ಲಿ ಈ ಮೊದಲ ಮಸೂದೆಯ ಮಂಡನೆ-ಚರ್ಚೆಯ ವೇಳೆ ಲೈಂಗಿಕ ಶೋಷಣೆಯ ಈ ಆರೋಪಿಯೂ ಹಾಜರಿದ್ದರಂತೆ. ಚರ್ಚೆಯ ವೇಳೆಯಲ್ಲಿ ಪ್ರತಿಪಕ್ಷಗಳ ಸದಸ್ಯರು ಈ ಸಂಗತಿಯತ್ತ ಗಮನವನ್ನೂ ಸೆಳೆದಿರುವುದಾಗಿ ವರದಿಯಾಗಿದೆ.

ಈ ಕಟ್ಟಡದ ಉದ್ಘಾಟನೆಯ ವೇಳೆಯಲ್ಲೂ, ಅತ್ತ ಜಂತರ್ ಮಂತರ್‌ನಲ್ಲಿ ಈತನ ಮೇಲಿನ ಲೈಂಗಿಕ ಕಿರುಕುಳಗಳ ದೂರುಗಳ ಮೇಲೆ ವಿಚಾರಣೆ ನಡೆಸಬೇಕು ಎಂದು ಒತ್ತಾಯಿಸಿ ಧರಣಿ ಕೂತಿದ್ದ, ಅದನ್ನು ಆಗ್ರಹಿಸಲು ಸಂಸದ್ ಭವನದತ್ತ ಹೊರಟಿದ್ದ ವಿನೇಶ್ ಫೋಗಟ್, ಸಾಕ್ಷಿ ಮಲಿಕ್, ಭಜರಂಗ್ ಪುನಿಯ ಮತ್ತಿತರರನ್ನು ದಿಲ್ಲಿ ಪೋಲಿಸ್ ಬೀದಿಗಳಲ್ಲಿ ಥಳಿಸುತ್ತಿದ್ದಾಗ, ಇದೇ ಬ್ರಿಜ್‌ಭೂಷಣ್ ಸಿಂಗ್ ಈ ಹೊಸ ಕಟ್ಟಡದ ಮುಂದೆ ಆತ್ಮವಿಶ್ವಾಸದಿಂದ ನಿಂತಿದ್ದ ಫೋಟೋಗಳು ಮಾಧ್ಯಮಗಳಲ್ಲಿ ಬಂದಿದ್ದವು ಎಂಬುದನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು.

"ಅವಕಾಶ ಸಿಕ್ಕಾಗಲೆಲ್ಲಾ ಲೈಂಗಿಕ ಕಿರುಕುಳ"

ಅಲ್ಲದೆ, ಇತ್ತೀಚಿನ ಸುದ್ದಿಯೆಂದರೆ ಅದೇ ದಿಲ್ಲಿ ಪೋಲೀಸರು, ಈಗ ನ್ಯಾಯಾಲಯದ ಎದುರು ಈ ವ್ಯಕ್ತಿ ಅವಕಾಶ ಸಿಕ್ಕಾಗಲೆಲ್ಲಾ ಮಹಿಳಾ ಕುಸ್ತಿಪಟುಗಳ ಮಾನಾಪಹರಣ ಮಾಡುತ್ತಿದ್ದರು ಮತ್ತು ತಾನೇನು ಮಾಡುತ್ತಿದ್ದೇನೆ ಎಂದು ಗೊತ್ತಿದ್ದೇ ಮಾಡುತ್ತಿದ್ದರು ಎಂದು ಸೆಪ್ಟಂಬರ್ 23ರಂದು ಸ್ಥಳೀಯ ನ್ಯಾಯಾಲಯಕ್ಕೆ ತಿಳಿಸಿದ್ದಾರೆ ಎಂದು ವರದಿಯಾಗಿದೆ. ಆತನ ವಿರುದ್ಧ ಮೂರು ತೆರನ ಸಾಕ್ಷ್ಯಗಳಿದ್ದು ಆತನ ವಿರುದ್ಧ ಆರೋಪ ಪತ್ರ ಹಾಕಲು ಇದು ಸಾಕಷ್ಟಾಗುತ್ತದೆ ಎಂದು ದಿಲ್ಲಿ ಪೋಲೀಸನ್ನು ಪ್ರತಿನಿಧಿಸುವ ಅಡಿಷನಲ್ ಪಬ್ಲಿಕ್ ಪ್ರಾಸಿಕ್ಯೂಟರ್ ತಿಳಿಸಿದ್ದಾರೆ. ಒಂದು ಲಿಖಿತ ದೂರು ಮತ್ತು ಸಾಕ್ಷಿಗಳ ಪೋಲೀಸ್ ಪರೀಕ್ಷಣೆಯ ವೇಳೆಯಲ್ಲಿ ಹಾಗೂ ಮ್ಯಾಜಿಸ್ಟ್ರೇಟರ ಮುಂದೆ ದಾಖಲಿಸಲಾದ ಎರಡು ಹೇಳಿಕೆಗಳಿವೆ.

"ಆರೋಪಿಯ ಕಡೆಯಿಂದ ಸ್ಪಷ್ಟವಾದ ಉದ್ದೇಶವಿದ್ದು, ಎಲ್ಲಾ ಘಟನೆಗಳು ಪರಸ್ಪರ ಸಂಬಂಧ ಹೊಂದಿವೆ" ಎಂದು ಈಗ ಪ್ರತಿಪಾದಿಸಿರುವ ದಿಲ್ಲಿ ಪೋಲೀಸ್ ಕಝಾಕಿಸ್ತಾನ್, ಮಂಗೋಲಿಯಾ, ಬಳ್ಳಾರಿ ಮತ್ತು ನವದೆಹಲಿಯಲ್ಲಿ ನಡೆದ ಘಟನೆಗಳನ್ನು ಪೊಲೀಸರು ಸಾಕ್ಷ್ಯವಾಗಿ ಉಲ್ಲೇಖಿಸಿದ್ದಾರೆ. ಹೆಚ್ಚುವರಿ ಮುಖ್ಯ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ನಡೆದ ವಿಚಾರಣೆ ವೇಳೆ ದಿಲ್ಲಿ ಪೊಲೀಸರು ಈಗ ಈ ಹೇಳಿಕೆ ನೀಡುತ್ತಿದ್ದಾರೆ.

ದೂರುದಾರರು ಹೇಳಿರುವ ಕೆಲವು ಘಟನೆಗಳು ದಿಲ್ಲಿಯ ಹೊರಗೆ ನಡೆದಿರುವುದರಿಂದ ಇದರ ವಿಚಾರಣೆ ಪ್ರಸಕ್ತ ನ್ಯಾಯಾಲಯದ ವ್ಯಾಪ್ತಿಗೆ ಮೀರಿದ್ದು ಎನ್ನುತ್ತ ಆರೋಪಿಯ ವಕೀಲರು ವಾದಿಸುವಂತೆ ವಿಚಾರಣೆಗೆ ಮಂಜೂರಾತಿ ಪಡೆಯಬೇಕಾಗಿಲ್ಲ ಎಂದು ಪಬ್ಲಿಕ್ ಪ್ರಾಸಿಕ್ಯೂಟರ್ ಹೇಳಿದರು. ಆರೋಪಿಯ ಮೇಲೆ ಲೈಂಗಿಕ ಕಿರುಕುಳ ಮತ್ತು ಇತರ ರೀತಿಯ ಕಿರುಕುಳದ ಸೇರಿದಂತೆ ಒಟ್ಟು 15 ಘಟನೆಗಳ ಬಗ್ಗೆ ದೂರುಗಳಿವೆ.

ಒಲಿಂಪಿಕ್ ಪದಕ ವಿಜೇತರಾದ ಸಾಕ್ಷಿ ಮಲಿಕ್, ಬಜರಂಗ್ ಪುನಿಯಾ ಮತ್ತು ವಿನೇಶ್ ಫೋಗಟ್ ಸೇರಿದಂತೆ ಭಾರತದ ಅಗ್ರ ಕುಸ್ತಿಪಟುಗಳು ಜನವರಿಯಲ್ಲಿ ಬ್ರಿಜ್ ಭೂಷಣ್ ವಿರುದ್ಧ ಮೊದಲು ಪ್ರತಿಭಟನೆಯನ್ನು ಪ್ರಾರಂಭಿಸಿದ್ದರು.

ಆರೋಪಗಳ ತನಿಖೆಗಾಗಿ ರಚಿಸಲಾಗಿದ್ದ ಮೇಲ್ವಿಚಾರಣಾ ಸಮಿತಿಯು ಬ್ರಿಜ್ ಭೂಷಣ್ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದ ಹಿನ್ನೆಲೆಯಲ್ಲಿ, ಕ್ರೀಡಾಪಟುಗಳು ಏಪ್ರಿಲ್‌ನಲ್ಲಿ ಮತ್ತೆ ಪ್ರತಿಭಟನೆ ಪ್ರಾರಂಭಿಸಿದ್ದರು. ಈ ವೇಳೆ ಮಧ್ಯಪ್ರವೇಶಿಸಿದ ಸುಪ್ರೀಂ ಕೋರ್ಟ್, ಪ್ರಕರಣದ ಕುರಿತು ಎಫ್‌ಐಆರ್ ದಾಖಲಿಸುವಂತೆ ದಿಲ್ಲಿ ಪೊಲೀಸ್‌ಗೆ ನಿರ್ದೇಶನ ನೀಡಿದ ನಂತರ ಬ್ರಿಜ್ ಭೂಷಣ್ ವಿರುದ್ಧ ಪ್ರಕರಣ ದಾಖಲಾಗಿತ್ತು.

ಜೂನ್ 15 ರಂದು ಬ್ರಿಜ್ ಭೂಷಣ್ ವಿರುದ್ಧ 1,000 ಪುಟಗಳ ಆರೋಪ ಪಟ್ಟಿ ಸಲ್ಲಿಸಲಾಗಿತ್ತು. ಆದರೆ, ಅಪ್ರಾಪ್ತ ವಯಸ್ಕ ಕುಸ್ತಿಪಟುವಿನ ಮೇಲೆ ಬ್ರಿಜ್ ಭೂಷಣ್ ಮಾಡಿದ್ದ ಲೈಂಗಿಕ ಹಲ್ಲೆಯ ಆರೋಪವನ್ನು ಕೈಬಿಡುವಂತೆ ಪೊಲೀಸರು ಸಲಹೆ ನೀಡಿದ್ದರು, ಏಕೆಂದರೆ ಒಂದು ವೇಳೆ ಆ ಪ್ರಕರಣ ದಾಖಲಾಗಿದ್ದರೆ, ಮಕ್ಕಳ ಸಂರಕ್ಷಣಾ ಕಾಯ್ದೆಯಡಿಯಲ್ಲಿ ಆತನ ಬಂಧನ ಮಾಡಲೇಬೇಕಿತ್ತು ಎಂಬುದನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು.

'ನನ್ನ ಎಂಪಿ ಟಿಕೆಟ್ ಕತ್ತರಿಸಲು ಯಾರಿಂದ ಸಾಧ್ಯ?'

ಈ ನಡುವೆ, ಮಹಿಳಾ ಮೀಸಲಾತಿ ಖಂಡಿತವಾಗಿಯೂ ಇರದ ಮುಂದಿನ ಲೋಕಸಭಾ ಚುನಾವಣೆಯಲ್ಲಿ, ತನ್ನ ಈ 'ಚಾರಿತ್ರ್ಯ'ದಿಂದಾಗಿ ಟಿಕೆಟ್ ನಿರಾಕರಿಸಲಾಗುತ್ತದೆ ಎನ್ನುವ ಧೈರ್ಯ ಯಾರಿಗಿದೆ ಎಂದೂ ಈ ವ್ಯಕ್ತಿ ಸವಾಲು ಹಾಕಿದ್ದಾರಂತೆ!

"ಮುಂಬರುವ ಲೋಕಸಭಾ ಚುನಾವಣೆಯಲ್ಲಿ ನನ್ನ ಟಿಕೆಟ್ ರದ್ದು ಮಾಡುವವರು ಯಾರಿದ್ದಾರೆ?" ಎಂದು ಆರು ಬಾರಿ ಸಂಸದರಾಗಿರುವ ಈತ ಉತ್ತರ ಪ್ರದೇಶದ ಬಾರಾಬಂಕಿಯಲ್ಲಿ ಒಂದು ಕ್ರೀಡಾ ಉದ್ಘಾಟನೆಯ ಸಂದರ್ಭದಲ್ಲಿ ಕೇಳಿದ್ದಾರೆ ಎಂದು ವರದಿಯಾಗಿದೆ.

ಈ ಕಾರ್ಯಕ್ರಮದ ನಂತರ, ಮುಂಬರುವ ಲೋಕಸಭೆ ಚುನಾವಣೆಯಲ್ಲಿ ನಿಮಗೆ ಟಿಕೆಟ್ ಸಿಗುತ್ತದೆಯೆ ಎಂಬ ಪತ್ರಕರ್ತರ ಪ್ರಶ್ನೆಗೆ ಲೈಂಗಿಕ ಕಿರುಕುಳದ ಈ ಆರೋಪಿ ಆತ್ಮವಿಶ್ವಾಸದಿಂದ ಉತ್ತರಿಸಿದರಂತೆ : "ಕೌನ್ ಕಾಟ್ ರಹಾ ಹೈ ಉಸ್ಕಾ ನಾಮ್ ಬತಾವೋ? ಕಾಟೋಗೇ ಆಪ್? ಕಾಟೋಗೆ? (ಟಿಕೆಟ್ ಅನ್ನು ಯಾರು ಕತ್ತರಿಸುತ್ತಾರೆ? ಅವರ ಹೆಸರು ಹೇಳಿ. ನೀವು ಕತ್ತರಿಸುತ್ತೀರಾ? ಕತ್ತರಿಸುತ್ತೀರಾ?)" ಎಂದು ಪ್ರಶ್ನೆ ಕೇಳಿದವರನ್ನೇ ಪ್ರಶ್ನಿಸಿದರಂತೆ.



"ಏಕ್ ಅಕೇಲಾ!" (ಒಬ್ಬನೇ ಸಾಕು!) "ಯಾರದು ಕತ್ತರಿಸುವವರು? ನೀವು ನನ್ನ ಟಿಕೆಟ್ ಕತ್ತರಿಸುತ್ತೀರಾ?"
(ಕೃಪೆ: ಸತೀಶ ಆಚಾರ್ಯ, ಮೊಲಿಟಿಕ್ಸ್.ಇನ್)

ಈ ಕುರಿತ ವಿಡಿಯೋವನ್ನು ಹಂಚಿಕೊಂಡ ದೆಹಲಿಯ ಮಹಿಳಾ ಆಯೋಗದ ಅಧ್ಯಕ್ಷೆ ಸ್ವಾತಿ ಮಲಿವಾಲ್ "ಬ್ರಿಜ್ ಭೂಷಣ್ ಸಿಂಗ್ ಅವರ ಅಧಿಕಾರದ ದುರಹಂಕಾರ ನೋಡಿದರೆ, ಯಾರೋ ದೊಡ್ಡವರ ಬೆಂಬಲವೇ ಅವರಿಗೆ ಇರಬೇಕು" ಎಂದು ಟಿಪ್ಪಣಿ ಮಾಡಿದ್ದಾರೆ.

ಬೆಂಬಲವೋ, ಭಯವೋ, ಅನಿವಾರ್ಯತೆಯೋ-ಕಾದು ನೋಡಬೇಕು.

ಸರ್ಕಾರದ ಮೌನದಿಂದಾಗಿ ನ್ಯಾಯಾಂಗವು ಹೊಸ ಪ್ರತಿಭೆಗಳನ್ನು ಕಳೆದುಕೊಳ್ಳುತ್ತಿದೆ-ಸುಪ್ರೀಂ ಕೋರ್ಟ್‌ನ ಕಟು ಟಿಪ್ಪಣಿ

ಅಮೃತ ಕಾಲದ ಬಗ್ಗೆ ಎಡೆಬಿಡದೆ ಬೆನ್ನು ತಟ್ಟಿಕೊಳ್ಳುತ್ತಿರುವ ಉನ್ನತ ಮುಖಂಡರುಗಳ ದಿವ್ಯಮೌನದ ಪಟ್ಟಿಗೆ ಇನ್ನೊಂದು ಸೇರ್ಪಡೆ ಈಗ ಬೆಳಕಿಗೆ ಬಂದಿದೆ.

ಹೈಕೋರ್ಟ್‌ಗಳಲ್ಲಿ ನ್ಯಾಯಾಧೀಶರುಗಳ ಹುದ್ದೆಗೆ ಸುಪ್ರಿಂ ಕೋರ್ಟ್ ಪಟ್ಟಿ ಮಾಡಿದ ಅಭ್ಯರ್ಥಿಗಳ ಬಗ್ಗೆ ಸರ್ಕಾರ ತಿಂಗಳಾನುಗಟ್ಟಲೆ ಯಾವುದೇ ನಿರ್ಧಾರ ಕೈಗೊಳ್ಳದಿರುವುದರಿಂದ ನ್ಯಾಯಾಂಗವು ಹಿಂದೆಂದೂ ಕಾಣದ ರೀತಿಯಲ್ಲಿ ಹೊಸ ಪ್ರತಿಭೆಗಳನ್ನು ಕಳೆದುಕೊಳ್ಳುತ್ತಿದೆ ಎಂದು ಸುಪ್ರಿಂ ಕೋರ್ಟ್ ಹೇಳಿರುವುದಾಗಿ ವರದಿಯಾಗಿದೆ.

ಸರಕಾರ ಯಾವ ಕಾರಣಕ್ಕೋ ಗೊತ್ತಿಲ್ಲ, ಹೆಸರುಗಳನ್ನು ವಿಂಗಡಿಸಿ ಒಂದು ಹೆಸರಿನ ಬದಲು ಮತ್ತೊಂದು ಹೆಸರನ್ನು ಬಯಸುತ್ತದೆ, ಇದಕ್ಕೆ ನ್ಯಾಯಪೀಠಕ್ಕೆ ಸೇರಲು ತಮ್ಮ ಕಾನೂನು ಪ್ರಾಕ್ಟೀಸನ್ನು ತ್ಯಾಗ ಮಾಡಲು ಸಿದ್ದರಿರುವ ಅನೇಕ "ಪ್ರತಿಭಾಶಾಲಿ" ಕಾನೂನು ಮನಸ್ಸುಗಳು ಬಲಿಯಾಗುತ್ತವೆ ಎಂದು ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಮತ್ತು ನ್ಯಾಯಮೂರ್ತಿ ಸುಧಾಂಶು ಧುಲಿಯಾ ತಿಳಿಸಿದ್ದಾರೆ.

"ಜನ ಬರಲು ನಿರಾಕರಿಸುತ್ತಿದ್ದಾರೆ. ನಾವು ಪ್ರಯತ್ನಿಸುತ್ತೇವೆ, ಅತ್ಯುತ್ತಮ ಪ್ರತಿಭೆಯನ್ನು ಪಡೆಯಲು ಶ್ರಮಿಸುತ್ತೇವೆ. ವಿಂಗಡಣೆಯಿಂದಾಗಿ ಪೀಠವು ಉತ್ತಮ ಪ್ರತಿಭೆಯನ್ನು ಕಳೆದುಕೊಂಡಿದೆ. ಅವರು ಬೇಡ ಎನ್ನುತ್ತಾರೆ, ಹೆಸರು ಹಿಂತೆಗೆದುಕೊಳ್ಳುತ್ತಾರೆ... "ಎಂದು ನ್ಯಾಯಮೂರ್ತಿ ಕೌಲ್ ಅವರು ಕೇಂದ್ರ ಸರಕಾರದ ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರನ್ನು ಉದ್ದೇಶಿಸಿ ಹೇಳಿದರು.

ಅರ್ಜಿದಾರರ ಪರ ಹಾಜರಾದ ಹಿರಿಯ ವಕೀಲ ಅರವಿಂದ್ ದಾತಾರ್ ಮತ್ತು ವಕೀಲ ಅಮಿತ್ ಪೈ, ಬೆಂಗಳೂರಿನ ವಕೀಲರ ಸಂಘ, "ಕೊಲಿಜಿಯಂಗಳು ಸರ್ಕಾರಕ್ಕೆ ಒದಗಿಸಿದ ಪಟ್ಟಿಯಿಂದ ಕೆಲವು ಹೆಸರುಗಳನ್ನು ವಿಂಗಡಿಸುವುದು ತುಂಬಾ ಮುಜುಗರದ ಸಂಗತಿ" ಎಂದು ಹೇಳಿದರು.

ವಕೀಲ ಪ್ರಶಾಂತ್ ಭೂಷಣ್, ಕೊಲಿಜಿಯಂ ಈ ಪದ್ಧತಿಯನ್ನು ನಿಷೇಧಿಸಿದ್ದರೂ ಸರ್ಕಾರವು ನಿರ್ಭಿಡೆಯಿಂದ ಹೆಸರುಗಳನ್ನು ವಿಂಗಡಿಸುವುದನ್ನು ಮುಂದುವರಿಸಿದೆ. "ಇನ್ನು ಮುಂದೆ ಇಲ್ಲ" ಎಂದು ಕೊಲಿಜಿಯಂ ಹೇಳಿದರೂ ಅದು ಇನ್ನೂ ಮುಂದುವರಿಯುತ್ತಿದೆ" ಎಂದು ಅವರು ಹೇಳಿದರು.

ನ್ಯಾಯಾಲಯವು ಚಾವಟಿಯನ್ನು ಬೀಸಿ ಯಾರನ್ನಾದರೂ ನ್ಯಾಯಾಂಗ ನಿಂದನೆಗೆ ಎಳೆಯಬೇಕಾದ ಸಮಯ ಬಂದಿದೆ. "ಇದು ಹೀಗೇ ಮುಂದುವರೆಯಲು ಸಾಧ್ಯವಿಲ್ಲ," ಎಂದು ಅವರು ಹೇಳಿದರು.

ನವೆಂಬರ್ 2022 ರಿಂದ 10 ತಿಂಗಳಲ್ಲಿ ಹೈಕೋರ್ಟ್ ಕೊಲಿಜಿಯಂಗಳು ನ್ಯಾಯಾಧೀಶರ ಹುದ್ದೆಗೆ ಶಿಫಾರಸು ಮಾಡಿರುವ 70 ಹೆಸರುಗಳ ಬಗ್ಗೆ ಸರಕಾರದ ನಿರ್ಣಯ ಬಂದಿಲ್ಲ ಎಂಬ ಸಂಗತಿಯತ್ತ ನ್ಯಾಯಮೂರ್ತಿ ಕೌಲ್ ಅಟಾರ್ನಿ ಜನರಲರ ಗಮನ ಸೆಳೆದರು.

ಹೈಕೋರ್ಟ್ ನ್ಯಾಯಾಧೀಶರ 70 ಹುದ್ದೆಗಳು ಖಾಲಿ ಇವೆ. ಹೈಕೋರ್ಟ್ ಕೊಲಿಜಿಯಂನ ಶಿಫಾರಸುಗಳನ್ನು ಸ್ವೀಕರಿಸಿದಾಗ, ಕೆಲವು ಮೂಲಭೂತ ಪ್ರಕ್ರಿಯೆಗಳನ್ನು ಮಾಡಬೇಕು ಮತ್ತು ಅದನ್ನು ಸುಪ್ರೀಂ ಕೋರ್ಟ್ ಕೊಲಿಜಿಯಂಗೆ ರವಾನಿಸಬೇಕು. ಅದನ್ನೂ ಸರಕಾರ ಮಾಡಿಲ್ಲ. ಅವರ ಬಗ್ಗೆ ಸರಕಾರದ ದೃಷ್ಟಿಕೋನವು ತಿಳಿದರೆ, ಮುಂದೇನು ಮಾಡಬೇಕು ಎಂದು ಸುಪ್ರೀಂ ಕೋರ್ಟ್ ಕೊಲಿಜಿಯಂ ಯೋಚಿಸಬಹುದು. "ನೀವು ಅದನ್ನು ಮಾಡುತ್ತಿಲ್ಲ ... – ಸರಿಸುಮಾರು ನಾಲ್ಕು ಅಥವಾ ಐದು ತಿಂಗಳುಗಳ ಸಮಯ ಚೌಕಟ್ಟನ್ನು ನಿಗದಿಪಡಿಸಲಾಗಿದೆ "ಎಂದು ಸರ್ವೋಚ್ಚ ನ್ಯಾಯಾಲಯದ ಕೊಲಿಜಿಯಂನ ಸದಸ್ಯರೂ ಆಗಿರುವ ನ್ಯಾಯಮೂರ್ತಿ ಕೌಲ್ ಸರ್ಕಾರದ ಪ್ರತಿನಿಧಿಗಳಿಗೆ ಹೇಳಿದರು.

ಸುಪ್ರೀಂ ಕೋರ್ಟ್ ಕೊಲಿಜಿಯಂ ಶಿಫಾರಸು ಮಾಡಿರುವ 26 ವರ್ಗಾವಣೆಗಳ ಬಗ್ಗೆಯೂ ಸರಕಾರದಿಂದ ಯಾವುದೇ ಮಾತು ಬಂದಿಲ್ಲ. ಎಂದು ಹೇಳಿದರು. ಹೈಕೋರ್ಟ್‌ಗಳಿಗೆ ನೇಮಕಾತಿಗಾಗಿ ಕೊಲಿಜಿಯಂ ಮಾಡಿದ ಒಂಬತ್ತು ಹೊಸ ಶಿಫಾರಸುಗಳ ಮೇಲೆ ಸರ್ಕಾರವು ಕ್ರಮ ಕೈಗೊಂಡಿಲ್ಲ ಅಥವಾ ಕೊಲಿಜಿಯಂಗೆ ಹಿಂತಿರುಗಿಸಿಲ್ಲ.

ವಿವಿಧ ಹೈಕೋರ್ಟ್‌ಗಳಿಗೆ ನೇಮಕಾತಿಗಾಗಿ ಕೊಲಿಜಿಯಂ ಪುನರುಚ್ಚರಿಸಿದ ಇತರ ಏಳು ಹೆಸರುಗಳ ಭವಿಷ್ಯದ ಮೇಲೆ ಅನಿಶ್ಚಿತತೆಯ ಮಂಜು ಆವರಿಸಿದೆ. ವಿಧಿ-ವಿಧಾನಗಳ ಪ್ರಕಾರ ಸರ್ಕಾರವು ಕೊಲಿಜಿಯಂ ಪುನರುಚ್ಚರಿಸಿದ ಹೆಸರುಗಳನ್ನು ಮತ್ತಷ್ಟು ವಿಳಂಬವಿಲ್ಲದೆ ನೇಮಿಸಬೇಕು

ಸರಕಾರದ ಅಟಾರ್ನಿ ಜನರಲ್ ಇವೆಲ್ಲವೂ ಯಾವ ಹಂತದಲ್ಲಿವೆ ಎಂದು ವಿಚಾರಿಸಲು ಒಂದು ವಾರ ಕಾಲಾವಕಾಶ ಕೇಳಿದರು. ನ್ಯಾಯಾಲಯ ಅಕ್ಟೋಬರ್ 9ರ ವರೆಗೆ ಸಮಯ ಕೊಟ್ಟು ಅಷ್ಟರ ಒಳಗೆ ಬಾಕಿ ಉಳಿದಿರುವ ನ್ಯಾಯಾಂಗ ನೇಮಕಾತಿಗಳು ಮತ್ತು ವರ್ಗಾವಣೆಗಳ ಬಗ್ಗೆ ಸರಕಾರ ನಿರ್ಧಾರಕ್ಕೆ ಬರುವಂತೆ ಮಾಡಬೇಕು ಎಂದು ಅವರಿಗೆ ಹೇಳಿದೆ.

"ಈ ಹೆಸರುಗಳಿಗೆ ಏನಾಯಿತು ಎಂದು ನೀವು ನನಗೆ ಹೇಳುವವರೆಗೆ ನಾನು ಪ್ರತಿ 10 ದಿನಗಳಿಗೊಮ್ಮೆ ಈ ಪ್ರಕರಣವನ್ನು ತೆಗೆದುಕೊಳ್ಳುತ್ತೇನೆ ... ಅಟಾರ್ನಿಯವರು ಸಮಯ ಕೇಳಿದ್ದರಿಂದ ನಾನು ಇಂದು ಹೆಚ್ಚು ಹೇಳುತ್ತಿಲ್ಲ. ಆದರೆ ಮುಂದಿನ ಬಾರಿ ನಾನು ಬಹಳಷ್ಟು ಹೇಳುತ್ತೇನೆ" ಎಂದು ನ್ಯಾಯಮೂರ್ತಿ ಕೌಲ್ ಹೇಳಿರುವುದಾಗಿ ವರದಿಯಾಗಿದೆ.

2014ರಲ್ಲಿ ಹೋದಲ್ಲೆಲ್ಲಾ ಹೇಳಿಕೊಂಡ "ಕನಿಷ್ಟ ಸರಕಾರ ಗರಿಷ್ಟ ಆಳ್ವಿಕೆ" ಸದ್ದಿಲ್ಲದೆ ಅಮೃತ ಕಾಲದ ಮೊದಲೇ ಜುಮ್ಲಾ ಆಗಿ ಬಹಳ ಸಮಯವಾದಂತೆ ಕಾಣುತ್ತದೆ.

ರೈತರ ಪ್ರತಿಭಟನೆ ಆಹಾರ ಬೆಲೆಗಳ ನಾಗಾಲೋಟದಿಂದ ದೇಶವನ್ನು ಉಳಿಸಿದೆ

ಆಹಾರ ಧಾನ್ಯಗಳ ಕೊರತೆಗಿಂತ ಹೆಚ್ಚಾಗಿ ಕೊರತೆಯ "ನಿರೀಕ್ಷೆ" ಬೆಲೆಗಳನ್ನು ಏರಿಸುತ್ತಿರುವುದು ಕಂಡು ಬಂದಿದೆ. ಜುಲೈನಲ್ಲಿದ್ದ 11.5%ಕ್ಕೇರಿದ್ದ ಆಹಾರ ಬೆಲೆಯುಬ್ಬರ ಸರ್ಕಾರವು ಅಳವಡಿಸಿಕೊಂಡ ಕೆಲವು ಪೂರೈಕೆ ನಿರ್ವಹಣಾ ಕ್ರಮಗಳಿಂದಾಗಿ 10%ಕ್ಕಾದರೂ ಕೆಳಗಿಳಿಯಲು ಸಾಧ್ಯವಾಗಿರುವುದು ಕಳೆದ ವರ್ಷದ ರೈತರ ಐತಿಹಾಸಿಕ ಹೋರಾಟದಿಂದಾಗಿ. ಮೂರು ಕುಖ್ಯಾತ ಕೃಷಿ ಕಾನೂನುಗಳ ಮೂಲಕ ಜಾರಿಗೆ ತರಲು ಬಯಸಿದ ಕ್ರಮಗಳ ಅಸಾಧಾರಣ ಮೂರ್ಖತನವು ಈಗ ಸ್ಪಷ್ಟವಾಗುತ್ತದೆ. ರೈತರ ಆಂದೋಲನದಿಂದಾಗಿ ಆ ಕ್ರಮಗಳನ್ನು ಹಿಂತೆಗೆದುಕೊಂಡಿರದಿದ್ದರೆ, ನಂತರ ಸಂಗ್ರಹಣೆಯನ್ನು ಖಾಸಗೀಕರಣಗೊಳಿಸಲಾಗುತ್ತಿತ್ತು, ಆಗ ಸರಕಾರದ ಬಳಿ ಹಣದುಬ್ಬರವನ್ನು ಎದುರಿಸಲು ಯಾವುದೇ ಸಾಧನವಿರುತ್ತಿರಲಿಲ್ಲ; ಹಣದುಬ್ಬರ ಖಾಸಗಿ ವಲಯದ ಕೃಪೆಯಿಂದ ಎಗ್ಗಿಲ್ಲದೆ ಮುಂದುವರಿಯುತ್ತಿತ್ತು. ಅದೃಷ್ಟವಶಾತ್ ರೈತರು ದೇಶವನ್ನು ಉಳಿಸಿದರು, ಆಹಾರ ಧಾನ್ಯಗಳ ಸಾರ್ವಜನಿಕ ಸಂಗ್ರಹಣೆಯು ಈಗಲೂ ಚಾಲ್ತಿಯಲ್ಲಿ ಉಳಿದಿದೆ; ಮತ್ತು ಸಾಮೂಹಿಕ ನಿರುದ್ಯೋಗವನ್ನು ಸೃಷ್ಟಿಸದೆ ಹಣದುಬ್ಬರವನ್ನು ಎದುರಿಸುವ ಒಂದು ಅಸ್ತ್ರ ಸರ್ಕಾರದ ಕೈಯಲ್ಲಿ ಇನ್ನೂ ಉಳಿದಿದೆ. **–ಪ್ರಭಾತ್ ಪಟ್ನಾಯಕ್**

ಭಾರತದಲ್ಲಿನ ಪ್ರಸ್ತುತ ಬೆಲೆಗಳ ಏರಿಕೆಯು ಪ್ರಧಾನವಾಗಿ ಆಗುತ್ತಿರುವುದು ಆಹಾರದ ಬೆಲೆಗಳ ಏರಿಕೆಗಳಿಂದ. ಜುಲೈ 2023 ರಲ್ಲಿ ಚಿಲ್ಲರೆ ಹಣದುಬ್ಬರವು (ಹಿಂದಿನ ವರ್ಷದ ಜುಲೈಗೆ ಹೋಲಿಸಿದರೆ) ಶೇಕಡಾ 7.44 ರಷ್ಟಿದ್ದರೆ, ಆಹಾರ ಧಾನ್ಯಗಳು, ತರಕಾರಿಗಳು, ಹಾಲಿನ ಉತ್ಪನ್ನಗಳು ಮತ್ತು ಮುಂತಾದ ಎಲ್ಲಾ ಆಹಾರ ಪದಾರ್ಥಗಳನ್ನು ಒಳಗೊಂಡಿರುವ ಆಹಾರ ಬೆಲೆಯುಬ್ಬರವು ಶೇಕಡಾ 11.5 ರಷ್ಟಿತ್ತು. ಆಹಾರದ ಬೆಲೆಗಳ ಉಬ್ಬರವು ಆಗಸ್ಟ್‌ನಲ್ಲಿ ಸುಮಾರು 10 ಶೆ.ಕ್ಕಿಂತ ಸ್ವಲ್ಪ ಕಡಿಮೆಯಾಯಿತು, ಮುಖ್ಯವಾಗಿ ಟೊಮೆಟೊಗಳಂತಹ ತರಕಾರಿಗಳಿಗೆ ಸಂಬಂಧಿಸಿದಂತೆ ಸರ್ಕಾರವು ಅಳವಡಿಸಿಕೊಂಡ ಕೆಲವು ಪೂರೈಕೆ ನಿರ್ವಹಣಾ ಕ್ರಮಗಳಿಂದಾಗಿ ಮತ್ತು ಒಟ್ಟಾರೆ ಚಿಲ್ಲರೆ ಹಣದುಬ್ಬರ ದರವನ್ನು ಶೇಕಡಾ 6.83 ಕ್ಕೆ ಇಳಿಸಲು ಇದು ಕಾರಣವಾಗಿದೆ; ಆದರೆ ನಿಸ್ಸಂಶಯವಾಗಿ ಆಹಾರ ಬೆಲೆ ಹಣದುಬ್ಬರ, ಮತ್ತು ಅದರೊಂದಿಗೆ ಒಟ್ಟಾರೆ ಚಿಲ್ಲರೆ ಹಣದುಬ್ಬರವು ಗಂಭೀರ ಸಮಸ್ಯೆಯಾಗಿ ಉಳಿದಿದೆ.

ಆಹಾರ ಪದಾರ್ಥಗಳ ಬೆಲೆ ತೀವ್ರವಾಗಿ ಏರುತ್ತಿರುವುದು ಭಾರತದಲ್ಲಿ ಮಾತ್ರವಲ್ಲ. ಇದು ತೃತೀಯ ಜಗತ್ತನ್ನು ಮಾತ್ರವಲ್ಲದೆ ಮುಂದುವರಿದ ಬಂಡವಾಳಶಾಹಿ ರಾಷ್ಟ್ರಗಳಲ್ಲೂ ಕಾಣುತ್ತಿರುವ ಜಾಗತಿಕ ವಿದ್ಯಮಾನವಾಗಿದೆ. ಇದಕ್ಕೆ ಕೊಡುವ ಸಾಮಾನ್ಯ ವಿವರಣೆಯೆಂದರೆ ಉಕ್ರೇನ್ ಯುದ್ಧದಿಂದ ಉಂಟಾದ ಕೊರತೆ. ಆದರೆ ತಾತ್ವಿಕವಾಗಿ ಉಕ್ರೇನ್ ಯುದ್ಧವು ಕೊರತೆಯನ್ನು ಉಂಟುಮಾಡುವ ಮೂಲಕ ಹಣದುಬ್ಬರಕ್ಕೆ ಕಾರಣವಾಗಬಹುದಾದರೂ ಆಹಾರದ ಬೆಲೆಗಳಲ್ಲಿನ ಪ್ರಸ್ತುತ ಏರಿಕೆಯು ನಿಜವಾದ ಕೊರತೆಗಿಂತ ಹೆಚ್ಚಾಗಿ, ಅಂತಹ ಒಂದು ನಿರೀಕ್ಷೆಯ ಫಲಿತಾಂಶವಾಗಿ ಆಗಿರಬಹುದು. ಯಾವುದೇ ನಿಜವಾದ ಕೊರತೆ ಸಂಭವಿಸುವ ಮೊದಲೇ, ಚಿಲ್ಲರೆ ಆಹಾರ ವಲಯದಲ್ಲಿ ಲಾಭಾಂಶದ ಪ್ರಮಾಣ ಹೆಚ್ಚಿದವು ಎಂದು ತೋರಿಸುವುದಕ್ಕೆ ಪ್ರಪಂಚದಾದ್ಯಂತ ಸಾಕಷ್ಟು ಪುರಾವೆಗಳಿವೆ. ಇದು ಕೊರತ ಉಂಟಾಗುತ್ತದೆ ಎಂಬ ನಿರೀಕ್ಷೆಯಲ್ಲಿ ಗುತ್ತೇದಾರಿಗಳು ಬೆಲೆಗಳನ್ನು ಏರಿಸಿದವು ಎಂಬುದನ್ನು ಸೂಚಿಸುತ್ತದೆ.

"ಹಣದುಬ್ಬರದ ನಿರೀಕ್ಷೆಗಳು"

ಭಾರತದಲ್ಲಿಯೂ ಇದು ನಿಜ. ಇದರಿಂದಾಗಿ ಅನೇಕರು "ಹಣದುಬ್ಬರದ ನಿರೀಕ್ಷೆಗಳು" ಆಟವಾಡುತ್ತಿರುವ ಬಗ್ಗೆ ಮಾತನಾಡುತ್ತಿದ್ದಾರೆ; ನಿರೀಕ್ಷಿತ ಬೆಲೆ ಏರಿಕೆ ನಿಜವಾದ ಬೆಲೆಗಳನ್ನು ಏರಿಸುತ್ತದೆ. ಆದರೆ ನಿಜವಾದ ಕೊರತೆಯಿಲ್ಲದಿದ್ದರೂ, ನಿಜವಾದ ಪೂರೈಕೆಯಲ್ಲಿ ಪರಿಸ್ಥಿತಿಯು ಹೆಚ್ಚೇನೂ ಸಮಾಧಾನಕರವಾಗಿರದ ಪರಿಸ್ಥಿತಿಯಲ್ಲಿ ಮಾತ್ರ ಹಣದುಬ್ಬರದ ನಿರೀಕ್ಷೆಗಳು ಪಾತ್ರವಹಿಸುತ್ತವೆ. ಎಲ್ಲಕ್ಕಿಂತ ಹೆಚ್ಚಾಗಿ, ಬೃಹತ್ ಆಹಾರಧಾನ್ಯದಾಸ್ತಾನುಗಳಿರುವಾಗ, ಹಣದುಬ್ಬರದ ನಿರೀಕ್ಷೆಯಲ್ಲಿ ಪೂರೈಕೆದಾರರು ಬೆಲೆಗಳನ್ನು ಹೆಚ್ಚಿಸುವುದಿಲ್ಲ: ಅಂತಹ ದಾಸ್ತಾನುಗಳನ್ನು ಸರ್ಕಾರವು ಹೊಂದಿದ್ದರೆ, ಯಾವುದೇ ರೀತಿಯಲ್ಲಿ ಬೆಲೆಗಳನ್ನು ಏರಿಸಲು ಆಗದಂತಹ ರೀತಿಯಲ್ಲಿ ಗ್ರಾಹಕರಿಗೆ ಬಿಡುಗಡೆ ಮಾಡಲಾಗುವುದು ಎಂದು ಪೂರೈಕೆದಾರರಿಗೆ ತಿಳಿದಿದೆ. ದಾಸ್ತಾನುಗಳನ್ನು ಖಾಸಗಿ ಮಾರಾಟಗಾರರು ಹೊಂದಿದ್ದರೂ ಸಹ, ಅವರ ಆದ್ಯತೆ ಬೆಲೆಗಳನ್ನು ಏರಿಸುವುದಕ್ಕಿಂತ ಹೆಚ್ಚಾಗಿ, ತಮ್ಮ ದಾಸ್ತಾನುಗಳ ಮಟ್ಟವನ್ನು



ಇಳಿಸುವುದಕ್ಕೇ ಇರುತ್ತದೆ.; ಇಷ್ಟೇ ಅಲ್ಲ, ಕೆಲವು ಪೂರೈಕೆದಾರರು ಬೆಲೆಗಳನ್ನು ಏರಿಸಿದರೂ, ಇತರರು ಈ ಮಾರಾಟಗಾರರಿಂದ ಗ್ರಾಹಕರನ್ನು ದೂರಮಾಡಲು ಮತ್ತು ತಮ್ಮ ದಾಸ್ತಾನುಗಳ ಮಟ್ಟವನ್ನುಳಿಸಲು ಒಂದು ಅವಕಾಶವಾಗಿ ಕಾಣುತ್ತಾರೆ.

ವಿಶ್ವ ಆಹಾರಧಾನ್ಯ ಮಾರುಕಟ್ಟೆಯಲ್ಲಿ ಸ್ವಲ್ಪ ಸಮಯದಿಂದ ಇದೇ ಆಗಿದೆ. 1979–80 ರಿಂದ 1981–82ರ ತ್ರಿವರ್ಷೀಯ (ಅಥವಾ ಸಂಕ್ಷಿಪ್ತವಾಗಿ 1980–82ರ)ಅವಧಿಯಲ್ಲಿ ವಾರ್ಷಿಕ ತಲಾವಾರು ಪ್ರಪಂಚದ ಧಾನ್ಯಗಳ ಉತ್ಪಾದನೆಯು (ತ್ರೈವಾರ್ಷಿಕ ಸರಾಸರಿಯನ್ನು ತ್ರೈವಾರ್ಷಿಕದ ಮಧ್ಯದ ಜನಸಂಖ್ಯೆಯಿಂದ ಭಾಗಿಸಿದಾಗ) 355 ಕೆಜಿ; ಇದು 2000–02 ರ ವೇಳೆಗೆ 343 ಕೆಜಿಗೆ ಕುಸಿಯಿತು. 2016–18 ರ ಅವಧಿಯಲ್ಲಿ ಕೂಡ ಇದು ಕೇವಲ 344 ಕೆಜಿ ಆಗಿತ್ತು. ಇದಲ್ಲದೆ, 2002 ರಿಂದ ಎಥೆನಾಲ್ ಉತ್ಪಾದನೆಗೆ ತಿರುಗಿಸಲಾದ ಧಾನ್ಯಗಳ ಉತ್ಪಾದನೆಯ ಪ್ರಮಾಣ ಹೆಚ್ಚುತ್ತಾ ಬಂದಿದೆ. ಅಂದರೆ ಪ್ರಪಂಚದ ಜನಸಂಖ್ಯೆಗೆ ಸಿರಿಧಾನ್ಯಗಳ ತಲಾ ಸೇವನೆಯ ಲಭ್ಯತೆಯು ಕುಗ್ಗಿರಬೇಕು.

ಕುಗ್ಗುತ್ತಿರುವ ಪೂರೈಕೆ ಮತ್ತು ಕುಗ್ಗಿಸಲಾಗುತ್ತಿರುವ ಬೇಡಿಕೆ

ಈ ಕುಗ್ಗುತ್ತಿರುವ ಲಭ್ಯತೆಯು ಇಲ್ಲಿಯವರೆಗೆ ಯಾವುದೇ ನಿರಂತರ ಮತ್ತು ಗಮನಾರ್ಹ ಹಣದುಬ್ಬರದ ಒತ್ತಡವನ್ನು ಉಂಟು ಮಾಡಿರದಿದ್ದರೆ, ನವ ಉದಾರವಾದಿ ವ್ಯವಸ್ಥೆಯಲ್ಲಿ, ವಿಶೇಷವಾಗಿ ತೃತೀಯ ಜಗತ್ತಿನಲ್ಲಿ ದುಡಿಯುವ ಜನರ ಕೊಳ್ಳುವ ಶಕ್ತಿಯ ಮೇಲೆ ತೀವ್ರವಾಗಿ ಹಿಂಡಲಾಗಿದೆ ಎಂಬುದೇ ಅದಕ್ಕೆ ಕಾರಣ. ಸಂಕ್ಷಿಪ್ತವಾಗಿ ಹೇಳುವುದಾದರೆ, ದುಡಿಯುವ ಜನರ ಮೇಲೆ ಆದಾಯ ಕಡಿತವನ್ನು ಹೇರಿದ್ದರಿಂದಾಗಿ ಕುಗ್ಗುತ್ತಿರುವ ಲಭ್ಯತೆ ಮತ್ತು ಕುಗ್ಗುತ್ತಿರುವ ಬೇಡಿಕೆಯ ನಡುವೆ ಹೇಗೋ ಸಮತೋಲನವನ್ನು ನಿಭಾಯಿಸಲಾಗಿದೆ. ಈ ಕಾರಣದಿಂದಾಗಿ ನವ ಉದಾರವಾದಿ ಯುಗದಲ್ಲಿ ಬಡತನ ಮತ್ತು ಅಪೌಷ್ಟಿಕತೆಯು ಬಹಳವಾಗಿ ಹೆಚ್ಚಿದ್ದರೂ (ಈ ಸತ್ಯವನ್ನು ಸಾಮಾನ್ಯವಾಗಿ ಬ್ರೆಟನ್ ವುಡ್ಸ್ ಸಂಸ್ಥೆಗಳ ಆಶ್ರಯದಲ್ಲಿ ಹಲವಾರು "ಬಡತನದ ಅಧ್ಯಯನಗಳು" ಮುಚ್ಚಿಡಲು ಪ್ರಯತ್ನಿಸಿದರೂ), ಈ ಅಭಾವವು ಸಾಮಾನ್ಯವಾಗಿ ಹಣದುಬ್ಬರದ ಹಿಂಡಿಕೆಯ ರೂಪವನ್ನು ಪಡೆದಿಲ್ಲ. ಆಹಾರದ ಬೆಲೆಗಳಲ್ಲಿ ಆಗಾಗ ಏರಿಕೆಗಳಾಗಿವೆ, ಆದರೆ ದುಡಿಯುವ ಜನರ ಆದಾಯದಲ್ಲಿ ಕಡಿತವುಂಟು ಮಾಡುವ ಮೂಲಕ ಅವುಗಳನ್ನು "ನಿಯಂತ್ರಿಸಲಾಗಿದೆ", ಇದು ಹಣದುಬ್ಬರವಿರದ ರೀತಿಯಲ್ಲಿ ಬೇಡಿಕೆ ಮತ್ತು ಪೂರೈಕೆಯ ನಡುವಿನ ಸಮತೋಲನವನ್ನು ಹೇಗೋ ಪುನಃಸ್ಥಾಪಿಸುತ್ತದೆ.

ಭಾರತದಲ್ಲಿಯೂ ಇಂತದ್ದೇ ಪರಿಸ್ಥಿತಿ ಇದೆ. 1991 ರಲ್ಲಿ ಆಹಾರಧಾನ್ಯಗಳ ತಲಾ ಲಭ್ಯತೆ ದಿನಕ್ಕೆ 510.1 ಗ್ರಾಂ. ಇದು 2019–20ರಲ್ಲಿ ದಿನಕ್ಕೆ 501.8 ಗ್ರಾಂಗೆ ಸ್ವಲ್ಪ ಕಡಿಮೆಯಾಗಿದೆ. ಮುಂದಿನ ಎರಡು ವರ್ಷಗಳಲ್ಲಿ, ಸಾಂಕ್ರಾಮಿಕ ಸಮಯದಲ್ಲಿ ಸರ್ಕಾರದ ಆಹಾರ ಧಾನ್ಯದ ದಾಸ್ತಾನುಗಳನ್ನು ಇಳಿಸಿ ಆಹಾರ ಧಾನ್ಯಗಳ ವಿತರಣೆಯನ್ನು ಮಾಡಿದ್ದರಿಂದ ಈ ಸಂಖ್ಯೆ ಕ್ರಮವಾಗಿ 511.7 ಗ್ರಾಂ ಮತ್ತು 514.6 ಗ್ರಾಂಗಳಿಗೆ ಹೆಚ್ಚಿತು, ಆದರೆ ಸಂಪೂರ್ಣ ನವ–ಉದಾರವಾದಿ ಅವಧಿಯಲ್ಲಿ ಆಹಾರಧಾನ್ಯಗಳ ತಲಾವಾರು ಲಭ್ಯತೆ ಅಧಿಕೃತ ಅಂಕಿಅಂಶಗಳ ಪ್ರಕಾರ ಏರಿಕೆಯನ್ನೇ ಕಂಡಿಲ್ಲ ಎಂಬುದು ಸ್ಪಷ್ಟ. ಬೇರೆ ರೀತಿಯಲ್ಲಿ ಹೇಳುವುದಾದರೆ, ಬೇಡಿಕೆ ಮತ್ತು ಪೂರೈಕೆಯ ನಡುವಿನ ಸೂಕ್ಷ್ಮ ಸಮತೋಲನವನ್ನು ಯಾವುದೇ ಗಮನಾರ್ಹ ಮತ್ತು ಸತತ ಬೆಲೆಯೇರಿಕೆಗಳಿಲ್ಲದೆ ನಿಭಾಯಿಸಲಾಯಿತು. ಏಕೆಂದರೆ ದುಡಿಯುವ ಜನರ ಕೈಯಲ್ಲಿ ಕೊಳ್ಳುವ ಶಕ್ತಿಯನ್ನು ನವ ಉದಾರವಾದಿ ಆಳ್ವಿಕೆಯ ಕಾರ್ಯವಿಧಾನದ ಮೂಲಕ ಸಾಕಷ್ಟು ಪ್ರಮಾಣದಲ್ಲಿ ಹಿಂಡಲಾಯಿತು.

ಸಮತೋಲನ ತಲೆಕೆಳಗಾಗಬಹುದು

ಈ ಅತಂತ್ರ ಸಮತೋಲನವು ಯಾವುದೇ ಸಮಯದಲ್ಲಿ ತಲೆಕೆಳಗಾಗಬಹುದು, ಅದರಿಂದಾಗಿ ಆಹಾರಧಾನ್ಯದ ಬೆಲೆಗಳಲ್ಲಿ ತಕ್ಷಣವೇ ಏರಿಕೆಯಾಗಬಹುದು. ಅದರಿಂದಾಗಿ ಉಂಟಾಗುವ ಹಣದುಬ್ಬರದ ನಿರೀಕ್ಷೆಗಳು ಸಮಸ್ಯೆಯನ್ನು ಮತ್ತಷ್ಟು ಸಂಕೀರ್ಣಗೊಳಿಸಬಹುದು. ಇದು ಬಂಡವಾಳಶಾಹಿ ಪರಿಸ್ಥಿತಿಗಳಲ್ಲಿ ಸರಕಾರ ಹಣದುಬ್ಬರ–ವಿರೋಧಿ ನೀತಿ ಎಂಬ ಹೆಸರಿನಲ್ಲಿ ಅಂಗೀಕರಿಸುವ ಕ್ರಮಗಳು ಕೊಳ್ಳುವ ಶಕ್ತಿಯನ್ನು ಇನ್ನಷ್ಟು ಬಿಗಿಯಾಗಿ ಹಿಂಡಿ ಹಾಕುವ ವರೆಗೆ ಮುಂದುವರೆಯುತ್ತದೆ. ಉಕ್ರೇನ್ ಯುದ್ಧ ಮತ್ತು



ಆಹಾರ ಧಾನ್ಯಗಳ ಬೆಲೆಗಳಲ್ಲಿನ ಜಾಗತಿಕ ಏರಿಕೆಯು ಭಾರತದಲ್ಲಿಯೂ ಹಣದುಬ್ಬರದ ನಿರೀಕ್ಷೆಗಳನ್ನು ಉಂಟುಮಾಡುವ ಸನ್ನಿವೇಶವನ್ನು ಒದಗಿಸುತ್ತದೆ. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ನಿರ್ವಹಿಸಲು ಅಗತ್ಯವಿರುವುದಕ್ಕಿಂತ ಹೆಚ್ಚಿನಆಹಾರಧಾನ್ಯದ ದಾಸ್ತಾನು ಹೊಂದಿದ್ದರೂ, ಕೆಲವು ಸಮಯದಿಂದ ಇದರ ಪ್ರಮಾಣ ಇಳಿದಿದೆ ಎಂಬ ಸಂಗತಿಯು ಇಂತಹ ನಿರೀಕ್ಷೆಗಳನ್ನು ಮತ್ತಷ್ಟು ಬಲಪಡಿಸುತ್ತದೆ.

ಆಗಸ್ಟ್ 22 ರಂದು, ಉದಾಹರಣೆಗೆ, ಎಫ್‌ಸಿಐ ನ ಒಟ್ಟು ಆಹಾರ ಧಾನ್ಯ ದಾಸ್ತಾನುಗಳು 52.335 ಮಿಲಿಯ ಟನ್‌ಗಳಾಗಿದ್ದು, ಇದರಲ್ಲಿ 24.296 ಮಿಲಿಯನ್ ಟನ್‌ಗಳಷ್ಟು ಅಕ್ಕಿ ಮತ್ತು 28.039 ಮಿಲಿಯನ್ ಟನ್‌ಗಳಷ್ಟು ಗೋಧಿ; ಈ ದಾಸ್ತಾನುಗಳು ಸಾರ್ವಜನಿಕ ವಿತರಣಾ ವ್ಯವಸ್ಥೆಗೆ ಅಗತ್ಯವಿರುವ ಕಾರ್ಯಾಚರಣೆಯ ದಾಸ್ತಾನುಗಳಿಗಿಂತ ಹೆಚ್ಚಿದ್ದವು ಆದರೆ ಹಿಂದಿನ ಆರು ವರ್ಷಗಳಲ್ಲಿ ಯಾವುದೇ ಸಮಯದಲ್ಲಿ ಇದ್ದುದಕ್ಕಿಂತ ಕಡಿಮೆ ಇದ್ದವು, ಇದು ಧಾನ್ಯಗಳನ್ನು ಕಳ್ಳ ದಾಸ್ತಾನು ಮಾಡಲು ಮತ್ತು ಮುಕ್ತ–ಮಾರುಕಟ್ಟೆ ಬೆಲೆಯನ್ನು ಏರಿಸಬಹುದು ಎಂಬ ಸಂಕೇತವನ್ನು ಸಟ್ಟಾಕೋರರಿಗೆ ನೀಡಿರಬಹುದು.

ಆಹಾರ ದಾಸ್ತಾನುಗಳ ಈ ಇಳಿಕೆಯೇ ಮೋದಿ ಸರ್ಕಾರದ ಅಸಾಧಾರಣ ಅವಿವೇಕದ ನೀತಿಯ ಒಂದು ಫಲಿತಾಂಶವಾಗಿದೆ. ತನ್ನ ಬಳಿಯಿರುವ ದಾಸ್ತಾನುಗಳನ್ನು ಹೊರಹಾಕುವ ಮೂಲಕ ಮುಕ್ತ ಮಾರುಕಟ್ಟೆಯಲ್ಲಿ ಆಹಾರಧಾನ್ಯಗಳ ಬೆಲೆಉಬ್ಬರವನ್ನು ತಗ್ಗಿಸಬಹುದು ಅದು ಭಾವಿಸಿತ್ತು. ಸಟ್ಟಾಕೋರರು ಸರ್ಕಾರವು ಹೊರ ಹಾಕಿದ್ದನ್ನು ಖರೀದಿಸಿದರು, ಇದರಿಂದಾಗಿ ಹಣದುಬ್ಬರವು ಮೊದಲಿನಂತೆ ಮುಂದುವರೆಯಿತು, ಆದರೆ ಸರ್ಕಾರಿ ದಾಸ್ತಾನುಗಳು ಅಕಾರಣವಾಗಿ ಇಳಿದವು, ಆ ಮೂಲಕ ಹಣದುಬ್ಬರದ ನಿರೀಕ್ಷೆಗಳನ್ನು. ಮತ್ತು ಅದರಿಂದಾಗಿ ಹಣದುಬ್ಬರದ ಪ್ರಕ್ರಿಯೆಯನ್ನು ಮತ್ತಷ್ಟು ಬಲಪಡಿಸಲಾಯಿತು. ಆದ್ದರಿಂದ ಸಹಜವಾಗಿಯೇ ಆಹಾರಧಾನ್ಯದ ಬೆಲೆಗಳು ಹಣದುಬ್ಬರದ ನಿರೀಕ್ಷೆಗಳ ಉತ್ತೇಜನೆಯಿಂದ ಏರಿದಾಗ, ಅದರ ಸಾಮಾನ್ಯ ಪರಿಣಾಮವಾಗಿ ಇತರ ಆಹಾರ ಪದಾರ್ಥಗಳ ಬೆಲೆಗಳೂ ಏರಿದವು.

ಎರಡು ಪರ್ಯಾಯ ದಾರಿಗಳು

ಈಗ ಸಂಭವಿಸುತ್ತಿರುವ ಆಹಾರ ಹಣದುಬ್ಬರವನ್ನು ಎದುರಿಸಲು ಎರಡು ಪರ್ಯಾಯ ಮಾರ್ಗಗಳಿವೆ. ಒಂದು ವಿತ್ತೀಯ ನೀತಿಯ ಮೂಲಕ, ಬಡ್ಡಿದರಗಳನ್ನು ಹೆಚ್ಚಿಸುವುದು ಮತ್ತು ಒಟ್ಟಾರೆಯಾಗಿ ಸಾಲನೀಡಿಕೆಯನ್ನು ಬಿಗಿಗೊಳಿಸುವುದು. ಈ ಹಿಂದೆ ಇಂತಹ ಸಂದರ್ಭಗಳಲ್ಲಿ ಕೇವಲ ಆಹಾರಧಾನ್ಯ ವಲಯಕ್ಕೆ ನೀಡಲಾಗುತ್ತಿದ್ದ ಸಾಲಗಳನ್ನು "ಆಯ್ದ ಸಾಲ ನಿಯಂತ್ರಣ" ಎಂಬ ನೀತಿಯ ಅಡಿಯಲ್ಲಿ ಬಿಗಿಗೊಳಿಸಲಾಗಿತ್ತು; ಆದರೆ ನವ–ಉದಾರವಾದಿ ಯುಗದಲ್ಲಿ ಇದು ಬಳಕೆಯಲ್ಲಿಲ್ಲ, ಅದರಿಂದಾಗಿ ಬಡ್ಡಿದರದ ನೀತಿಯನ್ನು ಬಳಸಲಾಗುತ್ತಿದೆ, ಇದು ನಿವಾರ್ಯವಾಗಿ ಸಣ್ಣ ಉದ್ಯಮಗಳನ್ನು ಅಸಮರ್ಥಗೊಳಿಸುತ್ತದೆ ಮತ್ತು ಗಮನಾರ್ಹ

ಪುಟ 15 ಕ್ಕೆ

ಜನಶಕ್ತಿ ಕನ್ನಡ ವಾರಪತ್ರಿಕೆ ಅಕ್ಟೋಬರ್ 2–8, 2023 13 October 2-8, 2023 JANASHAKTHI KANNADA VARA PATRIKE

ಅಂತ್ಯ ಕಾಣದ ಭಾರತದ ಅತಿದೊಡ್ಡ ರಕ್ಷಣಾ ಹಗರಣ
ರಫೆಲ್ ಯುದ್ಧ ವಿಮಾನ ಒಪ್ಪಂದ

ಪುಟ 11 ರಿಂದ

ಹೇಳಿಕೆಗಳನ್ನು ತಪ್ಪಾಗಿ ಅರ್ಥೈಸಿಕೊಂಡಿದೆ ಮತ್ತು ತಿದ್ದುಪಡಿಗಳನ್ನು ಕೋರಿದೆ ಎಂದು ಹೇಳಿತು. ತೀರ್ಪಿನ ತಿದ್ದುಪಡಿಯ ಸರ್ಕಾರದ ಅರ್ಜಿಯನ್ನು ಪರಿಗಣಿಸದಂತೆ ಕಾಂಗ್ರೆಸ್ ಸುಪ್ರೀಂ ಕೋರ್ಟ್ ಅನ್ನು ಕೇಳಿತು.

17 ಡಿಸೆಂಬರ್ 2018: ಒಪ್ಪಂದದ ಕುರಿತು ಜಂಟಿ ಸಂಸದೀಯ ಸಮಿತಿ (ಜೆಪಿಸಿ) ತನಿಖೆಗೆ ಸಿಪಿಐ(ಎಂ) ಒತ್ತಾಯಿಸುತ್ತದೆ. ರಫೇಲ್ ಒಪ್ಪಂದದ ಕುರಿತು ವರದಿಯನ್ನು ಮಂಡಿಸಬೇಕಿರುವ ಸಿಎಜಿ, ಈ ಒಪ್ಪಂದಕ್ಕೆ ಸಹಿ ಹಾಕಿದಾಗ ಹಣಕಾಸು ಕಾರ್ಯದರ್ಶಿಯಾಗಿದ್ದ ಕಾರಣ ಹಿತಾಸಕ್ತಿ ಸಂಘರ್ಷದಿಂದ ಬಳಲುತ್ತಿದೆ. ಹಾಗಾಗಿ ಸಿಎಜಿ ವರದಿಯ ವಿಶ್ವಾಸಾರ್ಹತೆಗೆ ತೀವ್ರ ಧಕ್ಕೆಯಾಗಿದೆ ಎಂದು ಆರೋಪಿಸಿದ ವಿರೋಧ ಪಕ್ಷಗಳು ಫೆಬ್ರವರಿ 2019 ರಲ್ಲಿ ಉನ್ನತ ಮಟ್ಟದ ತನಿಖೆಗೆ ಒತ್ತಾಯಿಸುತ್ತವೆ.

ಮರುಪರಿಶೀಲನಾ ಅರ್ಜಿ ವಿಚಾರಣೆಗೆ

ಏಪ್ರಿಲ್ 2019: ರಫೇಲ್ ಒಪ್ಪಂದಕ್ಕೆ ಸಂಬಂಧಿಸಿ ಮರುಪರಿಶೀಲನಾ ಅರ್ಜಿ ವಿಚಾರಣೆಗೆ ಶೀಘ್ರದಲ್ಲೇ ನಿಗದಿಪಡಿಸಲಾಗುವುದೆಂದು, ಮತ್ತು ಇದಕ್ಕೆ ಸಂಬಂಧಿಸಿದ ಸೋರಿಕೆಯಾದ, ರಹಸ್ಯ ದಾಖಲೆಗಳನ್ನು ಪರಿಶೀಲಿಸುವುದಾಗಿ ಮುಖ್ಯ ನ್ಯಾಯಮೂರ್ತಿ ರಂಜನ್ ಗೋಗೊಯಿ, ನ್ಯಾಯಮೂರ್ತಿಗಳಾದ ಎಸ್.ಕೆ. ಕೌಲ್ ಮತ್ತು ಕೆ.ಎಂ.ಜೋಸೆಫ್ ಅವರನ್ನೊಳಗೊಂಡ ತ್ರಿಸದಸ್ಯ ಸಮಿತಿ ಹೇಳುತ್ತದೆ. ಇದಕ್ಕೆ ಕೇಂದ್ರ ಸರ್ಕಾರ ಆಕ್ಷೇಪ ವ್ಯಕ್ತಪಡಿಸುತ್ತದೆ.

ವಿಶೇಷ ಹಕ್ಕು ದಾಖಲೆಗಳನ್ನು ಅರ್ಜಿದಾರರು ಕಾನೂನುಬಾಹಿರ ರೀತಿಯಲ್ಲಿ ಸಂಗ್ರಹಿಸಿದ್ದಾರೆ ಮತ್ತು ಫ್ರಾನ್ಸ್‌ನಿಂದ 36 ರಫೇಲ್ ಯುದ್ಧ ವಿಮಾನಗಳ ಖರೀದಿಯನ್ನು ಪ್ರಶ್ನಿಸಿ ಎಲ್ಲಾ ಅರ್ಜಿಗಳನ್ನು ವಜಾಗೊಳಿಸಿದ ಸುಪ್ರೀಂ ಕೋರ್ಟ್ ಡಿಸೆಂಬರ್ 14, 2018 ರ ತೀರ್ಪಿನ ವಿರುದ್ಧದ ಅವರ ಮರುಪರಿಶೀಲನಾ ಅರ್ಜಿಗಳನ್ನು ಬೆಂಬಲಿಸಲು ಬಳಸಲಾಗಿದೆ ಎಂದು ವಾದಿಸಿದ ಕೇಂದ್ರವು ಪರಿಶೀಲನಾ ಅರ್ಜಿಯ ನಿರ್ವಹಣೆಯನ್ನು ಪ್ರಶ್ನಿಸಿ ಆಕ್ಷೇಪಣೆಯನ್ನು ಸಲ್ಲಿಸಿತು.

ಸಿಜೆಐ ವಿರುದ್ಧ ಲೈಂಗಿಕ ಕಿರುಕುಳದ ದೂರು ಮತ್ತು ಮಹಿಳೆ

ಜನವರಿ 2019: ಮುಖ್ಯ ನ್ಯಾಯಾಧೀಶರಾಗಿದ್ದ ಗೋಗೊಯ್ ವಿರುದ್ಧ ಲೈಂಗಿಕ ಕಿರುಕುಳದ ದೂರು ನೀಡಿದ್ದ ಮಹಿಳೆಯ ಮೈದುನ ಪ್ರಕರಣ ಸಂಬಂಧ ಆರೆಸ್ಸೆಸ್ ನ ಸಂಜಯ್ ಜೋಷಿ ಅವರನ್ನು ಎರಡು ಬಾರಿ ಭೇಟಿ ಆಗಿದ್ದರು ಎಂದು 'ದಿ ವೈರ್' ವರದಿ ಮಾಡಿದೆ.

10 ಮಾರ್ಚ್ 2019ರಂದು ವಂಚನೆ ಆರೋಪದ ಮೇಲೆ ಆ ಮಹಿಳೆಯ ಬಂಧನವಾಗುತ್ತದೆ. ಕೇವಲ 2 ದಿನಗಳಲ್ಲಿ ಜಾಮೀನಿನ ಮೇಲೆ ಮಹಿಳೆಯ ಬಿಡುಗಡೆಯಾಗುತ್ತದೆ.

ನ್ಯಾಯಾಂಗದ ವ್ಯವಸ್ಥೆ ಅಪಾಯದಲ್ಲಿದೆ ಎಂದ ಸಿಜೆಐ

ಏಪ್ರಿಲ್ 20, 2019 ರಂದು ಅವರ ಕೋರ್ಟ್‌ನ ಕಿರಿಯ ಸಹಾಯಕಿಯಾಗಿದ್ದ 35 ವರ್ಷದ ಮಹಿಳೆಯೊಬ್ಬರು, 2018 ಅಕ್ಟೋಬರ್ 10 ಮತ್ತು 11ರಂದು ತನಗೆ ರಂಜನ್ ಗೋಗೋಯ್ ಲೈಂಗಿಕ ಕಿರುಕುಳ ನೀಡಿದ್ದಾರೆಂದು ಆರೋಪಿಸಿ, 22 ನ್ಯಾಯಾಧೀಶರಿಗೆ ಪತ್ರ ಬರೆಯುತ್ತಾರೆ. ತಮ್ಮ ಮೇಲಿನ ಲೈಂಗಿಕ ಕಿರುಕುಳದ ಆರೋಪವನ್ನು ನಿರಾಕರಿಸಿದ ಗೋಗೊಯ್ ಅವರು, ನ್ಯಾಯಾಂಗದ ವ್ಯವಸ್ಥೆ ಈ ಹಿಂದೆಂದೂ ಕಾಣದ ರೀತಿಯಲ್ಲಿ ಅಪಾಯದಲ್ಲಿದೆ ಎನ್ನುತ್ತಾರೆ. 20 ವರ್ಷಗಳಿಂದ ನ್ಯಾಯಾಧೀಶರಾಗಿ ಕೆಲಸ ಮಾಡುತ್ತಿದ್ದು, ನನ್ನ ಬ್ಯಾಂಕ್ ಬ್ಯಾಲೆನ್ಸ್ ಕೇವಲ 6.80 ಲಕ್ಷ ಇದೆ. ನನ್ನ ಮೇಲೆ ಭ್ರಷ್ಟಾಚಾರ ಆರೋಪ ಹೊರಿಸಲಾಗದೇ ಈ ರೀತಿಯ ಕೀಳು ಆರೋಪ ಹೊರಿಸಿ ತೇಜೋವಧೆಗೆ ಮುಂದಾಗಿದ್ದಾರೆ. ಈ ಪ್ರಕರಣದ ಹಿಂದೆ ದೊಡ್ಡ ಷಡ್ಯಂತ್ರ ಇದ್ದಂತಿದೆ, ಮುಖ್ಯ ನ್ಯಾಯಮೂರ್ತಿಗಳ ಕಚೇರಿಯನ್ನು ಸ್ತಬ್ದಗೊಳಿಸುವ ಉದ್ದೇಶ ಇದೆ ಎಂದು ಗಂಭೀರ ಆರೋಪ ಮಾಡುತ್ತಾರೆ.

ಲೈಂಗಿಕ ಕಿರುಕುಳದ ಆರೋಪದ ಪ್ರಕರಣಕ್ಕೆ ಸಂಬಂಧಿಸಿದಂತೆ ಗೋಗೊಯ್ ನೇತೃತ್ವದ ಮೂವರು ನ್ಯಾಯಾಧೀಶರ ಸಮಿತಿ ನೇಮಕವಾಗಿತ್ತದೆ ಎಂಬ ಸುದ್ದಿ ಬರುತ್ತದೆ. ಆ ನಂತರ ಏನಾಯಿತು ಎಂಬುದು ಇನ್ನೂ ರಹಸ್ಯವಾಗಿಯೇ ಇದೆ.

ಜನವರಿ 2020: ಮಹಿಳೆಯ ವಿರುದ್ಧ ವಂಚನೆಯ ಆರೋಪ ಹೊರಿಸಿದ್ದ ದೂರುದಾರ, ತಾನು ಮುಂದುವರಿಸಲು ಇಚ್ಛಿಸುವುದಿಲ್ಲ ಎಂದು ಹೇಳಿದ ನಂತರ ಸುಪ್ರೀಂ ಕೋರ್ಟ್ ಮಹಿಳೆಯನ್ನು ಮರುನೇಮಕಗೊಳಿಸಿತು.

ಅಯೋಧ್ಯ ವಿವಾದದ ತೀರ್ಪು

9 ನವೆಂಬರ್ 2019: ಅಯೋಧ್ಯೆಯ ವಿವಾದಿತ ಭೂಮಿಯಲ್ಲಿ ರಾಮ ಮಂದಿರ ನಿರ್ಮಿಸಲು ಗೋಗೊಯ್ ನೇತೃತ್ವದ ಐವರು ನ್ಯಾಯಾಧೀಶರ ನ್ಯಾಯಪೀಠವು ಹಿಂದೂ ಕಡೆಯವರಿಗೆ ಭೂಮಿಯನ್ನು ನೀಡುವ ಪರವಾಗಿ ಸರ್ವಾನುಮತದಿಂದ ನಿರ್ಧರಿಸಿತು. ಇದು ಗೊಗೋಯ್ ಅವರ ನಿವೃತ್ತಿಯ ಮೊದಲು, ಅವರ ಕೊನೆಯ ತೀರ್ಪು.

ರಫೆಲ್ ಒಪ್ಪಂದಕ್ಕೆ ಸಂಬಂಧಿಸಿದ ಡಿಸೆಂಬರ್ 2018 ರ ತನ್ನ ತೀರ್ಪನ್ನು ಮರುಪರಿಶೀಲಿಸುವಂತೆ ಕೋರಿ ಸಲ್ಲಿಸಿದ ಅರ್ಜಿಗಳನ್ನು ಗೋಗೊಯ್, ಸಂಜಯ್ ಕಿಶನ್ ಕೌಲ್ ಮತ್ತು ಕೆ. ಎಂ. ಜೋಸೆಫ್ ಅವರನ್ನೊಳಗೊಂಡ ನ್ಯಾಯಪೀಠವು 14 ನವೆಂಬರ್ 2019 ರಂದು ವಜಾಗೊಳಿಸಿತು. ಎಲ್ಲಾ ಮೂರು ವಿವಾದಾತ್ಮಕ ವಿಷಯಗಳ– ನಿರ್ಣಯ ಪ್ರಕ್ರಿಯೆ, ತುಲನಾತ್ಮಕ ಬೆಲೆ ಮತ್ತು ಭಾರತೀಯ ಆಫ್‌ಸೆಟ್ ಪಾಲುದಾರರ (ಐಒಪಿ) ಆಯ್ಕೆಯ ಕುರಿತು ಒಪ್ಪಂದಕ್ಕೆ ಕ್ಲೀನ್ ಚಿಟ್ ನೀಡಿತು. ಭಾರತ ಸರ್ಕಾರವು 36 ರಕ್ಷಣಾ ವಿಮಾನಗಳನ್ನು ಖರೀದಿಸುವ ಸೂಕ್ಷ್ಮ ವಿಷಯದ ಬಗ್ಗೆ ಈ ನ್ಯಾಯಾಲಯದ ಯಾವುದೇ ಹಸ್ತಕ್ಷೇಪಕ್ಕೆ ನಮಗೆ ಯಾವುದೇ ಕಾರಣವಿಲ್ಲ ಎಂದಿತು.

ಒಪ್ಪಂದದಲ್ಲಿ ಅವ್ಯವಹಾರ ನಡೆದಿದೆ ಎಂದು ಆರೋಪಿಸಿ, ಅರ್ಜಿದಾರರಾದ ಅರುಣ್ ಶೌರಿ, ಯಶವಂತ್ ಸಿನ್ಹಾ, ಪ್ರಶಾಂತ್ ಭೂಷಣ್ ಮತ್ತು ಇತರರು ನ್ಯಾಯಾಲಯದ ಮೇಲ್ವಿಚಾರಣೆಯ ತನಿಖೆಗೆ ಒತ್ತಾಯಿಸಿದ್ದರು. ಮತ್ತು ತನ್ನ ತೀರ್ಪಿನ ಮರುಪರಿಶೀಲನೆ ನಡೆಸಬೇಕೆಂದು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

ಗೊಗೋಯ್: ನಿವೃತ್ತಿ ನಂತರ ರಾಜ್ಯಸಭೆಗೆ ನಾಮಕರಣ

17 ನವೆಂಬರ್ 2019 ರಂದು ನ್ಯಾಯಾಧೀಶರ ಸ್ಥಾನದಿಂದ ರಂಜನ್ ಗೋಗೊಯ್ ನಿವೃತ್ತಿಯಾಗುತ್ತಾರೆ. 16 ಮಾರ್ಚ್ 2020 ರಂದು ರಾಷ್ಟ್ರಪತಿಗಳು ಅವರನ್ನು ರಾಜ್ಯಸಭೆಗೆ ನಾಮಕರಣ ಮಾಡಿ ಅಧಿಸೂಚನೆ ಹೊರಡಿಸುತ್ತಾರೆ.

ಮಹಿಳೆ ಅಥವಾ ಸಿಜೆಐ ಯಾರೊಬ್ಬರ ಮೇಲೂ ಕಾನೂನು ಕ್ರಮ ಇಲ್ಲ!!

ಇಲ್ಲಿ ನಾವು ಗಮನಿಸಬೇಕಾದ ವಿಷಯವೆಂದರೆ, ಸಿಜೆಐ ವಿರುದ್ಧ ಲೈಂಗಿಕ ಕಿರುಕುಳದ ಆರೋಪ ಮಾಡಿದ್ದು ಸುಳ್ಳು ಎಂದಾದರೆ, ನ್ಯಾಯಾಧೀಶರ ಮಾನಹಾನಿ ಮಾಡಲು ಸುಳ್ಳು ಆರೋಪ ಮಾಡಿದ್ದಕ್ಕಾಗಿ ಆ ಮಹಿಳೆಯ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಬೇಕಿತ್ತು. ಅಥವಾ, ಮಹಿಳೆಯ ಆರೋಪ ನಿಜವಾಗಿದ್ದರೆ, ಸಿಜೆಐ ಗೋಗೊಯ್ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲು ಅವಕಾಶ ಇತ್ತು. ಲೈಂಗಿಕ ಕಿರುಕುಳದ ದೂರಿನ ಈ ಪ್ರಕರಣದಲ್ಲಿ ದೂರುದಾರ ಮಹಿಳೆ ಅಥವಾ ಆರೋಪ ಹೊತ್ತಿದ್ದ ನ್ಯಾಯಮೂರ್ತಿ ಇಬ್ಬರಿಗೂ ಯಾವುದೇ ರೀತಿಯ ಶಿಕ್ಷೆಯಾಗಲಿಲ್ಲ. ಇದರ ಸತ್ಯಾಸತ್ಯತೆ ತಿಳಿಯಲು ಇಡೀ ದೇಶವೇ ಎದುರುನೋಡುತ್ತಿದ್ದ ಈ ಪ್ರಕರಣವನ್ನು ಏನೂ ನಡೆದೇ ಇಲ್ಲವೆಂಬಂತೆ ಮುಚ್ಚಿಹಾಕಲಾಯಿತು. ಮಹಿಳೆಯನ್ನು ಮೊದಲಿನ ಕೆಲಸಕ್ಕೆ ನೇಮಕಗೊಳಿಸಿದ್ದು, ಗೋಗೊಯ್ ಅವರನ್ನು ರಾಜ್ಯಸಭಾ ಸದಸ್ಯರನ್ನಾಗಿ ನಾಮಕರಣ ಮಾಡಿದ್ದು ಈ ಎಲ್ಲವೂ, "ಈ ಪ್ರಕರಣದ ಹಿಂದೆ ದೊಡ್ಡ ಷಡ್ಯಂತ್ರ ಇದ್ದಂತಿದೆ" ಎಂದಿದ್ದ ಗೋಗೊಯ್ ಅವರ ಮಾತುಗಳನ್ನು ನೆನಪಿಸುತ್ತವೆ.

ಪ್ಯಾರಿಸ್ ಮ್ಯಾಜಿಸ್ಟ್ರೇಟ್‌ಗಳಿಂದ ಭಾರತ ಸರ್ಕಾರಕ್ಕೆ ಅಧಿಕೃತ ವಿನಂತಿ

ಜೂನ್ 2021: ರಫೇಲ್ ಒಪ್ಪಂದದಲ್ಲಿನ ಭ್ರಷ್ಟಾಚಾರದ ಆರೋಪಗಳ ತನಿಖೆಗೆ ಫ್ರೆಂಚ್ ನ್ಯಾಯಾಧೀಶರನ್ನು ನೇಮಿಸಲಾಗಿದೆ. ಇದರಿಂದ ಹಿಂದಿನ ಖರೀದಿ ಒಪ್ಪಂದದಲ್ಲಿ ಆಳವಾದ ಭ್ರಷ್ಟಾಚಾರ ನಡೆದಿದೆ ಎಂಬುದನ್ನು ಇದು ತೋರಿಸುತ್ತದೆ ಎಂದ ಕಾಂಗ್ರೆಸ್ ಮತ್ತು ಸಿಪಿಐ(ಎಂ), ಜೆಪಿಸಿ ತನಿಖೆಗೆ ಮತ್ತೆ ಒತ್ತಾಯಿಸಿದವು.

ಡಸಾಲ್ಟ್ ಏವಿಯೇಷನ್ ಭಾರತದಲ್ಲಿ ಮಾಡಿದ ಪಾವತಿಗಳ ಕುರಿತು ನಡೆಯುತ್ತಿರುವ ತನಿಖೆಗೆ ಸಹಕರಿಸುವಂತೆ ಪ್ಯಾರಿಸ್ ಮ್ಯಾಜಿಸ್ಟ್ರೇಟ್‌ಗಳು ಭಾರತ ಸರ್ಕಾರಕ್ಕೆ ಅಧಿಕೃತ ವಿನಂತಿಯನ್ನು ಕಳುಹಿಸಿದ್ದಾರೆ ಎಂದು ಫ್ರೆಂಚ್ ಸುದ್ದಿ ಪೋರ್ಟಲ್ ಮೀಡಿಯಾಪಾರ್ಟ್ ಬಹಿರಂಗಪಡಿಸಿದೆ. ಡಸಾಲ್ಟ್ 2016 ರಲ್ಲಿ ಸಹಿ ಹಾಕಲಾದ ಒಪ್ಪಂದವನ್ನು ಭದ್ರಪಡಿಸುವ ಪ್ರಯತ್ನದಲ್ಲಿ ಭಾರತೀಯ ಮೂಲದ ವ್ಯಾಪಾರ ಮಧ್ಯವರ್ತಿ ಸುಷೇನ್ ಗುಪ್ತಾಗೆ ಹಲವಾರು ಮಿಲಿಯನ್ ಯುರೋಗಳನ್ನು ರಹಸ್ಯವಾಗಿ ಪಾವತಿಸಿದೆ ಎಂಬ ವಿವರವಾದ ಪುರಾವೆಗಳಿವೆ ಎಂದು ಯಾನ್ ಫಿಲಿಪಿನ್ ಬರೆದ ವರದಿಯು ಹೇಳುತ್ತದೆ. (12 ಜುಲೈ 2023ರ "ದಿ ವೈರ್")

ರಫೆಲ್ ಹಗರಣದ ಪ್ರಕರಣ ಇಂದಿಗೂ ಅಂತ್ಯಕಾಣಲೇ ಇಲ್ಲ.

ಶಾಶ್ವತ ಪ್ರಯೋಗಶೀಲ ಮೃಣಾಲ್ ಸೇನ್
ಮಧ್ಯಮ ವರ್ಗದ ಆತ್ಮಾವಲೋಕನ.........

ಪುಟ 16 ರಿಂದ

ಹೇಳಿದರೂ ಭಾರತೀಯ ಚಿತ್ರರಂಗದಲ್ಲಿ. ಕಥಾ ಅಭಿವ್ಯಕ್ತಿಯಲ್ಲಿ, ಸಿನಿಮಾದ ರೂಪಕ ಭಾಷೆಯಲ್ಲಿ, ರಾಜಕೀಯವಾಗಿ ಒಂದು ಸಂಚಲನವನ್ನು ತಂದ ನಿರ್ದೇಶಕರಲ್ಲಿ ಮೃಣಾಲ್ ಸೇನ್ರು ಆದ್ಯರು ಎನ್ನುವುದನ್ನು ಅವರ ಚಿತ್ರಗಳನ್ನು ಮೆಚ್ಚದವರೂ ಒಪ್ಪುವ ಮಾತು. ಹಾಗೆಯೇ ಭೈಸೇ ಶ್ರಾವಣ್, ಮಾಟಿರ್ ಮಾನುಷ್, ಕಲ್ಕತ್ತಾ 71, ಏಕ್ ದಿನ್ ಪ್ರತಿದಿನ್, ಅಖಾಲೇರ್ ಶಂಧಾನೆ, ಖಾರಿಜ್, ಖಂಡಾರ್ ಚಿತ್ರಗಳನ್ನು ಭಾರತೀಯ ಚಿತ್ರರಂಗ ಮರೆಯಲಾದೀತೆ?

"ಆಕೆ ಎಲ್ಲಿಗೆ ಹೋಗಿದ್ದಳು" ಎಂದು ರಾಯ್ ಕೇಳಿದಾಗ

'ಏಕ್ ದಿನ್ ಪ್ರತಿ ದಿನ್' ಮೃಣಾಲ್ ಸೇನ್ ಅವರ ಬಹು ಮುಖ್ಯ ಚಿತ್ರ. ಕೆಲಸಕ್ಕೆ ಹೋಗಿದ್ದ ತರುಣಿ ರಾತ್ರಿಯಾದರೂ ವಾಪಾಸ್ ಬಾರದಿದ್ದಾಗ ಆಕೆಯ ಮನೆಯಲ್ಲಿ, ವಾಸಿಸುತ್ತಿದ್ದ ಚಾಳ್ನಲ್ಲಿ ಉಂಟಾಗುವ ತಲ್ಲಣಗಳ ಕಥೆ. ಅಂತೂ ತಡ ರಾತ್ರಿಯಲ್ಲಿ ಆಕೆ ವಾಪಸ್ಸಾದಾಗ ಸಿಟ್ಟು, ದುಃಖ, ನಿಟ್ಟುಸಿರು ಎಲ್ಲಕ್ಕೂ ಕಾರಣಳಾಗುತ್ತಾಳೆ. ಆದರೆ ಚಿತ್ರದಲ್ಲಿ ಆಕೆ ಎಲ್ಲಿಗೆ ಹೋಗಿದ್ದಳು, ಯಾಕಾಗಿ ತಡವಾಯಿತೆಂದು ವಿವರಣೆಯೇ ಬರುವುದಿಲ್ಲ. ಚಿತ್ರ ನೋಡಿದ ಸತ್ಯಜಿತ್ ರೇ ಅವರು ಮೃಣಾಲ್ ಸೇನ್ರನ್ನು "ಆಕೆ ಎಲ್ಲಿಗೆ ಹೋಗಿದ್ದಳು?" ಎಂದು ಕೇಳಿದರಂತೆ. ಮೃಣಾಲ್ ಸೇನ್ ತಣ್ಣಗೆ ಉತ್ತರಿಸಿದರಂತೆ "ನನಗೂ ಗೊತ್ತಿಲ್ಲ." ಚಿತ್ರದ ಪ್ರತಿಯೊಂದು ಕ್ರಿಯೆಗೂ ಸ್ಪಷ್ಟನೆ ಇರಬೇಕು ಎನ್ನುವ ರಾಯ್ ಅವರಿಗೆ ಮೃಣಾಲ್ ಸೇನ್ ರ ಈ ಉತ್ತರದಿಂದ ಇರಸು ಮುರಿಸಾಯಿತಂತೆ. "ನಿರ್ದೇಶಕನಾದ ನೀನು ಈ ಉತ್ತರ ಹೇಗೆ ಕೊಡುತ್ತೀಯಾ?' ಎಂದು ರಾಯ್ ಅವರು ಕೇಳಿದಾಗ ಸೆನ್ ಹೇಳಿದರಂತೆ "ಆಕೆ ಎಲ್ಲಿ ಹೋಗಿದ್ದಳು ಎಂದು ಹೇಳಿದ್ದರೆ ಕಥೆ ಅಲ್ಲಿಗೇ ಮುಕ್ತಾಯವಾಗುತ್ತಿತ್ತು. ಆದರೆ ನನ್ನ ಆಸಕ್ತಿ ಇರುವುದು ಕಥೆಯನ್ನು ಮುಗಿಸುವುದರಲ್ಲಲ್ಲ. ಆತ್ಮಾವಲೋಕನ ಮಾಡಿಸುವುದರಲ್ಲಿ" ಎಂದರಂತೆ ಸೆನ್.


'ಕೆನ್ನೆಗೆ ಬಾರಿಸಬೇಕಾಗಿರುವುದು ನಮಗೆ'

ಖಾರೀಜ್ (Kharij) ಸೇನ್ರ ಇನ್ನೊಂದು ಮುಖ್ಯ ಚಿತ್ರ. ಮನೆಯವರ ನಿರ್ಲಕ್ಷದಿಂದ ಮನೆ ಕೆಲಸದ 13–14 ವರ್ಷದ ಹುಡುಗ ಸತ್ತುಹೋಗುತ್ತಾನೆ. ವಿಷಯ ತಿಳಿದು ಹುಡುಗನ ತಂದೆ ಕಲ್ಕತ್ತಾಗೆ ಬಂದು ಶವಸಂಸ್ಕಾರ ಮಾಡುತ್ತಾನೆ. ತನ್ನ ಮಗನ ಸಾವಿಗೆ ಮನೆಯವರೇ ಕಾರಣವೆಂದು ಗೊತ್ತಿದ್ದ ತಂದೆಗೆ ಭಾರೀ ಸಿಟ್ಟು ಬರುತ್ತದೆ. ಚಿತ್ರದ ಕೊನೇ ದೃಶ್ಯದಲ್ಲಿ ಶವ ಸಂಸ್ಕಾರ ಮಾಡಿ ವಾಪಸ್ಸಾದ ತಂದೆ ಆ ಚಾಳ್ಗೆ ಬರುತ್ತಾನೆ. ನಿಧಾನವಾಗಿ ಮೆಟ್ಟಲನ್ನೇರಿ, ಮೇಲಿನ ಮಹಡಿಯಲ್ಲಿರುವ ಯಜಮಾನನ ಮನೆಗೆ ಬರುತ್ತಾನೆ. ಮನೆಯವರೆಲ್ಲರಿಗೆ ಹಾಗೂ ಚಾಳ್ನ ಎಲ್ಲರಿಗೂ ಆತನ ಪ್ರತಿಕ್ರಿಯೆ ಏನಿರುತ್ತದೆ ಎಂಬ ಭಯ. ಹುಡುಗನ ತಂದೆ ಮನೆಯ ಯಜಮಾನನ ಕೆನ್ನೆಗೆ ಬಾರಿಸುತ್ತಾನೆ ಎಂದೇ ಎಲ್ಲಾ ಪಾತ್ರಗಳೂ, (ಅಂತೆಯೇ ಪ್ರೇಕ್ಷಕರೂ) ನಿರೀಕ್ಷಿಸುತ್ತಿರುತ್ತಾರೆ. ಆದರೆ ಹುಡುಗನ ತಂದೆ "ಬಾಬು, ನಾನಿನ್ನು ಹೊರಡುತ್ತೇನೆ." ಎಂದು ತಣ್ಣಗೆ ಎಲ್ಲರಿಗೂ ಹೇಳಿ ಮೆಟ್ಟಿಲಿಳಿದು ಹೋಗುವಲ್ಲಿಗೆ ಚಿತ್ರ ಮುಕ್ತಾಯವಾಗುತ್ತದೆ. ಕೆಲವು ಗೆಳೆಯರು ಸೇನ್ರಿಗೆ ಹೇಳಿದರಂತೆ, "ಹುಡುಗನ ತಂದೆ ಯಜಮಾನನ ಕೆನ್ನೆಗೆ ರಪ್ ಎಂದು ಬಾರಿಸಿದ್ದರೆ ಚೆನ್ನಾಗಿತ್ತು." ಅದಕ್ಕೆ ಸೇನ್ ರು "ಕೆನ್ನೆಗೆ ಬಾರಿಸ ಬೇಕಾಗಿರುವುದು ಪಾತ್ರಕ್ಕಲ್ಲ. ನಮಗೆ; ಇಂತಹ ದುರಂತಗಳು ಪ್ರತಿದಿನ ನಡೆಯುತ್ತಿದ್ದರೂ ದುಡಿಯುವ ವರ್ಗದ ಬಗ್ಗೆ ಅನಾಸಕ್ತಿ ತೋರಿಸುವ ಮಧ್ಯಮ ವರ್ಗದವರಿಗೆ." ಎಂದು ಉತ್ತರಿಸಿದರಂತೆ.

'ಖಾರಿಜ್' ನೊಡದಿರಲು ಮನೆಕೆಲಸದ ಹುಡುಗರಿಗೆ ರಜಾ!

ಬಿಡುಗಡೆಯಾಗಿ ಕೆಲ ವರ್ಷಗಳ ನಂತರ "ಖಾರೀಜ್" (Kharij) ಚಿತ್ರ ಟಿವಿಯಲ್ಲಿ ಒಂದು ದಿನ ಪ್ರಸಾರ ಮಾಡಲಾಯಿತು. ಮನೆಯವರ ನಿರ್ಲಕ್ಷದಿಂದ ಸಾವೀಗೀಡಾದ ಮನೆಕೆಲಸದ ಚಿಕ್ಕ ಹುಡುಗನ ಕಥೆ. ಅದೇ ರೀತಿಯಲ್ಲಿ ಚಿಕ್ಕ ಹುಡುಗರನ್ನು ಮನೆ ಕೆಲಸಕ್ಕಿಟ್ಟುಕೊಂಡಿದ್ದ ಅನೇಕ ಮನೆಯವರು ಚಿತ್ರ ಪ್ರಸಾರವಾಗುವ ಹೊತ್ತಿನಲ್ಲಿ ತಮ್ಮ ಮನೆ ಕೆಲಸದ ಹುಡುಗರಿಗೆ ರಜಾ ಕೊಟ್ಟೋ ಇಲ್ಲವೇ ಬೇರೆ ಸಿನೆಮಾ ನೋಡಲು ದುಡ್ಡು ಕೊಟ್ಟೋ ಅಥವಾ ಯಾವುದೋ ಕೆಲಸ ಹೇಳಿ ಅವರನ್ನು ಮನೆಯಿಂದ ಹೊರಕ್ಕೆ ಕಳುಹಿಸಿದರಂತೆ – ತಮ್ಮ ಮನೆಯ ಕೆಲಸದ ಹುಡುಗ ಆ ಚಿತ್ರ ನೋಡದಿರಲೆಂದು.

ಹಸಿರು ಕ್ರಾಂತಿಯ ಪಿತಾಮಹ ಎಂ.ಎಸ್. ಸ್ವಾಮಿನಾಥನ್ ಇನ್ನಿಲ್ಲ



ಹಸಿರು ಕ್ರಾಂತಿಯ ಪಿತಾಮಹ, ಖ್ಯಾತ ಕೃಷಿ ವಿಜ್ಞಾನಿ ಮತ್ತು ತಳಿಶಾಸ್ತ್ರಜ್ಞ ಪ್ರೊ. ಎಂ.ಎಸ್. ಸ್ವಾಮಿನಾಥನ್ (98) ಇನ್ನಿಲ್ಲ. ಅವರು ಚೆನ್ನೈನ ಸ್ವಗೃಹದಲ್ಲಿ ನಿಧನರಾದರು. ಕೆಲ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಸೆಪ್ಟೆಂಬರ್ 28ರ ಗುರುವಾರ ಬೆಳಗ್ಗೆ 11.20ಕ್ಕೆ ಚೆನ್ನೈನ ತಮ್ಮ ಮನೆಯಲ್ಲಿ ಕೊನೆಯುಸಿರೆಳೆದರು. ದೇಶವನ್ನು ಆಹಾರ ಕ್ಷೇತ್ರದಲ್ಲಿ ಸ್ವಾವಲಂಬಿಯಾಗಿಸಲು ಮತ್ತು ಹಸಿವು ಮತ್ತು ಬಡತನವನ್ನು ತೊಡೆದು ಹಾಕಲು ಅವರು ಅನೇಕ ಸಂಶೋಧನೆಗಳನ್ನು ಮಾಡಿದ್ದಾರೆ. ಅವರು ಹೆಚ್ಚು ಇಳುವರಿ ನೀಡುವ ಅಕ್ಕಿ ಮತ್ತು ಗೋಧಿ ಬೆಳೆಗಳನ್ನು ಒದಗಿಸುವ ಮೂಲಕ ದೇಶಕ್ಕೆ ಹೆಚ್ಚು ಪ್ರಯೋಜನವನ್ನು ನೀಡಿದ್ದಾರೆ. ಸ್ವಾಮಿನಾಥನ್ ಅವರಿಗೆ ಮೂವರು ಹೆಣ್ಣು ಮಕ್ಕಳಿದ್ದಾರೆ. ಸೌಮ್ಯ, ಮಧುರಾ, ನಿತ್ಯ. ಶಿಕ್ಷಣ ತಜ್ಞೆಯಾಗಿದ್ದ ಅವರ ಪತ್ನಿ ಮೀನಾ ಸ್ವಾಮಿನಾಥನ್, ಕಳೆದ ವರ್ಷ ನಿಧನರಾದರು.

ಬಂಗಾಳ ಬರಗಾಲದಿಂದ ತತ್ತರಿಸಿದಾಗ

ಸ್ವಾಮಿನಾಥನ್ ಅವರು ಆಗಸ್ಟ್ 7, 1925 ರಂದು ತಮಿಳುನಾಡಿನ ಕುಂಭಕೋಣಂನಲ್ಲಿ ಜನಿಸಿದರು. ಅಲ್ಲಿಯೇ ಪ್ರಾಥಮಿಕ ಶಿಕ್ಷಣ ಮತ್ತು ಮೆಟ್ರಿಕ್ಯುಲೇಷನ್ ಮುಗಿಸಿದರು. ತಂದೆ ವೈದ್ಯರಾಗಿದ್ದರಿಂದ ಅವರೂ ವೈದ್ಯಕೀಯ ಶಿಕ್ಷಣಕ್ಕೆ ಕಾಲಿಟ್ಟರು. ಆದರೆ 1943ರಲ್ಲಿ ಬಂಗಾಳದ ಬರಗಾಲದಿಂದ ಬೆಚ್ಚಿಬಿದ್ದು ವೈದ್ಯಕೀಯ ವ್ಯಾಸಂಗವನ್ನು ನಿಲ್ಲಿಸಿ ಕೃಷಿಯತ್ತ ಹೆಜ್ಜೆ ಹಾಕಿದರು. ಅವರು ತಿರುವನಂತಪುರದ ಮಹಾರಾಜ ಕಾಲೇಜಿನಲ್ಲಿ ಪ್ರಾಣಿಶಾಸ್ತ್ರ ಕೋರ್ಸ್‌ಗೆ ಸೇರಿಕೊಂಡರು ಮತ್ತು ಪೂರ್ವ ಪದವಿಯನ್ನು ಪೂರ್ಣಗೊಳಿಸಿದರು. ನಂತರ ಮದ್ರಾಸಿನ ಕೃಷಿ ಕಾಲೇಜಿಗೆ ಸೇರಿ ಪದವಿ ಪಡೆದರು. 1949 ರಲ್ಲಿ ದೆಹಲಿಯ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯಿಂದ ಸೈಟೊ ಜೆನೆಟಿಕ್ಸ್‌ನಲ್ಲಿ ಪಿಜಿ. ಆ ಬಳಿಕ ನೆದರ್ಲೆಂಡ್ಸ್‌ಗೆ ತೆರಳಿ ಅಲ್ಲಿನ ಕೃಷಿ ವಿಶ್ವವಿದ್ಯಾಲಯದಲ್ಲಿ ಆಲೂಗಡ್ಡೆ ವಂಶವಾಹಿಗಳ ಕುರಿತು ಸಂಶೋಧನೆ ನಡೆಸಿದರು. 1950 ರಲ್ಲಿ, ಅವರು ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದ ಸಸ್ಯ ತಳಿ ಸಂಸ್ಥೆಗೆ ಸೇರಿ ತಮ್ಮ ಪಿಎಚ್‌ಡಿ ಮಾಡಿದರು. ಇದಲ್ಲದೆ, ಅವರು ವಿಸ್ಕಾನ್ಸಿನ್ ವಿಶ್ವವಿದ್ಯಾಲಯದಲ್ಲಿ ಜೆನೆಟಿಕ್ಸ್ ವಿಭಾಗದಲ್ಲಿ ಪೋಸ್ಟ್‌ಡಾಕ್ಟರಲ್ ಸಂಶೋಧನೆ ಮಾಡಿದರು. ಅವರು 1954 ರಲ್ಲಿ ಹಿಂದಿರುಗಿದರು ಮತ್ತು ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯಲ್ಲಿ ವಿಜ್ಞಾನಿಯಾಗಿ ಸೇರಿದರು. ಅವರು ಕೃಷಿ ಸಂಶೋಧನೆಗೆ ಸಂಬಂಧಿಸಿದ ಅನೇಕ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳ ಮುಖ್ಯಸ್ಥರಾಗಿದ್ದರು. ಅವುಗಳ ರಚನೆಯಲ್ಲಿ ಅವರು ಪ್ರಮುಖ ಪಾತ್ರ ವಹಿಸಿದರು. ಅವರು ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯಲ್ಲಿ ಜೆನೆಟಿಕ್ಸ್ ವಿಭಾಗ ಮತ್ತು ಪರಮಾಣು ಸಂಶೋಧನಾ ಪ್ರಯೋಗಾಲಯವನ್ನು ಸ್ಥಾಪಿಸಿದರು. ಫಿಲಿಪೈನ್ಸ್‌ನ ಅಂತಾರಾಷ್ಟ್ರೀಯ ಅಕ್ಕಿ ಸಂಶೋಧನಾ ಸಂಸ್ಥೆಯ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದಾರೆ. ದೇಶದ ಉಷ್ಣವಲಯದ ಪ್ರದೇಶಗಳಿಗೆ ಅಂತರಾಷ್ಟ್ರೀಯ ಬೆಳೆಗಳ ಸಂಶೋಧನಾ ಕೇಂದ್ರವನ್ನು ಸ್ಥಾಪಿಸುವಲ್ಲಿ ಭಾಗವಹಿಸಿದರು. ಇಟಲಿಯಲ್ಲಿ ಸಸ್ಯ ಅನುವಂಶಿಕ ಸಂಪನ್ಮೂಲಗಳ ಅಂತರರಾಷ್ಟ್ರೀಯ ಮಂಡಳಿ ಮತ್ತು ಕೀನ್ಯಾದಲ್ಲಿ ಕೃಷಿ–ಅರಣ್ಯ ಭೂಮಿಯಲ್ಲಿ ಅಂತರರಾಷ್ಟ್ರೀಯ ಸಂಶೋಧನಾ ಮಂಡಳಿಯನ್ನು ಸ್ಥಾಪಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು.

ಹಸಿರು ಕ್ರಾಂತಿ

ಅಕ್ಕಿ ಮತ್ತು ಗೋಧಿ ಬೆಳೆಗಳ ಮೇಲಿನ ಅವರ ಸಂಶೋಧನೆಯಿಂದಾಗಿ, ದೇಶದಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯು ಗಣನೀಯವಾಗಿ ಹೆಚ್ಚಾಯಿತು. ಹೀಗೆ ದೇಶವು ಹಸಿರು ಕ್ರಾಂತಿಯನ್ನು ಸಾಧಿಸಿತು. ಸ್ವಾಮಿನಾಥನ್ ಅವರು ಅನೇಕ ಹುದ್ದೆಗಳನ್ನು ವಹಿಸಿಕೊಂಡರು ಮತ್ತು ಅವರಿಗೆ ಯಶಸ್ಸನ್ನು ತಂದರು. ಅವರು ಇನ್ನೂ ಅನೇಕ ಪ್ರಶಸ್ತಿಗಳಿಂದ ಸನ್ಮಾನಿತರಾದರು. 1972–1979 ರ ನಡುವೆ ಅವರು ಭಾರತೀಯ ಕೃಷಿ ಸಂಶೋಧನಾ ಮಂಡಳಿಯ ಮಹಾನಿರ್ದೇಶಕರಾಗಿ, 1979–1980 ರ ನಡುವೆ ಕೇಂದ್ರ ಕೃಷಿ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿ ಮತ್ತು 1982–1988 ರ ನಡುವೆ ಅಂತರರಾಷ್ಟ್ರೀಯ ಅಕ್ಕಿ ಸಂಶೋಧನಾ ಸಂಸ್ಥೆಯ ಮಹಾನಿರ್ದೇಶಕರಾಗಿ ಸೇವೆ ಸಲ್ಲಿಸಿದರು. 2019–22ರ ನಡುವೆ ವಿಶ್ವ ಆರೋಗ್ಯ ಸಂಸ್ಥೆಯ ಮುಖ್ಯ ವಿಜ್ಞಾನಿಯಾಗಿ ಸೇವೆ ಸಲ್ಲಿಸಿದ್ದಾರೆ. 20ನೇ ದಶಕದಲ್ಲಿ ಏಷ್ಯಾದ ಜನರ ಮೇಲೆ ಹೆಚ್ಚು ಪ್ರಭಾವ ಬೀರಿದವರ ಜೊತೆ ಟೈಮ್ಸ್ ನಿಯತಕಾಲಿಕೆ ಸಿದ್ಧಪಡಿಸಿದ ಪಟ್ಟಿಯಲ್ಲಿ ಸ್ವಾಮಿನಾಥನ್ ಹೆಸರು ಸೇರಿತ್ತು. ಸ್ವಾಮಿನಾಥನ್ 1987 ರಲ್ಲಿ ಚೆನ್ನೈನಲ್ಲಿ ತಮ್ಮ ಹೆಸರಿನಲ್ಲಿ ಸಂಶೋಧನಾ ಪ್ರತಿಷ್ಠಾನವನ್ನು ಸ್ಥಾಪಿಸಿದರು.

ಪ್ರಶಸ್ತಿಗಳ ಸರಣಿ

ಹಸಿರು ಕ್ರಾಂತಿಯ ಹರಿಕಾರ ಎಂ.ಎಸ್.ಸ್ವಾಮಿನಾಥನ್ ಅವರ ಸೇವೆಯನ್ನು ಗುರುತಿಸಿ ಹಲವು ಪ್ರಶಸ್ತಿಗಳು ಸಂದಿವೆ. 1967 ರಲ್ಲಿ ಪದ್ಮಶ್ರೀ, 1972 ರಲ್ಲಿ ಪದ್ಮಭೂಷಣ ಮತ್ತು 1989 ರಲ್ಲಿ ಪದ್ಮ ವಿಭೂಷಣ ಪ್ರಶಸ್ತಿಗಳು. ಅವರು 1971 ರಲ್ಲಿ ರಾಮನ್ ಮ್ಯಾಗ್ಸೆಸೆ ಪ್ರಶಸ್ತಿ ಮತ್ತು 1986 ರಲ್ಲಿ ಆಲ್ಬರ್ಟ್ ಐನ್‌ಸ್ಟೈನ್ ವರ್ಲ್ಡ್ ಸೈನ್ಸ್ ಪ್ರಶಸ್ತಿಯನ್ನು ಪಡೆದರು. 1987 ರಲ್ಲಿ ಅವರಿಗೆ ಕೃಷಿ ಸಂಶೋಧನೆಯಲ್ಲಿ ಅತ್ಯುನ್ನತ ಪ್ರಶಸ್ತಿಯಾದ ವಿಶ್ವ ಆಹಾರ ಪ್ರಶಸ್ತಿಯನ್ನು ನೀಡಲಾಯಿತು. 1989 ರಲ್ಲಿ ಇಂದಿರಾ ಗಾಂಧಿ ಶಾಂತಿ ಪ್ರಶಸ್ತಿ ಮತ್ತು 2013 ರಲ್ಲಿ ಇಂದಿರಾ ಗಾಂಧಿ ಯೂನಿಟಿ ಪ್ರಶಸ್ತಿ.

2004ರಲ್ಲಿ, ಸ್ವಾಮಿನಾಥನ್ ಅವರನ್ನು ರೈತರ ಕುರಿತ ರಾಷ್ಟ್ರೀಯ ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಲಾಯಿತು. ರೈತರ ಆತ್ಮಹತ್ಯೆ ಪ್ರಕರಣಗಳ ಹಿನ್ನೆಲೆಯಲ್ಲಿ ಅವರ ಸಂಕಷ್ಟಗಳನ್ನು ಪರಿಶೀಲಿಸಲು ಆಯೋಗವನ್ನು ಸ್ಥಾಪಿಸಲಾಗಿತ್ತು. ಆಯೋಗವು 2006ರಲ್ಲಿ ವರದಿಯನ್ನು ಸಲ್ಲಿಸಿತು. ರೈತರು ಬೆಳೆದ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ನೀಡಬೇಕು ಸರಾಸರಿ ಉತ್ಪಾದನಾ ವೆಚ್ಚಕ್ಕಿಂತ ಕನಿಷ್ಠ 50 ಪ್ರತಿಶತದಷ್ಟು ಹೆಚ್ಚಿರಬೇಕು ಎಂದು ವರದಿ ಸೂಚಿಸಿತು. ಈ ವರದಿ ಜಾರಿ ಮಾಡುವಂತೆ ರೈತರು ಆಗ್ರಹವನ್ನು ಮಾಡುತ್ತಾ ಬಂದಿದ್ದಾರೆ. ಎಂ.ಎಸ್.ಸ್ವಾಮಿನಾಥನ್ ಅವರ ಕೂಡ ಅನೇಕ ಕೃಷಿ ಹೋರಾಟಗಳಲ್ಲಿ ಭಾಗವಹಿಸಿದ್ದರು.

ಹೋರಾಟವನ್ನು ಪ್ರಬಲಗೊಳಿಸುವ ಮೂಲಕ ಶ್ರದ್ಧಾಂಜಲಿ ಅರ್ಪಿಸೋಣ: ಜಿ.ಸಿ. ಬಯ್ಯಾರೆಡ್ಡಿ

ಭಾರತ ಮತ್ತು ಜಗತ್ತಿನ ಮಟ್ಟದಲ್ಲಿ ಕೃಷಿ ವಿಜ್ಞಾನಿಯಾಗಿ ಪರಿಚಿತರಾಗಿರುವ, ದೇಶದ ರೈತರ ಪರವಾಗಿ ಕೆಲಸ ಮಾಡಿದಂತಹ ಭಾರತದ ಹಸಿರು ಕ್ರಾಂತಿಯ ಪಿತಾಮಹ, ಖ್ಯಾತ ಕೃಷಿ ವಿಜ್ಞಾನಿ ಎಂಎಸ್ ಸ್ವಾಮಿನಾಥನ್ ಅವರ ನಿಧನಕ್ಕೆ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷರಾದ ಜಿಸಿ ಬಯ್ಯಾರೆಡ್ಡಿ ಅವರು ಸಂತಾಪ ಸೂಚಿಸಿದ್ದಾರೆ. ಸ್ವಾಮಿನಾಥನ್ ಅವರು ದೇಶದ ಕೃಷಿ ಕ್ಷೇತ್ರದಲ್ಲಿ ವಿನೂತನ ವಿಧಾನಗಳನ್ನು ಪರಿಚಯಿಸಿದ್ದಾರೆ. ವಿಶೇಷವಾಗಿ ಭತ್ತ, ಗೋದಿ ಬೆಳೆಗಳಿಗೆ ಹೊಸ ತಳಿಗಳನ್ನು ಅಭಿವೃದ್ಧಿಗೊಳಿಸುವುದರಲ್ಲಿ ಅವರು ಬಹಳ ದೊಡ್ಡ ಪಾತ್ರ ನಿರ್ವಹಿಸಿದ್ದಾರೆ. ಅವರ ಶ್ರಮದಿಂದ ಭಾರತ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿದೆ. ಸ್ವಾಮಿನಾಥನ್ ರೈತರ ಹೃದಯದಲ್ಲಿ ಶಾಶ್ವತವಾಗಿ ಉಳಿಯುತ್ತಾರೆ ಎಂದಿರುವ ಬಯ್ಯಾರೆಡ್ಡಿಯವರು, ಸ್ವಾಮಿನಾಥನ್ ಆಯೋಗದ ವರದಿಯನ್ನು ಜಾರಿಗೊಳಿಸುವಂತೆ ರೈತರು ಮತ್ತು ಕೃಷಿಕೂಲಿಕಾರರು ತಮ್ಮ ಹೋರಾಟವನ್ನು ಪ್ರಬಲಗೊಳಿಸುವ ಮೂಲಕ ಸ್ವಾಮಿನಾಥನ್ ಅವರಿಗೆ ಶ್ರದ್ಧಾಂಜಲಿ ಅರ್ಪಿಸಬೇಕಾಗಿದೆ ಎಂದು ಹೇಳಿದ್ದಾರೆ.

ಸ್ವಾಮಿನಾಥನ್ ನಿಧನಕ್ಕೆ ಸಿಪಿಐಎಂ ಪಾಲಿಟ್‌ಬ್ಯೂರೋ ಸಂತಾಪ

ನವದೆಹಲಿ: ಭಾರತದಲ್ಲಿ ಹಸಿರು ಕ್ರಾಂತಿಯ ಹರಿಕಾರ ಹಾಗೂ ಖ್ಯಾತ ವಿಜ್ಞಾನಿ ಎಂಎಸ್ ಸ್ವಾಮಿನಾಥನ್ (98) ಅವರ ನಿಧನಕ್ಕೆ ಸಿಪಿಎಂ ಪಾಲಿಟ್ ಬ್ಯುರೊ ತನ್ನ ತೀವ್ರ ಸಂತಾಪ ವ್ಯಕ್ತಪಡಿಸಿದೆ ಮತ್ತು ಅವರ ಕುಟುಂಬಕ್ಕೆ ಸಾಂತ್ವನ ಸೂಚಿಸಿದೆ. ಈ ಸಂಬಂಧ ಗುರುವಾರ ಪೊಲಿಟ್‌ಬ್ಯೂರೊ ಪ್ರಕಟಣೆ ಹೊರಡಿಸಿದೆ. 1960 ರ ದಶಕದಲ್ಲಿ ಗೋಧಿ ಮತ್ತು ಅಕ್ಕಿಯ ಹೆಚ್ಚಿನ ಇಳುವರಿ ತಳಿಗಳನ್ನು ಅಭಿವೃದ್ಧಿಪಡಿಸುವಲ್ಲಿ ಮತ್ತು ಜನಪ್ರಿಯಗೊಳಿಸುವಲ್ಲಿ ಅವರ ಪ್ರಮುಖ ಪಾತ್ರವನ್ನು ಗುರುತಿಸಿ, 1987 ರಲ್ಲಿ ಸ್ಥಾಪಿಸಲಾದ ವಿಶ್ವ ಆಹಾರ ಪ್ರಶಸ್ತಿಯನ್ನು ಅವರು ಮೊದಲ ಬಾರಿಗೆ ಸ್ವೀಕರಿಸಿದರು ಎಂದು ಅದು ನೆನಪಿಸಿಕೊಂಡಿದೆ. 1988 ರಲ್ಲಿ ಎಂಎಸ್ ಸ್ವಾಮಿನಾಥನ್ ಸಂಶೋಧನಾ ಪ್ರತಿಷ್ಠಾನವನ್ನು ಸ್ಥಾಪಿಸಿದರು. ರಾಷ್ಟ್ರೀಯ ಕೃಷಿ ಆಯೋಗದ ಅಧ್ಯಕ್ಷರಾಗಿದ್ದಾಗ ಕನಿಷ್ಠ ಬೆಂಬಲ ಬೆಲೆ ನೀಡಲು ಶಿಫಾರಸು ಮಾಡಿದ್ದಾರೆ. ಕೃಷಿ ಉತ್ಪಾದನೆಯ ಒಟ್ಟು ವೆಚ್ಚದ ಶೇ. 50ರಷ್ಟನ್ನು ಕನಿಷ್ಠ ಬೆಂಬಲ ಬೆಲೆಗೆ ಸೇರಿಸಬೇಕು ಎಂಬುದು ಸ್ವಾಮಿನಾಥನ್ ಅವರ ಶಿಫಾರಸು. ಇದು ರೈತರ ಹೋರಾಟಗಳಲ್ಲಿ ಇಂದಿಗೂ ಪ್ರಮುಖ ಬೇಡಿಕೆಯಾಗಿದೆ ಎಂದು ಪೊಲಿಟ್ ಬ್ಯುರೊ ಹೇಳಿದೆ. ಮೋದಿ ಸರಕಾರವು ಅದನ್ನು ಮಾಡುವುದಾಗಿ ಭರವಸೆ ನೀಡಿದೆ ಆದರೆ ಅದನ್ನು ಜಾರಿಗೆ ತರಲು ಸಿದ್ಧವಾಗಿಲ್ಲ ಎಂದು ಪೊಲಿಟ್‌ಬ್ಯೂರೊ ಹೇಳಿದೆ.

ರೈತರ ಪ್ರತಿಭಟನೆ ಆಹಾರ ಬೆಲೆಗಳ ನಾಗಾಲೋಟದಿಂದ ದೇಶವನ್ನು ಉಳಿಸಿದೆ.......... ಪುಟ 13 ರಿಂದ

ನಿರುದ್ಯೋಗವನ್ನು ಉಂಟುಮಾಡುತ್ತದೆ. ಸಂಕ್ಷಿಪ್ತವಾಗಿ, ಆಹಾರ ಬೆಲೆಯ ಹಣದುಬ್ಬರವನ್ನು ನಿಯಂತ್ರಿಸುವ ಈ ವಿಧಾನವು ನಿರುದ್ಯೋಗದ ಸೃಷ್ಟಿಗೆ ಕಾರಣವಾಗುತ್ತದೆ; ಆದರೇನು ಮಾಡುವುದು, ಬಂಡವಾಳಶಾಹಿಯ ಅಡಿಯಲ್ಲಿ ಹಣದುಬ್ಬರವನ್ನು ಎದುರಿಸಲು ಇದೇ ರಾಮಬಾಣವೆಂದು ಸಾಮಾನ್ಯವಾಗಿ ಇದಕ್ಕೇ ಒಲವು ತೋರಿಸಲಾಗುತ್ತದೆ.

ಹಣದುಬ್ಬರವನ್ನು ನಿಯಂತ್ರಿಸುವ ಇನ್ನೊಂದು ಮಾರ್ಗವೆಂದರೆ ಸಾರ್ವಜನಿಕ ವಿತರಣಾ ವ್ಯವಸ್ಥೆಯ ವ್ಯಾಪ್ತಿಯನ್ನು ವಿಸ್ತರಿಸುವುದು, ಇದರಿಂದ ಸರ್ಕಾರಿ ದಾಸ್ತಾನುಗಳನ್ನು ಬಹಿರಂಗ ಮಾರುಕಟ್ಟೆಗೆ ತಳ್ಳುವಂತಾಗದೆ, ಗ್ರಾಹಕರನ್ನು ಬಹಿರಂಗ ಮಾರುಕಟ್ಟೆಯಿಂದ ತೆಗೆದು ಸರ್ಕಾರಿ ದಾಸ್ತಾನುಗಳನ್ನು ಅವರ ನಡುವೆ ವಿತರಿಸಲಾಗುತ್ತದೆ, ಇದು ಸಟ್ಟಾಕೋರರಿಗೆ ಈ ದಾಸ್ತಾನುಗಳು ಲಭ್ಯವಾಗದಂತೆ ಮಾಡುತ್ತದೆ.

ಸಾರ್ವಜನಿಕ ಆಹಾರ ವಿತರಣಾ ವ್ಯವಸ್ಥೆಯು ಉಳಿಯಬೇಕಾದರೆ, ಸರಕಾರ ಭಾರತೀಯ ಆಹಾರ ನಿಗಮದ (ಎಫ್‌ಸಿಐ) ಮೂಲಕ ಮಾರಾಟವನ್ನು ವಿಸ್ತಾರಗೊಳಿಸಬೇಕು, ಅದನ್ನನುಸರಿಸಿ ಸಂಗ್ರಹಣೆಯನ್ನು ವಿಸ್ತಾರಗೊಳಿಸಬೇಕು; ಹೇಗೂ ಸರ್ಕಾರವು ಈ ವರ್ಷದ ಮುಂಗಾರು ಋತುವಿನಲ್ಲಿ 52.1 ಮಿಲಿಯ ಟನ್‌ಗಳಷ್ಟು ಅಕ್ಕಿಯನ್ನು ಸಂಗ್ರಹಿಸಲು ಯೋಜಿಸುತ್ತಿದೆ. ಪ್ರಸ್ತುತ ಆಹಾರ ಹಣದುಬ್ಬರವನ್ನು ಸೋಲಿಸಲು ಇದು ಸಂಪೂರ್ಣವಾಗಿ ಅಗತ್ಯ ಕ್ರಮವಾಗಿದೆ.

ಮೂರು ಕುಖ್ಯಾತ ಕೃಷಿ ಕಾನೂನುಗಳ ಮೂಲಕ ಜಾರಿಗೆ ತರಲು ಬಯಸಿದ ಕ್ರಮಗಳ ಅಸಾಧಾರಣ ಮೂರ್ಖತನವು ಈಗ ಸ್ಪಷ್ಟವಾಗುತ್ತದೆ. ರೈತರ ಆಂದೋಲನದಿಂದಾಗಿ ಆ ಕ್ರಮಗಳನ್ನು ಹಿಂತೆಗೆದುಕೊಂಡಿರದಿದ್ದರೆ, ನಂತರ ಸಂಗ್ರಹಣೆಯನ್ನು ಖಾಸಗೀಕರಣಗೊಳಿಸಲಾಗುತ್ತಿತ್ತು, ಆಗ ಸರಕಾರದ ಬಳಿ ಹಣದುಬ್ಬರವನ್ನು ಎದುರಿಸಲು ಯಾವುದೇ ಸಾಧನವಿರುತ್ತಿರಲಿಲ್ಲ; ಹಣದುಬ್ಬರ ಖಾಸಗಿ ವಲಯದ ಕೃಪೆಯಿಂದ ಎಗ್ಗಿಲ್ಲದೆ ಮುಂದುವರಿಯುತ್ತಿತ್ತು. ಅದೃಷ್ಟವಶಾತ್ ರೈತರು ದೇಶವನ್ನು ಉಳಿಸಿದರು, ಆಹಾರ ಧಾನ್ಯಗಳ ಸಾರ್ವಜನಿಕ ಸಂಗ್ರಹಣೆಯು ಈಗಲೂ ಚಾಲ್ತಿಯಲ್ಲಿ ಉಳಿದಿದೆ; ಮತ್ತು ಸರ್ಕಾರದ ಕೈಯಲ್ಲಿ ಸಾಮೂಹಿಕ ನಿರುದ್ಯೋಗವನ್ನು ಸೃಷ್ಟಿಸದೆ ಹಣದುಬ್ಬರವನ್ನು ಎದುರಿಸುವ ಒಂದು ಅಸ್ತ್ರ ಇನ್ನೂ ಉಳಿದಿದೆ.

ಅನು: ಕೆ.ವಿ.

NEW No. MAG(3)/NPP/205/2021-2022
JANASHAKTHI KANNADA VARA PATRIKE October 2-8, 2023 Price: Rs. 10/- Date of Publication: 29 September 2023 RNI No. KARKAN /2006/17926 Posted on 30-09-2023
Posted at BG PSO, BG - 560026 **Posted at Periodical Rate -** Rs. 2

ಮೃಣಾಲ್ ಸೇನ್ ವಿಶ್ವಮನ್ನಣೆ ಪಡೆದ ಭಾರತದ ಹೊಸ ಅಲೆಯ ಸಿನೆಮಾ ದ ಪ್ರವರ್ತಕ ತ್ರಿಮೂರ್ತಿಗಳಲ್ಲಿ (ಸತ್ಯಜಿತ್ ರೇ, ಋತ್ವಿಕ್ ಘಟಕ್ ಇನ್ನಿಬ್ಬರು) ಒಬ್ಬರು. ಈ ವರ್ಷ ಅವರ ಹುಟ್ಟಿನ ಶತಮಾನೋತ್ಸವ. ಆ ಸಂದರ್ಭದಲ್ಲಿ ಮೃಣಾಲ್ ಸೇನ್ ಕುರಿತು ಭಾರತದ ಸಮಕಾಲೀನ ಸಿನೆಮಾದ ದಿಗ್ಗಜರಲ್ಲಿ ಒಬ್ಬರಾದ ಮತ್ತು ಮೃಣಾಲ್ ಸೇನ್ ಅವರ ಜತೆ ಒಡನಾಟವಿದ್ದ ಗಿರೀಶ್ ಕಾಸರವಳ್ಳಿ ಅವರ ದೀರ್ಘ ಲೇಖನ. ಮೃಣಾಲ್ ಸೇನ್ ಅವರ ಸಿನೆಮಾಯಾನದ ಹಿಂದಿನ ಪ್ರೇರಣೆ, ಅದರ ಮೂರು ಹಂತಗಳ ಮತ್ತು ಕೆಲವು ಗಮನಾರ್ಹ ಸಿನಿಮಾಗಳ ಸ್ಥೂಲ ವಿಶ್ಲೇಷಣಾತ್ಮಕ ಪರಿಚಯ, ಕೆಲವು ಘಟನೆಗಳ ಮೂಲಕ ಅವರ ವ್ಯಕ್ತಿ ಚಿತ್ರಣ, ಅವರ ಜತೆಗಿನ ಒಡನಾಟದ ನೆನಪುಗಳ ಮೆಲುಕು – ಇವೆಲ್ಲವುಗಳನ್ನು ಒಳಗೊಂಡ ಈ ಸಮಗ್ರ ಲೇಖನವನ್ನು ನಾಲ್ಕು ಭಾಗಗಳಲ್ಲಿ ಪ್ರಕಟಿಸಲಾಗುತ್ತಿದೆ. ಭಾಗ–1 ರಲ್ಲಿ ಹೊಸ ಅಲೆಯ ತ್ರಿಮೂರ್ತಿಗಳ ವಿಭಿನ್ನತೆ, ವಿಶಿಷ್ಟತೆಗಳ ಅನಾವರಣ, ಮೃಣಾಲ್ ಸಿನೆಮಾಯಾನದ ಹಿಂದಿನ ಪ್ರೇರಣೆ, ಶಾಶ್ವತ ಪ್ರಯೋಗಶೀಲತೆ, ಮೊದಲ ಹಂತ ಮತ್ತು ಭುವನ್ ಶೋಂ ಸ್ಥೂಲ ವಿಶ್ಲೇಷಣಾತ್ಮಕ ಪರಿಚಯವಿದೆ. ಭಾಗ–2 ರಲ್ಲಿ ಅವರ ಸಿನೆಮಾಯಾನದ 'ಸಾಮಾಜಿಕ ಪರಿವರ್ತನೆ'ಯ ಎರಡನೆಯ ಹಂತದ ಮತ್ತು ಮೂರನೆಯ ಹಂತವಾದ 'critical insider' ಹಂತಕ್ಕೆ ಸ್ಥಿತ್ಯಂತರದ ನಿರೂಪಣೆ ಇದೆ. ಈ ಭಾಗ–3 ರಲ್ಲಿ ಮಧ್ಯಮ ವರ್ಗದ ಆತ್ಮಾವಲೋಕನದ ಮೂರನೆಯ ಹಂತದ ಚಿತ್ರಗಳ ವಿಶ್ಲೇಷಣೆ ಮತ್ತು ಅವರ ಧೋರಣೆ ನಿರೂಪಿಸುವ ಕೆಲವು ಗಮನಾರ್ಹ ಘಟನೆಗಳ ಉಲ್ಲೇಖವಿದೆ.

ಶಾಶ್ವತ ಪ್ರಯೋಗಶೀಲ ಮೃಣಾಲ್ ಸೇನ್

ಮಧ್ಯಮ ವರ್ಗದ ಆತ್ಮಾವಲೋಕನ

ಗಿರೀಶ್ ಕಾಸರವಳ್ಳಿ

ಭಾಗ 3

"ಏಕ್ ದಿನ್ ಪ್ರತಿದಿನ್" (1979 ಬಂಗಾಲಿ) ಅವರ ಬಹು ಮುಖ್ಯ ಚಿತ್ರಗಳಲ್ಲೊಂದು. ಆ ತನಕದ ತಮ್ಮ ಏರುದನಿಯ ನಿರೂಪಣೆಯನ್ನು ಕೈ ಬಿಟ್ಟು ಮೆಲುದನಿಯ ನಿರೂಪಣೆಗೆ ಮೊರೆ ಹೋದ ಚಿತ್ರ ಸರಣಿಗಳಲ್ಲಿ ಮೊದಲ ಚಿತ್ರ. ಕಲ್ಕತ್ತಾದ ಚಾಳ್ ಒಂದರಲ್ಲಿ ವಾಸಿಸುತ್ತಿರುವ ಮಧ್ಯಮ ದರ್ಜೆಯ ಕುಟುಂಬವೊಂದರಲ್ಲಿ ಕೆಲಸಕ್ಕೆ ಹೋದ ಮಗಳು ತಡರಾತ್ರಿಯಾದರೂ ವಾಪಾಸ್ ಬಾರದಿದ್ದಾಗೆ ಕುಟುಂಬ ಆತಂಕಕ್ಕೆ ಒಳಗಾಗುತ್ತದೆ. ಅದು ಹುಟ್ಟು ಹಾಕುವ ಮಾನಸಿಕ ಒತ್ತಡದಿಂದ ಮನೆ ಮಂದಿಯೆಲ್ಲಾ ಒಬ್ಬರ ಮೇಲೊಬ್ಬರು ದೋಷಾರೋಪಣೆಯನ್ನು ಮಾಡತೊಡಗುತ್ತಾರೆ. ಆ ಚಾಳ್ನಲ್ಲಿ ವಾಸಿಸುವ ಇತರ ಸಂಸ್ಥಾರಸ್ಥರಲ್ಲಿ ಕೆಲವರು ಸಹೃದಯತೆಯಿಂದಲೂ, ಇನ್ನು ಕೆಲವರು ಕೆಟ್ಟ ಕುತೂಹಲದಿಂದಲೂ ಏನಾಗಿರಬಹುದೆಂದು ತಿಳಿದುಕೊಳ್ಳಲು ಈ ಪ್ರಕ್ರಿಯೆಯಲ್ಲಿ ಭಾಗಿಯಾಗುತ್ತಾರೆ. ಸರಿ ರಾತ್ರಿಯಾದ ನಂತರ ಮಗಳು ವಾಪಾಸ್ ಆದಾಗ ಕಾರಣ ಏನೆಂದು ತಿಳಿಯಲೂ ಆಸಕ್ತಿ ತಾಳದ ಮನೆಯವರು ತಮ್ಮ ಮಾನ ತೆಗೆದಿದ್ದಕ್ಕಾಗಿ ಆಕೆಯನ್ನೇ ತಪ್ಪಿತಸ್ಥಳನ್ನಾಗಿ ಮಾಡುತ್ತಾರೆ. ಇಷ್ಟಾಗಿಯೂ ಮಾರನೆಯ ದಿನ ಆಕೆ ಕೆಲಸಕ್ಕೆ ಹೊರಟಾಗ ಮೌನವಾಗಿ ಸಮ್ಮತಿಸುತ್ತಾರೆ. ಇದನ್ನೇ ನೆವ ಮಾಡಿಕೊಂಡ ಮೃಣಾಲ್ ಸೆನ್ರು ಮಧ್ಯಮವರ್ಗದ ಜನರಲ್ಲಿ ಗುಪ್ತವಾಗಿ ಹರಿದಾಡುತ್ತಿರುವ ಅಸಹಾಯಕತೆಯನ್ನೂ, ಗೋಸುಂಬೆತನವನ್ನೂ ಪ್ರಕಾಶಕ್ಕೆ ತರುತ್ತಾರೆ. ಆರ್ಥಿಕ ಕಾರಣಕ್ಕಾಗಿ ದುಡಿಯುವ ಹೆಣ್ಣು ಮಗಳ ಮೇಲೆ ಅವಲಂಬಿತರಾಗಿ ಹಲವು ರೀತಿಯ ರಾಜಿಗಳಿಗೆ ಸಿದ್ಧವಾಗುವುದು, ಅನಿರೀಕ್ಷಿತ ಸಂದರ್ಭಗಳಲ್ಲಿ ಅನ್ಯಾಯ ನಡೆದರೆ ಅದರ ಹೊಣೆಯನ್ನು ತಾವು ಹೊರದೇ ಬೇರೊಬ್ಬರ ಮೇಲೆ ಗೂಬೆ ಕೂರಿಸುವುದು, ನಮ್ಮ ನಡಾವಳಿಯಲ್ಲಿ ಆಗಾಗೆ ಇಣಕಿಕ್ಕುವ ಜಾಣ ಕುರುಡು, ಕೆಟ್ಟ ಕುತೂಹಲದ ಹಿಂದಿರುವ ಕೊಳಕು ಪ್ರವೃತ್ತಿ ಇತ್ಯಾದಿ ಅಂಶಗಳನ್ನು ಮುನ್ನೆಲೆಗೆ ತರುವ ಮೂಲಕ ಪಾತ್ರಗಳಷ್ಟೇ ಅಲ್ಲದೇ ಪ್ರೇಕ್ಷಕನೂ ಆತ್ಮಾವಲೋಕನ ಮಾಡಿಕೊಳ್ಳಲು ಪ್ರೇರೇಪಿಸುತ್ತಾರೆ. ಇಲ್ಲಿ 'ಮಾತನಾಡುವುದು' ಸಂಭಾಷಣೆಯಲ್ಲ, ಕ್ರಿಯೆ. ಈ ರೀತಿಯ ಕಥಾ ಸಂವಿಧಾನದ ಮೂಲಕ ಮೃಣಾಲ್ ಸೆನ್ರು ಯಶಸ್ಸು ಸಾಧಿಸುತ್ತಾರೆ.

ಖಾರಿಜ್, ಖಂಡರ್

"ಖಾರಿಜ್" (1982, ಬಂಗಾಲಿ) ಚಿತ್ರದ ಕಥೆಯೂ ಸರಳ. ಚಳಿಗಾಲದ ಒಂದು ದಿನ. ಕಲ್ಕತ್ತಾದ ಚಾಳ್ ಒಂದರಲ್ಲಿ ಮನೆಗೆಲಸದ ಹುಡುಗ ಚಳಿ ತಡೆಯಲಾಗದೇ ಅಡುಗೆ ಮನೆಯಲ್ಲಿ ಅಗ್ಗಿಷ್ಟಿಕೆಯೊಂದನ್ನು ಹೊತ್ತಿಸಿಕೊಂಡು ಮಲಗುತ್ತಾನೆ. ಬೆಳಗಾಗುವಷ್ಟರಲ್ಲಿ ಉಸಿರು ಕಟ್ಟಿ ಸತ್ತಿರುತ್ತಾನೆ. ಆ ಸಾವು ಪೋಲಿಸ್ ಕೇಸ್ ಆಗದಂತೆ ಮಾಡಲು ಆ ಮನೆಯವರು ಮತ್ತು ಚಾಳ್ನವರು ಮಾಡುವ ಹರಸಾಹಸವೇ ಚಿತ್ರದ ಕಥೆ. ಸತ್ತ ಹುಡುಗನ ದುರಂತವಾಗಲೀ, ಅವನ ತಂದೆಯ ದುಃಖವಾಗಲೀ ಅವರಿಗೆ ಮುಖ್ಯವಾಗುವುದಿಲ್ಲ. ಸುಶಿಕ್ಷಿತರು ಎಂದುಕೊಳ್ಳುವ ತಮ್ಮಲ್ಲಿ ಇರುವ ಸಮಯಸಾಧಕತನ, ಗೋಸುಂಬೆ ಪ್ರವೃತ್ತಿಯ ಬಗ್ಗೆ ಕ್ಷ ಕಿರಣ ಹರಿಸುತ್ತಾರೆ.


"ಖಂಡರ್"(1984 ಬಂಗಾಲಿ) ಚಿತ್ರದಲ್ಲಿ ಪಾಳುಬಿದ್ದ ಬೃಹತ್ ಬಂಗಲೆಯನ್ನು ನೋಡಲು ಬರುವ ನಾಲ್ವರು ಯುವಕರು ಆ ಮನೆಯ ಒಡತಿಯಾದ, ಕಣ್ಣು ಕಾಣದ ವೃದ್ಧೆ ಹಾಗೂ ಒಂಟಿಯಾಗಿ ಬದುಕುತ್ತಿರುವ ಆಕೆಯ ತರುಣ ಮಗಳ ಆಸೆಗಳು, ಒಂಟಿತನ, ಕನಸುಗಳು, ನಿರೀಕ್ಷೆಗಳಿಗೆ ಕ್ಷಣ ಭಂಗುರವಾಗಿ ಪ್ರತಿಕ್ರಿಯಿಸಿ ನಿರ್ಗಮಿಸುತ್ತಾರೆ. ನಾಗರೀಕತೆ ಮುಂದುವರೆದಂತೆಲ್ಲಾ ನಾವು ಸಂವೇದನೆಗಳನ್ನು ಕಳೆದು ಕೊಂಡು ಡಿ ಹ್ಯೂಮನೈಸ್ ಆಗ್ತಾ ಇದ್ದೇವೆಯೇ? ಎಂಬ ಸೆನ್ರ ಕಳಕಳಿಯ ಪ್ರಶ್ನೆ ಮೌಲಿಕವಾದದ್ದಾಗಿದೆ.

ಮೆಚ್ಚಿದ ಚಿತ್ರ "ಅಖಾಲೇರ್ ಶಂಧಾನೆ"

ಮೃಣಾಲ್ ಸೆನ್ರ ಚಿತ್ರ ಯಾನದಲ್ಲಿ ನಾನು ಬಹಳವಾಗಿ ಮೆಚ್ಚುವ ಚಿತ್ರ "ಅಖಾಲೇರ್ ಶಂಧಾನೆ"(1981 ಬಂಗಾಲಿ). ಈ ಚಿತ್ರದಲ್ಲಿ ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ತಮ್ಮ ಮಾಧ್ಯಮವಾದ ಸಿನಿಮಾ ಕ್ಷೇತ್ರದಲ್ಲಿನ ಬಿಂಬನ ಕ್ರಮವನ್ನೇ ಚಿಕಿತ್ಸಕ ದೃಷ್ಟಿ ಯಿಂದ ವಿಶ್ಲೇಷಿಸುತ್ತಾರೆ. 1943 ರ ಬಂಗಾಳದ ಕ್ಷಾಮವನ್ನೇ ಕಥೆಯಾಗುಳ್ಳ ಸಿನಿಮಾ ಮಾಡಲು ಚಿತ್ರತಂಡವೊಂದು ಹಳ್ಳಿಗೆ ಬರುತ್ತದೆ. ಆ ಕ್ಷಾಮದ ಬಗ್ಗೆ ತುಂಬ ಅನುಕಂಪವಿರುವ ಚಿತ್ರ ತಂಡ ಆ ಹಳ್ಳಿಯಲ್ಲಿ ಸಧ್ಯದಲ್ಲಿರುವ ಬಡತನಕ್ಕೆ ಸ್ಪಂದಿಸುವುದೇ ಇಲ್ಲ. ಗ್ರಾಹಕ ಸಂಸ್ಕೃತಿಯ ದಾಸರಾದ ಸಿನಿಮಾದ ಮಂದಿ ತಮ್ಮ ಕೊಳ್ಳುವ ಶಕ್ತಿಯಿಂದ ಆ ಗ್ರಾಮದಲ್ಲಿರುವ ಎಲ್ಲಾ ವಸ್ತುಗಳನ್ನು ಕೊಂಡು ಕೃತಕ ಕ್ಷಾಮಕ್ಕೆ ಕಾರಣರಾಗುತ್ತಾರೆ. ಚಿತ್ರ ಏಕ ಮುಖವಾಗಿ ಹರಿಯುವುದಿಲ್ಲ. ಆ ಹಳ್ಳಿಯ ಅನೇಕರು ದೂರ ದೃಷ್ಟಿಯಿಂದ ಮುಂದಾಗುವುದನ್ನು ಲೆಕ್ಕಕ್ಕೆ ತೆಗೆದು ಕೊಳ್ಳದೇ ಆ ಕ್ಷಣದಲ್ಲಿ ಸಿಗುವ ಅನುಕೂಲಗಳಿಗೆ ಮಾರು ಹೋಗುತ್ತಾರೆ. ಈ ಚಿತ್ರದ ಹೆಗ್ಗಳಿಗೆ ಏನೆಂದರೆ ಅದು ಸಾಮಾಜಿಕ ಕಾಳಜಿಯನ್ನು ಹೇಳುತ್ತಲೇ ಅದಕ್ಕೂ ಮೀರಿ ಕಲೆ ಮತ್ತು ಜೀವನದ ನಂಟಿನ ಬಗ್ಗೆ ಹಲವು ಗಹನವಾದ ಪ್ರಶ್ನೆಗಳನ್ನು ಎತ್ತುತ್ತದೆ. ಅದಕ್ಕೆ ಪೂರಕವಾದ ವಿನ್ಯಾಸವನ್ನೂ ಈ ಚಿತ್ರ ಹೊಂದಿದೆ. ಈ ದಶಕದ ಚಿತ್ರಗಳು ಮೃಣಾಲ್ ಸೆನ್ರಿಗೆ ಅಂತಾರಾಷ್ಟ್ರೀಯ ಮನ್ನಣೆಯನ್ನೂ ತಂದು ಕೊಟ್ಟಿವೆ. ಈ ಮೊದಲಿನ ಚಿತ್ರಗಳ ವಿಸ್ತಾರವಾದ ಹರಿವು ಈ ಚಿತ್ರಗಳಲ್ಲಿ ಸೀಮಿತವಾಗಿದೆ, ಆದರೆ ಆಳ ಅಧಿಕವಾಗಿದೆ.



ಮೃಣಾಲ್ ಸೆನ್ರ ಚಿತ್ರ ಜೀವನದ ಈ ಮೂರನೆಯ ಹಂತದಲ್ಲಿ ಕಥಾ ನಿರೂಪಣಾ ಕ್ರಮವನ್ನು ಮತ್ತೆ ಬದಲಿಸಿಕೊಳ್ಳುತ್ತಾರೆ. ಅದುವೇ ದಟ್ಟವಾದ ಮಾರ್ಕ್ಸಿಸ್ಟ್ ರಾಜಕೀಯ ಸಿದ್ಧಾಂತದ ನೆರಳಲ್ಲಿ ಕಥೆಯನ್ನು ವ್ಯಾಖ್ಯಾನಿಸುವುದರ ಬದಲು, ಯಾವುದೇ ನೇರ ಸೈದ್ಧಾಂತಿಕ ಛಾಯೆಯಿಲ್ಲದ ಒಂದು ಸಮದೂರತ್ವದಿಂದ ಕಥೆಯನ್ನು ಅವಲೋಕಿಸುವ ನಿರೂಪಣಾ ಕ್ರಮ. ಒಂದಕ್ಕೊಂದು ನೇರ ಸಂಬಂಧವಿಲ್ಲದ ತುಣುಕುಗಳನ್ನು ಜೋಡಿಸಿ ಕಥೆ ಹೇಳುವ ತಂತ್ರ ಕೈ ಬಿಟ್ಟು, ಅವಿಚ್ಛಿನ್ನವಾಗಿ ಹರಿಯುವ ಸರಳ ಕಥಾ ಸಂವಿಧಾನವನ್ನು ಪುನಃ ಬಳಸತೊಡಗುತ್ತಾರೆ. ಆದರೆ ಇಲ್ಲೂ ತಮ್ಮದೇ ಆದ ವಿಶಿಷ್ಟತೆಯನ್ನು ಉಳಿಸಿಕೊಳ್ಳುತ್ತಾರೆ. ಈ ಚಿತ್ರಗಳಲ್ಲಿ ಕಥೆಯು ಖಚಿತವಾದ, ಸ್ಪಷ್ಟವಾದ 'ಇಲ್ಲಿಗೆ ಕಥೆ ಮುಗಿಯಿತು' ಎನ್ನುವ ಅಂತ್ಯ ಇರುವುದಿಲ್ಲ. ತೆರೆದ ಮುಕ್ತಾಯ ವಿರುವಂತೆ ನೋಡಿಕೊಂಡು ಕಥೆಯ ಮುಂದುವರೆದ ಭಾಗವನ್ನು ಕಲ್ಪಿಸಿಕೊಳ್ಳುವುದಕ್ಕೆ ಪ್ರೇಕ್ಷಕನಿಗೆ ಆಹ್ವಾನ ನೀಡುವಂತಿರುತ್ತದೆ. ಈ ಘಟ್ಟದ ಮೃಣಾಲ್ ಸೇನ್ ರಲ್ಲಿ ಕಾಣುವುದು ಮಾಗಿದ, ಪಕ್ವವಾದ ಮನಸ್ಸು.ತಮ್ಮ ಅಭಿಪ್ರಾಯವನ್ನು ಪ್ರೇಕ್ಷಕನ ಮೇಲೆ ಹೇರದೇ, ಆತನನ್ನು ಒಂದು ಆರೋಗ್ಯಕರ ಸಂವಾದಕ್ಕೆ ಸ್ವಾಗತಿಸುವಂತಿರುತ್ತದೆ. ಸೈದ್ಧಾಂತಿಕ ಕಾರಣಕ್ಕಾಗಿ ಅವರ ದ್ವಿತೀಯ ಹಂತದ ಚಿತ್ರಗಳನ್ನು ನಾನು ಮೆಚ್ಚಿದರೂ ಕಲಾತ್ಮಕ ಅನುಭವಕ್ಕಾಗಿ ಮೆಚ್ಚುವುದು ಈ ಹಂತದ ಸಿನಿಮಾಗಳನ್ನೇ.



ಎಲ್ಲ ವಿಪ್ಲವಗಳಿಗೆ, ತಲ್ಲಣಗಳಿಗೆ ಮುಖಾಮುಖಿ

ಜಗತ್ತಿನ ಅನೇಕ ಮೇರು ನಿರ್ದೇಶಕರಲ್ಲಿ ಒಂದು ಹಂತ ದಾಟಿದ ಮೇಲೆ ಅವ್ಯಕ್ತವಾದ ಮಾನಸಿಕ ದಣಿವು ಕಂಡುಬಂದು ನಂತರದ ಚಿತ್ರಗಳು ಪೇಲವ ಅನ್ನಿಸ ತೊಡಗುತ್ತದೆ. ಇದು ಸಿನಿಮಾದ ಆಖ್ಯಾನಕ್ಕೆ ಅನ್ವಯವಾಗುವಂತೆ ಆಕೃತಿಗೂ ಅನ್ವಯವಾಗುತ್ತದೆ. ಮೃಣಾಲ್ ಸೆನ್ರ ಚಿತ್ರಗಳೂ ಇದಕ್ಕೆ ಹೊರತಾಗಲಿಲ್ಲ. ಕೊನೆ ಕೊನೆಯ ಚಿತ್ರಗಳಲ್ಲಿ ವೈಚಾರಿಕ ಸ್ಪಷ್ಟತೆ, ರಾಜಿಯಾಗದ ಮನೋಭಾವ, ಬದ್ಧತೆಗಳೂ ಪ್ರಕಟವಾದರೂ ಅವುಗಳಲ್ಲಿ ಸೇನ್ ರ ಸೂಕ್ಷ್ಮ ಒಳನೋಟ, ಘಟನೆಗಳನ್ನು ಪದರ ಪದರವಾಗಿ ಬಿಡಿಸಿ ವಿಶದಿಸುವ ಕ್ರಮ, ಕುಸುರಿ ಕೆಲಸ– ಇವೆಲ್ಲಾ ಬಾಡಿರುವುದು ಅನುಭವಕ್ಕೆ ಗೋಚರವಾಗುತ್ತದೆ. ಅದಕ್ಕೆ ಹಲವು ಕಾರಣಗಳನ್ನು ಕೊಡಬಹುದು. ವಯಸ್ಸಾದಂತೆ ಸಿನಿಮಾ ಕೃಷಿ ಬೇಡುವ ದೈಹಿಕ ಶ್ರಮವನ್ನು ನಿರ್ವಹಿಸಲಿಕ್ಕಾಗದಿರುವುದು ಒಂದನೆಯ ಕಾರಣ. ಅದಕ್ಕಿಂತಲೂ ದೊಡ್ಡ ಕಾರಣ ರಾಜಕಾರಣದಲ್ಲಿ ಹಾಗೂ ಉಪಭೋಗೀ ಸಂಸ್ಕೃತಿಯನ್ನು ಅಪ್ಪಿಕೊಂಡ ಸಮಾಜದಲ್ಲಿ ತಾವು ಧೃಢವಾಗಿ ನಂಬಿದ್ದ ಮಾರ್ಕ್ಸಿಸ್ಟ್ ವಿಚಾರಧಾರೆಯು ಅವಗಣನೆಗೆ ಒಳಗಾದದ್ದು. ಮಾರ್ಕ್ಸಿಸ್ಟ್ ಚಿಂತನೆ ಎಡವಿದ್ದೆಲ್ಲಿ ಎಂಬ ಚಿಂತನೆ ಅವರ ಕೊನೆಯ ಕೆಲವು ಸಿನಿಮಾಗಳಲ್ಲಿ ರೂಪಕಾತ್ಮಕವಾಗಿ ಕಂಡು ಬರುತ್ತದೆ.

ಭಾರತೀಯ ಚಿತ್ರರಂಗದಲ್ಲಿ ಹಲವು ಭಾಷೆಗಳಲ್ಲಿ ಚಿತ್ರ ಮಾಡಿದ ಖ್ಯಾತಿ ಮೃಣಾಲ್ ಸೇನ್ ರದ್ದು. ಬೆಂಗಾಲಿಯಲ್ಲಿ 17 ಚಿತ್ರ, ಹಿಂದಿಯಲ್ಲಿ 3 ಚಿತ್ರ, ಒರಿಯಾದಲ್ಲಿ 3 ಚಿತ್ರ, ತೆಲುಗಿನಲ್ಲಿ 1 ಚಿತ್ರ ಮಾಡಿರುತ್ತಾರೆ. ಒಟ್ಟಾರೆ ಅವರ ಚಿತ್ರಗಳನ್ನು ಅವಲೋಕಿಸಿದರೆ ನಾವು ಕಾಣುವುದಿಷ್ಟು. ಸಮಕಾಲೀನ ಬಂಗಾಳದಲ್ಲಿ– ಭಾರತದಲ್ಲಿ– ವಿಶ್ವದಲ್ಲಿ ಆಗುತ್ತಿರುವ ಎಲ್ಲ ವಿಪ್ಲವಗಳಿಗೆ, ತಲ್ಲಣಗಳಿಗೆ ನೇರವಾಗಿ ಮುಖಾಮುಖಿಯಾಗ ಬಯಸುವ ಅವರ ಮನೋವೃತ್ತಿ. ಕಥಾವಸ್ತುವಿನ ಮಗ್ಗುಲುಗಳನ್ನು ಶೋಧಿಸುತ್ತಾ, ಅದಕ್ಕನುಗುಣವಾಗಿ ಹೊಸಹೊಸಾ ಅಭಿವ್ಯಕ್ತಿ ಕ್ರಮವನ್ನು ಅರಸುತ್ತಾ ಹೋಗುವ ಅನ್ವೇಷಕ ಗುಣ. ಹಾಗಾಗಿ ಅವರ ಗೆಲುವು, ಸೋಲು ಎರಡೂ ಈ ಮಾರ್ಗದಲ್ಲೇ ಅಡಗಿ ಕುಳಿತಿವೆ. ಕೆಲವೊಂದಷ್ಟು ವಿಷಯಗಳು, ವಿನ್ಯಾಸಗಳು ಆ ಕಾಲಕ್ಕೆ ಹೊಸತು, ವಿಭಿನ್ನ ಅನ್ನಿಸಿದ್ದು ಇವತ್ತು ಹಿನ್ನೋಟದಲ್ಲಿ ತನ್ನ ಹೊಳಹನ್ನು ಕಳೆದು ಕೊಂಡಂತೆ ಅನ್ನಿಸಬಹುದು. ಅವರ ಕಾಣ್ಕೆ, ಹುಡುಕಾಟ ಮುಕ್ತ ಚಿಂತನೆಯ ಫಲವಾಗಿರದೇ, ಒಂದು ನಿರ್ದಿಷ್ಟ ಕೋನದಿಂದ ನೋಡಿದ ಪಾರ್ಶ್ವನೋಟ ಎಂದೂ ಅನ್ನಿಸ ಬಹುದು. ಏನೇ

ಪುಟ 14 ಕ್ಕೆ

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**